Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–49 | ಡಿಸೆಂಬರ್ 2–8, 2024 | ಪುಟ 16 | ರೂ.10/–
Volume-18 | Issue-49 | December 2-8, 2024 | Pages:16 | Price: 10/-





78 ರ ಹರೆಯದಲ್ಲಿ ನಮ್ಮ ಸಂವಿಧಾನಕ್ಕೆ ಮುತ್ತಿಗೆ

ಅದಾನಿ ಲಂಚ ಪ್ರಕರಣವೂ ದುಬಾರಿ ವಿದ್ಯುತ್ ದರವೂ



ಸಂಭಾಲ್: ನ್ಯಾಯಾಂಗದ ಅತಿರೇಕ

ಪಡಿತರ ರದ್ದು WTO ಜೊತೆಗಿನ ಒಪ್ಪಂದದ ಬಿಸಿ

ಮಹಾಯುತಿಯ 'ಮಹಾ' ವಿಜಯ ಹೇಗಾಯಿತು?

ಭಾರತದ ಕೈಗಾರಿಕಾ ಬೆಳವಣಿಗೆಗೆ ಜಾತಿಯ ತೊಡಕು: ವೈಶ್ಯ ಮೇಲ್ಮೆ, ಕುಶಲಕರ್ಮಿಗಳ ಕೀಳರಿಮೆ ಅಡ್ಡಿ

ಭಾಗ 7

ಜಿ.ಎನ್. ನಾಗರಾಜ್

ನೂಲು ಯಂತ್ರದ ಪ್ರಪ್ರಥಮ ಶೋಧಕ ಸ್ಪಿನ್ನಿಂಗ್ ಜೆನ್ನಿಯ ಹಾರ್ಗ್ರೀವ್ಸ್:

ಸ್ಪಿನ್ನಿಂಗ್ ಜೆನ್ನಿ 1756ರ ಕಾಲದ ಹೊಸ ಶೋಧ. ಕೈಗಾರಿಕಾ ಕ್ರಾಂತಿಯ ಉದ್ಘಾಟಕ. ಇದನ್ನು ಶೋಧಿಸಿದವನು ಹಾರ್ಗ್ರೀವ್ಸ್ ಎಂಬ ಬ್ರಿಟನ್ನ ಜವಳಿ ಉತ್ಪಾದನೆಯ ನೆಲೆಯಾಗಿದ್ದ ಲ್ಯಾಂಕಾಶೈರ್ ಪ್ರದೇಶದ ನೇಕಾರ ಕುಟುಂಬದ ಕುಡಿ. ಬಡಗಿಯಾಗಿಯೂ ಕೆಲಸ ಮಾಡುತ್ತಿದ್ದವನು. ನೂಲುವ ಕ್ರಿಯೆಯನ್ನು, ಚರಕದ ಕೆಲಸವನ್ನು ಸೂಕ್ಷ್ಮವಾಗಿ ಗಮನಿಸಿ ಆಗ ಇದ್ದ ಒಂದೊಂದೇ ಕದರಿನಲ್ಲಿ ನೂಲುವ ಬದಲಾಗಿ ಒಂದೇ ಬಾರಿಗೆ 12ರಿಂದ 18 ಕದಿರುಗಳನ್ನು ಉಪಯೋಗಿಸಿ ನೂಲುವ ಯಂತ್ರವನ್ನು ರೂಪಿಸಿದನು. ಇದು ಬಟ್ಟೆ ತಯಾರಿಕೆಯಲ್ಲಿ ಚಾಲ್ತಿಗೆ ಬಂದ ಮೊದಲ ಆಧುನಿಕ ಯಂತ್ರ.

ಈ ಯಂತ್ರ ಮಾನವ ಇತಿಹಾಸದಲ್ಲಿ ಒಂದು ಸಣ್ಣ ಹೆಜ್ಜೆಯಾದರೂ ಮುಖ್ಯ ಹೆಜ್ಜೆ. ಏಕೆಂದರೆ ಒಬ್ಬ ಕುಶಲಕರ್ಮಿಯ ವೈಯಕ್ತಿಕ ಶ್ರಮದ ಮಾನವನ ಸಹಜ ಮಿತಿಯನ್ನು ಮೀರಿ ಹಲವು ಪಟ್ಟು ಉತ್ಪಾದನೆ ಮಾಡಲು ಈ ಯಂತ್ರ ಅವಕಾಶ ನೀಡಿತು. ಇದು ನೂಲಿನ ಬೆಲೆಯನ್ನು ಗಣನೀಯವಾಗಿ ಇಳಿಸಿತು. ಇದರ ಹಲವು ಪ್ರತಿಗಳ ಮಾರಾಟ ಹಾರ್ಗ್ರೀವ್ಸ್‌ನ ಆದಾಯ ಹೆಚ್ಚಿಸಿತು. ಇದನ್ನು ಹೂಡಿ ಅವನು ಒಂದು ಸಣ್ಣ ಗಿರಣಿಯನ್ನು ಆರಂಭಿಸಿ ಆದಾಯ ಹೆಚ್ಚಿಸಿಕೊಂಡ.

ಈ ಯಂತ್ರ ಮುಂದೆ ಹಲವು ರೀತಿಯ ಸುಧಾರಣೆಗೆ ಒಳಗಾಯಿತು. ಒಂದೇ ಬಾರಿಗೆ 120 ಕದಿರುಗಳನ್ನು ಉಪಯೋಗಿಸುವ ನೂಲು ಯಂತ್ರಗಳು ರೂಪುಗೊಂಡವು. ಇಲ್ಲಿ ಮುಂದೆ ವಿವರಿಸಲಾದಂತೆ ಮಾನವ ಶ್ರಮವೇ ಅಗತ್ಯವಿಲ್ಲದಂತೆ ಮಾಡುವ ಹಲವು ಸುಧಾರಣೆಗಳು ಈ ಯಂತ್ರದ ಉಪಯುಕ್ತತೆಯನ್ನು ಹಲ ಹಲವು ಪಟ್ಟು ಹೆಚ್ಚಿಸಿದವು.

ಮಾನವ ಶ್ರಮ ಅಗತ್ಯವಿಲ್ಲದ ನೂಲು ಯಂತ್ರದ ಶೋಧಕ ಆರ್ಕ್‌ರೈಟ್

ಆರ್ಕ್ ರೈಟ್ 1768ರಲ್ಲಿ ಉತ್ಪಾದನಾ ವಿಧಾನದಲ್ಲಿ ಬಹುದೊಡ್ಡ ಬದಲಾವಣೆಯನ್ನು ತಂದ ನೂಲುವ ಯಂತ್ರದ ಸಂಶೋಧಕ. ಇವನು ಬ್ರಿಟನ್ನ ಹತ್ತಿ ಜವಳಿ ಕೈಗಾರಿಕೆಯ ನೆಲೆವನೆಯಾದ ಲಂಕಾಶೈರ್ನ ಒಂದು ಹಳ್ಳಿಯ ಒಬ್ಬ ಟೈಲರ್ನ ಮಗ. ಟೈಲರ್ಗಳ ಸಂಘ (ಗಿಲ್ಡ್– ದಾಸಿಮಯ್ಯನ ಭಾಷೆಯಲ್ಲಿ ಗೊತ್ತಳಿ)ದ ಮುಖ್ಯಸ್ಥಾನದಲ್ಲಿದ್ದವನು. ಶಾಲಾ ಶಿಕ್ಷಣ ನೀಡುವ ಸಾಮರ್ಥ್ಯವಿಲ್ಲದ ತಂದೆ ಆರ್ಕ್‌ರೈಟ್ನ ಚಿಕ್ಕಮ್ಮನ ಮೂಲಕ ಕೇವಲ ಓದು ಬರಹ ಕಲಿಸಿದರು. ನಂತರ ಬೇರೊಂದು ಊರಿನಲ್ಲಿ ಒಬ್ಬ ಕ್ಷೌರಿಕನ ಬಳಿ ಸಹಾಯಕನಾಗಿ ಕೆಲಸಕ್ಕೆ ಸೇರಿಸಿದರು. ಅದರಲ್ಲಿ ಪರಿಣತಿ ಪಡೆದು ಅದರಲ್ಲಿಯೇ ಹೊಸ ರೀತಿಯ ವಿಗ್ ಮೊದಲಾದ ಒಂದೆರಡು ಹೊಸ ಶೋಧ ಮಾಡಿದ ಮೇಲೆ ಮತ್ತೆ ತನ್ನ ಜವಳಿ ಕೈಗಾರಿಕೆಯ ನೆಲೆವನೆಗೆ ಬಂದ. ಅಲ್ಲಿ ನೂಲುವ, ನೇಯುವ ಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತಾ, ಅಲ್ಲಿಯ ಉತ್ಪಾದನೆಯ ಸಮಸ್ಯೆಗಳನ್ನು ಗಮನಿಸಿದ, ಅನುಭವಿಸಿದ.

ಗಡಿಯಾರ ತಯಾರಕನೊಬ್ಬನ ಜೊತೆ ಸೇರಿ ಹಾರ್ಗ್ರೀವ್ಸ್ ಆ ವೇಳೆಗಾಗಲೇ ಶೋಧಿಸಿದ್ದ ನೂಲುವ ಯಂತ್ರವನ್ನು ಉತ್ತಮ ಪಡಿಸಿದ. ಮಾನವ ಶ್ರಮದ ಅಗತ್ಯವೇ ಇಲ್ಲದೆ ಕುದುರೆಗಳನ್ನು, ಹರಿವ ತೊರೆ, ನದಿಗಳ ಶ್ರಮವನ್ನು ಬಳಸಿ ನೂಲುವುದನ್ನು ಸಾಧ್ಯ ಮಾಡುವ ಯಂತ್ರ ಅದು. ಹಾಗೆಯೇ ಹತ್ತಿಯಿಂದ ಬೀಜಗಳನ್ನು ಬಿಡಿಸುವ ಯಂತ್ರವನ್ನೂ ಸುಧಾರಿಸಿದ.

ಈ ಎಲ್ಲ ಶೋಧಗಳಿಂದ ಸಂಪಾದಿಸಿದ ಗಣನೀಯ ಹಣವನ್ನು ಬಳಸಿ ನದೀ ತೀರವೊಂದರಲ್ಲಿ ಜಲಶಕ್ತಿಯನ್ನು ಬಳಸಿದ ಕೈಗಾರಿಕಾ ರೂಪದ, ನೂರಾರು ಕಾರ್ಮಿಕರನ್ನು ಕೆಲಸಕ್ಕೆ ಹಚ್ಚುವ ಆಧುನಿಕ ಜವಳಿ ಗಿರಣಿಯನ್ನು ಜಗತ್ತಿನಲ್ಲೇ ಮೊತ್ತ ಮೊದಲು ಸ್ಥಾಪಿಸಿದ ಕೀರ್ತಿ ಇವನದು. ಅದರ ಲಾಭದಿಂದ ಹಲವೆಡೆಗಳಲ್ಲಿ ಇಂತಹ ಜವಳಿ ಗಿರಣಿಗಳನ್ನು ಸ್ಥಾಪಿಸಿದ. ಅವನಿಗೆ ಬ್ರಿಟನ್ ರಾಜ ಸರ್ ಪದವಿ (ನೈಟ್ ಹುಡ್) ನೀಡಲಾಗಿ ಸರ್ ಆರ್ಕ್‌ರೈಟ್ ಎಂದು ಹೆಸರಾದ.

ಕೈಗಾರಿಕಾ ಕ್ರಾಂತಿಯ ಹರಿಕಾರ ಉಗಿಯಂತ್ರದ ಸಂಶೋಧಕ ಜೇಮ್ಸ್ ವಾಟ್

ಉಗಿ ಯಂತ್ರ ಅದೆಷ್ಟು ಬಗೆ ಬಗೆಯಲ್ಲಿ ಕೈಗಾರಿಕೆಗಳಲ್ಲಿ ಉತ್ಪಾದನಾ ವಿಧಾನದ ಕ್ರಾಂತಿ, ರೈಲು, ಹಡಗು ಸಾರಿಗೆ ಕ್ರಾಂತಿ, ಪ್ರಯೋಗಾಲಯಗಳಲ್ಲಿ ಇನ್ನೆಷ್ಟು! ಇದನ್ನು ಶೋಧಿಸಿದ ಜೇಮ್ಸ್ ವಾಟ್ ಒಬ್ಬ ಹಡಗು ಕಟ್ಟುವವನ ಮಗ. ಹಲವು ಉತ್ಪಾದನೆಗಳಿಗೆ ಕೈ ಹಾಕಿ ವರ್ಕ್‌ಶಾಪ್ಗಳನ್ನು ಸ್ಥಾಪಿಸಿದ್ದವ. ಜೇಮ್ಸ್‌ವಾಟ್ ಸೀಮಿತ ಶಿಕ್ಷಣ, ಗಣಿತದಲ್ಲಿ ಆಸಕ್ತಿಯ ನಂತರ ವಿವಿಧ ರೀತಿಯ ಗಡಿಯಾರ, ಕೈ ಗಡಿಯಾರಗಳನ್ನು, ಥರ್ಮಾಮೀಟರ್ ಮೊದಲಾದ ಹವಾಮಾನ ಅಳತೆಯ ಮಾಪಕಗಳು, ಕಾರುಗಳಲ್ಲಿ ಚಾಲಕನ ಮುಂದೆ ಇರುವ ಪೆಟ್ರೋಲ್, ವೇಗ ಮತ್ತಿತರ ಅಂಶಗಳನ್ನು ತಿಳಿಸುವ ಮಾಪಕಗಳನ್ನು ತಯಾರಿಸುವ ಕೆಲಸದಲ್ಲಿ ತೊಡಗಿದ. ಗ್ಲಾಸ್ಗೋ ವಿವಿಯಲ್ಲಿ ಅಲ್ಲಿಯ ಪ್ರಯೋಗಾಲಯಗಳಿಗೆ ಅಗತ್ಯವಾದ ಉಪಕರಣಗಳನ್ನು ತಯಾರಿಸುವ ಕೆಲಸ ಸಿಕ್ಕಿತು.

ಈ ವಿವಿಯಲ್ಲಿದ್ದಾಗಲೇ ಅವನಿಗೆ ಉಗಿ ಯಂತ್ರಗಳಲ್ಲಿ ಆಸಕ್ತಿ ಹುಟ್ಟಿತು. ಅವನ ಮನೆಯ ಹಿಂಭಾಗದ ಕಿರುಮನೆಯಲ್ಲಿ ಪ್ರಯೋಗಗಳನ್ನು ಮಾಡತೊಡಗಿದ. ಈ ಕೆಲಸದಲ್ಲಿ ಹಲವರ ಶೋಧಗಳು ನೆರವಿಗೆ ಬಂದವು. ಮತ್ತೊಬ್ಬ ಕಬ್ಬಿಣದ ಕುಲುಮೆಗಳಲ್ಲಿ ಕೆಲಸ ಮಾಡಿ ಎರಕಗಳ ತಯಾರಿಕೆಯಲ್ಲಿ ಅನುಭವ ಪಡೆದಿದ್ದ ಕುಶಲ ಕೆಲಸಗಾರನೊಬ್ಬನ ಸಲಹೆ, ಸಹಕಾರವೂ ಸಿಕ್ಕಿತು.

ವಾಚ್ಗಳು, ಇನ್ನಿತರ ಪ್ಯಾನಲ್ ಉಪಕರಣಗಳ ಈ ತಯಾರಕನನ್ನು ಹೆಸರಾಂತ ಭೌತಶಾಸ್ತ್ರಜ್ಞರು, ವಿಶ್ವಪ್ರಸಿದ್ಧ ಅರ್ಥಶಾಸ್ತ್ರಜ್ಞ ಆ?ಯಡಮ್ ಸ್ಮಿತ್ ಮಿತ್ರತ್ವ ಬೆಳೆಯಿತು.

ಅಲ್ಲಿವರೆಗೆ ಮಾನವ ಶ್ರಮ, ಪ್ರಾಣಿಗಳ ದುಡಿಮೆ, ನೀರಿನ ಹರಿವಿನ ಪ್ರಯೋಗ, ಗಾಳಿ ಚಕ್ರಗಳ ಉಪಯೋಗ ಮಾತ್ರ ಕಂಡಿದ್ದ, ಅವುಗಳ ಸೀಮಿತತೆಗೊಳಗಾಗಿ ಉತ್ಪಾದನೆಯಲ್ಲಿ ತೊಡಗಿದ್ದ ಜಗತ್ತು, ಮೊತ್ತ ಮೊದಲು ಆ ಮೇರೆಗಳನ್ನು ಮೀರಿದ ಉತ್ಪಾದನೆಯ ಕ್ರಾಂತಿಯ ಸಾಧನವಾಯಿತು.

ಜಲಶಕ್ತಿ ಒಂದು ಬಲಯುತ ಶಕ್ತಿ ಸಾಧನವೇ. ವಿದ್ಯುತ್ ಉತ್ಪಾದನೆಗೆ ಜಲಶಕ್ತಿಯನ್ನು ಉಪಯೋಗಿಸುವ ಮೊದಲು ನೇರವಾಗಿ ಕೈಗಾರಿಕಾ ಉತ್ಪಾದನೆಯಲ್ಲಿ ಅದರ ಉಪಯೋಗ ಒಂದು ನೆಗೆತವೇ. ಆದರೆ ಅದರ ಉಪಯೋಗ ಕೇವಲ ನದಿ ತೊರೆಗಳ ಪಕ್ಕದಲ್ಲಿ ಮಾತ್ರ. ವರ್ಷದಲ್ಲಿ ಎಲ್ಲ ಕಾಲಮಾನಗಳಲ್ಲಿ ಲಭ್ಯವಿರುವುದಿಲ್ಲ. ಉತ್ಪಾದನೆಯ, ಮಾರುಕಟ್ಟೆಯ ಅಗತ್ಯಗಳಿಗೆ ತಕ್ಕಂತೆ ಒಗ್ಗಿಸಿಕೊಳ್ಳಲಾಗುವುದಿಲ್ಲ. ಸಾಮಾನ್ಯವಾಗಿ ಬಳಕೆದಾರರು ಹೆಚ್ಚಿರುವ ನಗರಗಳಿಂದ, ವಾಣಿಜ್ಯ ಕೇಂದ್ರಗಳಿಂದ, ಬಂದರುಗಳಿಂದ ದೂರದ ಗ್ರಾಮೀಣ ಪ್ರದೇಶಗಳಲ್ಲಿ ಉತ್ಪಾದನಾ ಕೇಂದ್ರಗಳು.

> **ಬ್ರಿಟನ್ ನಲ್ಲಾದಂತೆ ಭಾರತದಲ್ಲಿ ಹೊಸ ಯಂತ್ರಗಳ ಶೋಧಗಳನ್ನು ಏಕೆ ಮಾಡಲಾಗಲಿಲ್ಲ? ಅಂತಹ ಕೈಗಾರಿಕಾ ಕ್ರಾಂತಿ ಇಲ್ಲೇಕೆ ಸಂಭವಿಸಲಿಲ್ಲ? ಜಾತಿ ವ್ಯವಸ್ಥೆಯು ಭಾರತದ ಆರ್ಥಿಕ ಬೆಳವಣಿಗೆ, ಕೈಗಾರಿಕಾ ಬೆಳವಣಿಗೆ, ಹೊಸ ಯಂತ್ರಗಳ ಶೋಧದಲ್ಲಿ ಕೂಡಾ ಎಂಥಾ ಘೋರ ಪರಿಣಾಮ ಬೀರಿದೆ ಎಂಬುದು ನಮ್ಮ ದೇಶದ ಜಡ್ಡುಬಿದ್ದ ಜಾತಿಬದ್ಧ ಮನಸ್ಸುಗಳಿಗೆ ತಟ್ಟಲು ಜಾತಿ ವ್ಯವಸ್ಥೆಯಿಂದ ಪೀಡಿತವಾಗದ ಬ್ರಿಟನ್ ದೇಶದೊಂದಿಗೆ ತುಲನಾತ್ಮಕ ಅಧ್ಯಯನದ ಅವಶ್ಯಕತೆ ಇದೆ.**

ವಾಯುಶಕ್ತಿಯ ನೇರ ಉಪಯೋಗವೂ ಕೂಡಾ ಕಾಲಮಾನ ಮತ್ತು ವಸತಿಗಳಿಂದ ದೂರವಾಗಿ ಸೀಮಿತವೇ. ಆದರೆ ಉಗಿಯಂತ್ರಗಳ ಬಳಕೆ ಈ ಹಲವು ಮಿತಿಗಳನ್ನು ಹೊಡೆದು ಹಾಕಿತು. ನಗರಗಳಲ್ಲಿ, ಬಂದರುಗಳಲ್ಲಿ ಎಲ್ಲೆಂದರಲ್ಲಿ ಕೈಗಾರಿಕಾ ಉತ್ಪಾದನೆ ಸಾಧ್ಯವಾಯಿತು. ಎಷ್ಟು ಪ್ರಮಾಣದಲ್ಲಿ ಬೇಕೋ ಆ ಪ್ರಮಾಣದಲ್ಲಿ ಉತ್ಪಾದನೆಗೆ ಬಳಸುವ ಮೂಲಕ ಮಾನವ ನಿಯಂತ್ರಣಕ್ಕೆ ಒಳಪಟ್ಟಿತು. ಅವೆಲ್ಲಕ್ಕಿಂತ ಮಿಗಿಲಾಗಿ, ಸಾರಿಗೆ ಸಂಚಾರದಲ್ಲಿ ಉಗಿಯಂತ್ರಗಳ ಉಪಯೋಗ ವೇಗದ, ದೊಡ್ಡ ಪ್ರಮಾಣದ ಸರಕು ಸಾಗಣೆ ಸಾಧ್ಯವಾಯಿತು. ಮಾರುಕಟ್ಟೆ ವಿಶ್ವವ್ಯಾಪಿಯಾಗಿ ವಿಸ್ತರಿಸಿತು. ಹೀಗಾಗಿ ಉಗಿಯಂತ್ರ ಮಾನವ ಇತಿಹಾಸದಲ್ಲಿ ಒಂದು ದೊಡ್ಡ ನೆಗೆತ.

ಇದೇನು? ಭಾರತದ ಕೈಗಾರಿಕಾ ಬೆಳವಣಿಗೆಯಲ್ಲಿ ಜಾತಿಯ ತೊಡಕುಗಳ ಬಗ್ಗೆ ಬರೆಯ ಹೊರಟವರು ಬ್ರಿಟನ್ನ ಯಂತ್ರ ಶೋಧಗಳ, ಯಂತ್ರ ಶೋಧಕರ ಬಗ್ಗೆ ಪುರಾಣ ಮಾಡುತ್ತಿದ್ದೀರಿ ಎಂದು ಓದುಗರು ಆಕ್ಷೇಪಿಸಬಹುದು. ಜಾತಿ ವ್ಯವಸ್ಥೆ ಭಾರತದ ಆರ್ಥಿಕ ಬೆಳವಣಿಗೆ, ಕೈಗಾರಿಕಾ ಬೆಳವಣಿಗೆ, ಹೊಸ ಯಂತ್ರಗಳ ಶೋಧದಲ್ಲಿ ಕೂಡಾ ಎಂಥಾ ಘೋರ ಪರಿಣಾಮ ಬೀರಿದೆ ಎಂಬುದು ನಮ್ಮ ದೇಶದ ಜಡ್ಡುಬಿದ್ದ ಜಾತಿಬದ್ಧ ಮನಸ್ಸುಗಳಿಗೆ ತಟ್ಟಲು ಜಾತಿ ವ್ಯವಸ್ಥೆಯಿಂದ ಪೀಡಿತವಾಗದ ದೇಶದೊಂದಿಗೆ ತುಲನಾತ್ಮಕ ಅಧ್ಯಯನ ಅವಶ್ಯ.

ಭಾರತದಲ್ಲಿ ಇಂತಹ ಶೋಧಗಳನ್ನು ಏಕೆ ಮಾಡಲಾಗಲಿಲ್ಲ?

ಮೇಲೆ ಕೇವಲ ಬ್ರಿಟನ್ನ ಕೈಗಾರಿಕಾ ಬೆಳವಣಿಗೆಯಲ್ಲಿ ಮಾತ್ರವಲ್ಲ ವಿಶ್ವಾದ್ಯಂತದ ಕೈಗಾರಿಕಾ ಕ್ರಾಂತಿಯ ಪ್ರಮುಖ ಹಂತಗಳಿಗೆ ಕಾರಣವಾದ ಮೂರು ಯಂತ್ರಗಳ ಶೋಧಕರ ಬಗ್ಗೆ ವಿವರಿಸಲಾಗಿದೆ. ಮುಖ್ಯ ಪ್ರಶ್ನೆ ಏನೆಂದರೆ, ಭಾರತದಲ್ಲಿ ಇಂತಹ ಶೋಧಗಳನ್ನು ಏಕೆ ಮಾಡಲಾಗಲಿಲ್ಲ? ಇಂತಹ ಕೈಗಾರಿಕಾ ಕ್ರಾಂತಿ ಏಕೆ ಸಂಭವಿಸಲಿಲ್ಲ? ಈ ಪ್ರಶ್ನೆಯನ್ನು ಹೀಗೆ ಕೂಡಾ ಕೇಳಿಕೊಳ್ಳಬಹುದು: ಇಂತಹ ಶೋಧಗಳು ಭಾರತದಲ್ಲಿ ಸಂಭವಿಸಬಹುದೆಂದು ಊಹಿಸಲಾದರೂ ಸಾಧ್ಯವೇ?



ಮೇಲೆ ಉದಾಹರಿಸಿರುವ ಮೂರು ಜನ ಶೋಧಕರ ಹಿನ್ನೆಲೆಯನ್ನು ಗಮನಿಸಿದರೆ ಸಹಜವಾಗಿ ಈ ಅನುಮಾನ ಉದ್ಭವಿಸುತ್ತದೆ. ಆ ಮೂರೂ ಜನ ಕುಶಲ ಕೆಲಸಗಾರ ಕುಟುಂಬಗಳಲ್ಲಿ ಬೆಳೆದವರು. ಭಾರತದಲ್ಲಿ ಕೂಡ ಜಾತಿ ವ್ಯವಸ್ಥೆಯ ಕಾರಣ ಹಲವಾರು ತಲೆಮಾರುಗಳ ಕಾಲ ಒಂದು ವಿಭಾಗದ ಕುಶಲ ಕರ್ಮಿಗಳು ಆಯಾ ವಿಭಾಗದ ಕುಟುಂಬದಲ್ಲಿಯೇ ಬೆಳೆಯುತ್ತಾರೆ. ಆದರೆ ಮುಖ್ಯ ವ್ಯತ್ಯಾಸ ಜಾತಿ ಪದ್ಧತಿಯ ವಿಭಜನೆ ಮತ್ತು ಅದರ ಮೇಲು ಕೀಳುಗಳು. ಭಾರತದ ಕುಶಲಕರ್ಮಿಗಳೆಲ್ಲ ಶೂದ್ರರು ಮಾತ್ರವಲ್ಲ, ಅದರಲ್ಲಿಯೇ ಕೆಳಜಾತಿಯವರು. ಈ ಕೆಳ ಜಾತಿಗಳಲ್ಲೂ ಕ್ಷೌರಿಕರು, ಅಗಸರಂತೆ ಕೆಲವು ಅತಿ ಕೆಳಜಾತಿಗಳು. ಚಮ್ಮಾರರಂತೂ ಮುಟ್ಟಬಾರದವರು.

ಭಾರತದ ಕುಶಲಕರ್ಮಿಗಳು ತೆಳುವಾದ ಪಾರದರ್ಶಕ ಮಸ್ಲಿನ್ ಬಟ್ಟೆಯನ್ನು ಹತ್ತಿಯಿಂದಲೇ ನೇಯುವಷ್ಟು ಪರಿಣತರಾಗಿದ್ದರೂ ಕೂಡಾ, ಸಾವಿರಾರು ವರ್ಷಗಳ ಕಾಲ ಒಂದೇ ರೀತಿಯ ಚರಕ, ಮಗ್ಗಗಳನ್ನೇ, ಸರಳವಾದ ಕೈ ಕಸುಬಿನ ಉಪಕರಣಗಳನ್ನೇ ಬಳಸುತ್ತಿದ್ದಾರೆ. ಅವರ ಉತ್ಪಾದನೆಯ ಉತ್ಕೃಷ್ಟತೆ ಕೇವಲ ಅವರು ಒಂದು ನಿರ್ದಿಷ್ಟ ಕುಶಲಕರ್ಮಿ ಜಾತಿಯಲ್ಲಿ ಹುಟ್ಟಿದ್ದರಿಂದ ಸಣ್ಣ ವಯಸ್ಸಿನಿಂದಲೇ ರೂಢಿಸಿಕೊಂಡ ಕೈಚಳಕ, ಮಾಡಿದ್ದನ್ನೇ ದಶಕಗಟ್ಟಲೆ ಪುನರಾವರ್ತಿಸುತ್ತಾ ಬರುವುದರಿಂದ ಬರುವ ಅನುಭವ, ಕಣ್ಣಿನ ಸೂಕ್ಷ್ಮತೆ ಮುಂತಾದವುಗಳಿಂದ ಪಡೆದದ್ದೇ ಹೊರತು ಉಪಕರಣಗಳನ್ನು ಉತ್ತಮಪಡಿಸುವುದರಿಂದ ಅಲ್ಲ. ಇಂತಹ ವೃತ್ತಿ ಪರಿಣತಿಯೇ ಕುಶಲಕರ್ಮಿಗಳಲ್ಲಿ ವಂಶಾನುಪರಂಪರೆಯ ಜಾತಿಗಳನ್ನು ಸೃಷ್ಟಿಸಿತು.

ಒಂದೇ ಉತ್ಪನ್ನ ತಯಾರಿಸುವವರ ನಡುವೆಯೇ ಉಪ ಜಾತಿಗಳ ಸೃಷ್ಟಿ

ಲೋಹ ಕೆಲಸ ಮಾಡುವವರ ನಡುವೆ ಹಲವು ಸಾಮಾನ್ಯ ಕೌಶಲ್ಯ, ಜ್ಞಾನಗಳಿದ್ದರೂ ಕಮ್ಮಾರ, ಕಂಚುಗಾರ, ಅಕ್ಕಸಾಲಿ ಎಂಬ ಬೇರೆ ಬೇರೆ ಜಾತಿಗಳು. ಅವರ ನಡುವೆ ಅಕ್ಕಸಾಲಿ ಮೇಲ್ಜಾತಿ, ಕಮ್ಮಾರ ಎಲ್ಲರಿಗಿಂತ ಕೆಳಜಾತಿ. ಹೀಗೆ ಮೇಲು ಕೀಳಾಗಿ ಪರಸ್ಪರ ಸಂಪರ್ಕವಿಲ್ಲದಂತೆ ವಿಭಜನೆಗೊಂಡವು. ಒಂದೇ ಉತ್ಪನ್ನ ತಯಾರಿಸುವವರ ನಡುವೆಯೇ ವಿವಿಧ ಹಂತಗಳ ಕೆಲಸ ಮಾಡುವವರ ನಡುವೆ ಬೇರೆ ಬೇರೆ ಜಾತಿ ಉಪಜಾತಿಗಳಾಗಿ ವಿಭಜನೆಯಾಯಿತು. ಮುದ್ದೆಗಮ್ಮಾರ ಕಬ್ಬಿಣದ ಅದಿರನ್ನು ಹೊರತೆಗೆದು ಬೀಡು ಕಬ್ಬಿಣವನ್ನು ತಯಾರಿಸುವವನಾದರೆ, ಅದನ್ನು ರೈತರ, ಇತರ ಕುಶಲಕರ್ಮಿಗಳ ಉಪಕರಣಗಳನ್ನಾಗಿ ತಯಾರಿ ಮಾಡಿಕೊಡುವ ಊರು ಕಮ್ಮಾರ ಬೇರೆ ಉಪಜಾತಿ. ಬಟ್ಟೆ ತಯಾರಿಸುವವರ ನಡುವೆ ಬೆಳೆಯಿಂದ ಪಡೆದ ಹತ್ತಿಯಿಂದ ಬೀಜ ಬಿಡಿಸಿ ಹಸನು ಮಾಡುವವರು ಬೇರೆ, ನೂಲುವವರು, ನೇಯುವವರು ಬೇರೆ, ಬಣ್ಣ ಹಾಕುವವರು ಬೇರೆ ಜಾತಿಗಳಾಗಿ ವಿಂಗಡನೆಯಾದರು. ಅದರಲ್ಲಿ ಹತ್ತಿ ಬಟ್ಟೆ ನೇಯುವವರು, ರೇಷ್ಮೆ ಬಟ್ಟೆ ನೇಯುವವರು ಬೇರೆ ಬೇರೆ. ಉಣ್ಣೆ ಕಂಬಳಿ ತಯಾರಿಸುವವರಂತೂ ಬಹಳ ಕೆಳಗೆ. ಹೊಸ ಕೌಶಲ್ಯಗಳ ಅಗತ್ಯ ಬಂದಾಗ ಹೊಸ ಜಾತಿಗಳು, ಉಪಜಾತಿಗಳು ಉದ್ಭವಿಸಿದವು. ಕಲಾಯಿ ಮಾಡುವವರು, ಹತ್ತಿಯ ಜಮಖಾನೆಗಳನ್ನು ತಯಾರು ಮಾಡುವವರು ಇತ್ಯಾದಿ ಬೇರೆ ಉಪಜಾತಿಗಳಾದವು.

ಈ ವಿಭಜನೆಗಳ ಕಾರಣ ಒಂದು ರೀತಿಯ ಕೌಶಲ್ಯ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತಿತ್ತು. ಕೌಶಲ್ಯ

ಪುಟ 15 ಕ್ಕೆ

ಸಂವಿಧಾನವನ್ನು ಇವರು ಟೀಕಿಸಿದರೆ ಎಚ್ಚರ ವಹಿಸಬೇಕು ಹೊಗಳಿದರೆ ಕಟ್ಟೆಚ್ಚರ ವಹಿಸಬೇಕು

ಸಂಪಾದಕೀಯ

ಭಾರತ ದೇಶವು ಆಧುನಿಕ ಸಂವಿಧಾನವನ್ನು ಅಂಗೀಕರಿಸಿ ನವೆಂಬರ್ 26, 2024ಕ್ಕೆ 75 ವರ್ಷಗಳಾದವು. ಈ ಮಹತ್ವದ ಸಂದರ್ಭದ ಹಿಂದೆ–ಮುಂದೆ ಭಾರತದ ಸಂವಿಧಾನದ ಬಗೆಗೆ ಹಲವು ಬಗೆಯ ಚರ್ಚೆ, ವಾದ ವಿವಾದಗಳು ನಡೆಯುತ್ತಿವೆ. ಸಂವಿಧಾನದ ಪ್ರಸ್ತಾಪನೆಗೆ 1976ರಲ್ಲಿ ತರಲಾದ ಸೆಕ್ಯುಲರಿಸಂ(ಧರ್ಮನಿರಪೇಕ್ಷತೆ), ಸೋಷಿಯಲಿಸಂ(ಸಮಾಜವಾದ), ಸಮಗ್ರತೆ ಎಂಬ ಪದಗಳ ತಿದ್ದುಪಡಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸರ್ವೋಚ್ಚ ನ್ಯಾಯಾಲಯ ಇದೇ 2024 ನವೆಂಬರ್ 25ರಂದು ವಜಾಗೊಳಿಸಿದೆ. ಆದರೆ ಈ ಮೌಲ್ಯಗಳ ಮೇಲೆ, ಈ ಸಂವಿಧಾನದ ಒಂದು ಮೂಲತತ್ವವಾದ ಜಾತ್ಯತೀತತೆ(ಧರ್ಮ ನಿರಪೇಕ್ಷತೆ) ಮೇಲೆ ಬಲಪಂಥೀಯ ಶಕ್ತಿಗಳು ತೀವ್ರವಾದ ದಾಳಿಯನ್ನು ನಡೆಸುತ್ತಿರುವುದು ಇತ್ತೀಚಿನ ಈ ಬೆಳವಣಿಗೆಯಲ್ಲಿ ಪ್ರಧಾನವಾಗಿ ಕಂಡು ಬರುತ್ತಿದೆ.

2024 ನವೆಂಬರ್ 22ರಂದು ಬೆಂಗಳೂರಿನಲ್ಲಿ ವಿಶ್ವ ಹಿಂದೂ ಪರಿಷತ್ ಸಂಘಟಿಸಿದ್ದ ಸಂತ ಸಮಾವೇಶದ ನಂತರ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ "ಸ್ವಾತಂತ್ರ್ಯಕ್ಕೆ ಮುಂಚೆ ಭಾರತವು ಒಂದು ಹಿಂದೂ ರಾಷ್ಟ್ರವಾಗಿತ್ತು. ಸ್ವಾತಂತ್ರ್ಯ ನಂತರ ಜಾತ್ಯತೀತ ದೇಶವಾಯಿತು, ಈಗ ಮತ್ತೆ ನಮ್ಮನ್ನು ಗೌರವಿಸುವ ಸಂವಿಧಾನ ಜಾರಿಗೆ ಬರಬೇಕು." ಎಂದು ಹೇಳಿದ್ದಾರೆ.

ನವೆಂಬರ್ 25ರಂದು ಭಾರತೀಯ ಕಿಸಾನ್ ಸಂಘದ ಕಾರ್ಯಕ್ರಮದಲ್ಲಿ ಮಾತನಾಡಿದ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ "ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡಬೇಕು". ಎಂದು ಹೇಳಿದ್ದರು. ಆ ಆನಂತರ ಅದಕ್ಕಾಗಿ ಕ್ಷಮೆ ಕೇಳಿದ್ದಾರೆ. ತಮ್ಮ ಮಾತಿನಲ್ಲಿ ಅವರು ಪಾಕಿಸ್ತಾನದಲ್ಲಿ ಮುಸ್ಲೀಮರಲ್ಲದವರಿಗೆ ಮತ ನೀಡುವ ಹಕ್ಕು ಇಲ್ಲ ಎಂದೂ ತಪ್ಪು ಹೇಳಿಕೆ ನೀಡಿದ್ದರು. ಆದರೆ ನಂತರ ನೀಡಿದ ಕ್ಷಮಾಪಣೆ ಹೇಳಿಕೆಯಲ್ಲಿ ಈ ಅಂಶವನ್ನು ಉಲ್ಲೇಖಿಸಿಲ್ಲ.

ನವೆಂಬರ್ 27ರ 'ಪ್ರಜಾವಾಣಿ'ಯ 'ಭಾರತ ಸಂವಿಧಾನ: ಜಗತ್ತಿಗೆ ದಾರಿದೀಪ' ಎಂಬ ಸಂಗತ ಅಂಕಣ ಬರಹವೊಂದು ಪ್ರಕಟವಾಗಿದೆ. ಬರಹದಲ್ಲಿ ಶಿಕ್ಷಣ, ಉದ್ಯೋಗ, ವಾಸ, ಪ್ರವಾಸ, ಮತಧರ್ಮದ ಆಚರಣೆ ಮುಂತಾದ ವಿಷಯಗಳಲ್ಲಿ ಜಾತಿ, ಮತ, ಲಿಂಗ, ಜನ್ಮಸ್ಥಳಗಳ ಆಧಾರದಲ್ಲಿ ತಾರತಮ್ಯವಿಲ್ಲದ ಹಕ್ಕುಗಳನ್ನು ಖಾತ್ರಿ ಪಡಿಸುವ ಸಂವಿಧಾನದ ವಿವಿಧ ವಿಧಿಗಳನ್ನು ಪ್ರಸ್ತಾಪಿಸಲಾಗಿದೆ. ಅದು ಸರಿಯೇ. ಆದರೆ ಅವುಗಳು ಧಾರ್ಮಿಕ ಅಲ್ಪಸಂಖ್ಯಾತರಿಗಾಗಿ ನೀಡಲಾಗಿರುವ ಹಕ್ಕುಗಳು ಎಂಬಂತೆ ಜಾಣ್ಮೆಯಿಂದ ಭಾಷೆಯನ್ನು ನಿರೂಪಿಸಲಾಗಿದೆ. ಈ ಎಲ್ಲ ಅಂಶಗಳನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕಿದೆ.

ಸ್ವಾತಂತ್ರ್ಯಕ್ಕೆ ಮುಂಚೆ ಭಾರತೀಯ ಸಮಾಜದಲ್ಲಿ ಕರಾಳ ಮನುಸ್ಮೃತಿಯ ಮೌಲ್ಯಗಳು ಈಗಿಗಿಂತಲೂ ದಟ್ಟ ಪ್ರಭಾವ ಹೊಂದಿದ್ದವು. ಆದರೆ ಭಾರತ ಹಿಂದೂ ರಾಷ್ಟ್ರವಾಗಿರಲಿಲ್ಲ. ಬದಲಿಗೆ ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಸಾಹತುವಾಗಿತ್ತು. ಪ್ರಸಕ್ತ ಭಾರತದ ಸಂವಿಧಾನವು 'ಧರ್ಮ ನಿರಪೇಕ್ಷ ಸಂವಿಧಾನ'ವಾಗಿದೆ. ಅಂದರೆ ಭಾರತದ ಪ್ರಭುತ್ವಕ್ಕೆ ಯಾವುದೇ ಮತಧರ್ಮವಿಲ್ಲ. ಪ್ರಭುತ್ವದಿಂದ ಮತಧರ್ಮವು ಪ್ರತ್ಯೇಕವಾಗಿರುತ್ತದೆ. ಇಲ್ಲಿ ಅದು ಮತಧರ್ಮ ತಟಸ್ಥ. ಮತಧರ್ಮವನ್ನು ಅನುಸರಿಸುವುದು, ಬಿಡುವುದು ವೈಯುಕ್ತಿಕವಾದುದು. ಜೊತೆಗೆ ಭಾರತ ಸಂವಿಧಾನವು ಎಲ್ಲ ಧರ್ಮಗಳನ್ನು, ಎಲ್ಲ ನಂಬಿಕೆಗಳನ್ನು ಗೌರವಿಸುವ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಖಾತ್ರಿಪಡಿಸುವ ಸಂವಿಧಾನವಾಗಿದೆ. ಪೇಜಾವರ ಶ್ರೀಗಳು ಆರೋಪಿಸುವಂತೆ ಹಿಂದೂಗಳನ್ನು ಅಗೌರವಿಸುವ ಯಾವುದೇ ಅಂಶಗಳು ಸಂವಿಧಾನದಲ್ಲಿ ಇಲ್ಲ.

ಇನ್ನು ಪಾಕಿಸ್ತಾನದಲ್ಲಿ ಅಲ್ಲಿನ ಧಾರ್ಮಿಕ ಅಲ್ಪಸಂಖ್ಯಾತರಾದ ಹಿಂದೂ, ಮುಸ್ಲಿಮ್, ಸಿಖ್ ಹಾಗೂ ಕ್ರಿಶ್ಚಿಯನ್ನರಿಗೆ ಮತದಾನದ ಹಕ್ಕಿದೆ. ಮಾತ್ರವಲ್ಲ, ಅವರು ಚುನಾವಣೆಗಳಿಗೂ ಸಹ ನಿಲ್ಲಬಹುದು. 2018ರಲ್ಲಿ ಕೃಷ್ಣ ಕುಮಾರಿ ಎಂಬ ಹಿಂದೂ ಮಹಿಳೆ ಸಂಸತ್ ಚುನಾವಣೆಯಲ್ಲಿ ಗೆದ್ದಿದ್ದರು. ಇದಲ್ಲದೇ 336 ಸದಸ್ಯರಿರುವ ಪಾಕಿಸ್ತಾನ ಪಾರ್ಲಿಮೆಂಟ್‌ನಲ್ಲಿ 10 ಸ್ಥಾನಗಳಿಗೆ ಮುಸ್ಲಿಮೇತರ ಅಲ್ಪಸಂಖ್ಯಾತರಿಗೆ ಮೀಸಲಾತಿ ಇದೆ. ರಾಜಕೀಯ ಪಕ್ಷಗಳು ಗಳಿಸಿದ ಮತ ಪ್ರಮಾಣ ಆಧರಿಸಿ ತಮ್ಮ ಪಾಲಿನ ಧಾರ್ಮಿಕ ಅಲ್ಪಸಂಖ್ಯಾತರ ಸ್ಥಾನಗಳನ್ನು ತುಂಬಬೇಕಾಗುತ್ತದೆ. ಪ್ರಾಯೋಗಿಕ ಸಮಸ್ಯೆಗಳಿದ್ದರೂ, ಪ್ರಾಂತೀಯ ಶಾಸನ ಸಭೆಗಳಿಗೆ ಪಂಜಾಬ್‌ನಲ್ಲಿ–8, ಸಿಂಧ್‌ನಲ್ಲಿ–9, ಬಲೂಚಿಸ್ತಾನ್‌ನಲ್ಲಿ–3, ಖೈಬರ್ ಪಖ್ತುಂಖ್ವಾದಲ್ಲಿ–3 ಸ್ಥಾನಗಳಿಗೆ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮೀಸಲಾತಿ ಇದೆ.

ಭಾರತದ ಸಂವಿಧಾನವು ಕೊಡಮಾಡುವ ಮೂಲಭೂತ ಹಕ್ಕುಗಳು ಕೇವಲ ಧಾರ್ಮಿಕ ಅಲ್ಪಸಂಖ್ಯಾತರನ್ನು ಓಲೈಸಲು ನೀಡಿರುವುದಲ್ಲ. ದೇಶದ ಪ್ರತಿಯೊಬ್ಬ ಪ್ರಜೆಗೂ ಈ ಹಕ್ಕುಗಳನ್ನು ನೀಡಲಾಗಿದೆ.

ಈ ಮೇಲಿನ ಎಲ್ಲ ಸುಳ್ಳು, ವಿಕೃತಿಗಳ ಒಟ್ಟು ಅರ್ಥವೇನೆಂದರೆ ಭಾರತವು ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾಗಿರುವುದು ಆರೆಸ್ಸೆಸ್ ಮತ್ತು ಬಲಪಂಥೀಯ ಶಕ್ತಿಗಳಿಗೆ ಬೇಡವಾಗಿದೆ. ಸಂವಿಧಾನದ ಜಾರಿಯಲ್ಲಿ ಆಗುವ, ಆಗಬಹುದಾದ ತಪ್ಪುಗಳನ್ನು ನೆಪವಾಗಿರಿಸಿ ಇಂತಹ ಸಂವಿಧಾನವನ್ನೇ ಕಿತ್ತೆಸೆಯುವ ಮನೋಭಾವವನ್ನು ರೂಪಿಸಲು ಅಂತಹ ಶಕ್ತಿಗಳು ಬಯಸುತ್ತವೆ. ಹೀಗಾಗಿ ಜಾಣ್ಮೆಯ ಭಾಷೆಯನ್ನು ಬಳಸುತ್ತಲೇ ಸಮಾಜದ ಮೇಲೆ ಮನುಸ್ಮೃತಿ ಆಧಾರಿತವಾದ ಹಿಂದುತ್ವದ ಸರ್ವಾಧಿಕಾರಿ ವ್ಯವಸ್ಥೆಯನ್ನು ಹೇರುವುದು ಈ ಶಕ್ತಿಗಳ ಮೂಲ ಉದ್ದೇಶವಾಗಿದೆ. ಇದೇ ಪೇಜಾವರ ಸ್ವಾಮಿಗಳು ಬ್ರಾಹ್ಮಣ ಹೆಣ್ಣುಮಕ್ಕಳು ಬೇರೆ ಜಾತಿಯ ಗಂಡುಗಳನ್ನು ಮದುವೆಯಾಗಲು ಬಿಡಬಾರದು, ಪುರೋಹಿತರ ಹುದ್ದೆಗಳನ್ನು ಬ್ರಾಹ್ಮಣರಿಗೆ ಮಾತ್ರ ಮೀಸಲಿಡಬೇಕು ಎಂದು ಹೇಳಿದ್ದದ್ದು ಇನ್ನೂ ಹಸಿ ಹಸಿಯಾಗಿದೆ. ಉಡುಪಿ ಮಠದಲ್ಲಿ ಇಂದಿಗೂ 'ಪಂಕ್ತಿ ಬೇಧ' ಮುಂದುವರಿದಿದೆ. ಅಸ್ಪೃಶ್ಯತೆ, ಮೇಲು–ಕೀಳು ಎಂಬ ಅಸಮಾನತೆಯ ಚಾತುರ್ವರ್ಣ್ಯದ ಜಾತಿ ವ್ಯವಸ್ಥೆಯನ್ನು, ಮಹಿಳೆಯರನ್ನು ಹೀಗೆಳೆವ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯನ್ನು ಕ್ರೂರವಾಗಿ ಪ್ರತಿಪಾದಿಸುವ 'ಮನುಸ್ಮೃತಿ'ಯನ್ನು ಕೊಂಡಾಡುವ ಸಂಘಪರಿವಾರದ ಜನರು, ಗುಪ್ತ ಸಂಘಿಗಳು ಸಂವಿಧಾನವನ್ನು ಟೀಕಿಸಿದರೂ ಎಚ್ಚರ ವಹಿಸಬೇಕು. ಹೊಗಳಿದರೂ ಎಚ್ಚರ ವಹಿಸಬೇಕು.

ಉಪ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಬೀಗಬೇಕಿಲ್ಲ

ಈ ವಾರ

ಎಸ್.ವೈ.ಗುರುಶಾಂತ್

2024 ನವೆಂಬರ್ 13 ರಂದು ನಡೆದ ವಿಧಾನಸಭಾ ಉಪ ಚುನಾವಣೆಯಲ್ಲಿ ಮೂರೂ ಕ್ಷೇತ್ರಗಳಲ್ಲಿ ಆಡಳಿತರೂಢ ಕಾಂಗ್ರೆಸ್ ಪಕ್ಷ ವಿಜಯ ಭೇರಿ ಬಾರಿಸಿದ ನಂತರ ಹಲವಾರು ಕ್ಷಿಪ್ರ ರಾಜಕೀಯ ವಿದ್ಯಮಾನಗಳು ಘಟಿಸುತ್ತಿವೆ. 'ಮುಡಾ' ಹಗರಣದ ತೀವ್ರ ಇಕ್ಕಟ್ಟಿನಲ್ಲಿ ನಲುಗುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಈ ಫಲಿತಾಂಶ ಸಾರ್ವಜನಿಕವಾಗಿ ವರ್ಚಸ್ಸು ವರ್ಧಕ, ಪಕ್ಷದೊಳಗೆ ಶಕ್ತಿವರ್ಧಕ ಎಂದು ಬಿಂಬಿತವಾಗುತ್ತಿದ್ದರೆ ಅತ್ತ ಚುನಾವಣೆಯಲ್ಲಿ ಸೋತ ಬಿಜೆಪಿಯ ಅಬ್ಬರ ತಗ್ಗಿ ಅದರೊಳಗಿನ ಪ್ರಬಲ ಗುಂಪುಗಳ ಭಿನ್ನಾಭಿಪ್ರಾಯಗಳು ಬೀದಿಗೆ ಬಿದ್ದಿವೆ. ಜಾತಿ ಮತ್ತು ಬಿಜೆಪಿಯನ್ನು ನಂಬಿ ಸ್ಪರ್ದೆಯಲ್ಲಿ ಗೆಲುವು ಸಾಧಿಸುವ ವಿಶ್ವಾಸದಲ್ಲಿದ್ದ ಜೆ.ಡಿ.ಎಸ್ ಪಕ್ಷ ಸೋಲು ಅನುಭವಿಸಿ ತತ್ತರಿಸುತ್ತಾ ಕಂಡವರ ಮೇಲೆ ಕೆಂಡ ಕಾರುತ್ತಿದೆ. ಸೋಲಿನ ಅಂತರ 25,515 ಎನ್ನುವುದು ಅದಕ್ಕೆ ಇನ್ನಿಲ್ಲದ ಅಘಾತ ತಂದಿದೆ. ಬಿಜೆಪಿಯೊಂದಿಗಿನ ಅದರ ಮೈತ್ರಿ ಮತ್ತು ಎನ್.ಡಿ.ಎ.ಮೈತ್ರಿ ಮತಗಳ ವರ್ಗಾವಣೆಯನ್ನು ನಿರೀಕ್ಷಿಸಿದ್ದ ಜೆಡಿಎಸ್ ಇಂತಹ ನಂಬಿಕೆಯ ದ್ರೋಹ ಅನುಭವಿಸ ಬೇಕಾಗಬಹುದು ಎಂದು ಎಣಿಸಿರಲಿಲ್ಲ. ತಮ್ಮ ಕುಟುಂಬದ ಕುಡಿಗೆ ಟಿಕೆಟ್ ನೀಡಿ ತಾವೇ ಸ್ಪರ್ದಿಸುವ ತಂತ್ರವೇನೋ ಫಲಿಸಿತಾದರೂ ಬಿಜೆಪಿಯಿಂದ ಕಾಂಗ್ರೆಸ್ ಗೆ ಹೋದ ಸಿ.ಪಿ.ಯೋಗೇಶ್ವರ ರನ್ನು ಮಣಿಸಲಾಗಲಿಲ್ಲ. ಜೆಡಿಎಸ್ ಪಕ್ಷದ ಹತಾಶೆಯಲ್ಲಿ ಬಿಜೆಪಿ ಪಕ್ಷದೊಳಗಿನ ಬಣಗಳ ಬಡಿದಾಟದ ದಟ್ಟ ಪರಿಣಾಮವಿದೆ. ಆದರೆ ಕೇಂದ್ರದ ಸಚಿವನಾಗಿ ತನ್ನ ಪಕ್ಷವನ್ನು ಬಲಗೊಳಿಸುವ ಭರವಸೆಯೊಂದಿಗಿನ ಮೈತ್ರಿಯೇ ಮುಳುವಾಗುವ ದಿನಗಳೂ ದೂರವಿಲ್ಲ ಅನಿಸತೊಡಗಿದೆ. ಈ ಸೋಲು ಮತ್ತು ಒಕ್ಕಲಿಗರ ಮೇಲೆ ತಮ್ಮ ಹಿಡಿತ, ನಾಯಕತ್ವ ಸಡಿಲವಾಗುತ್ತಿರುವಂತೆ ಭಾಸವಾಗುತ್ತಿರುವ ಆ ಪಕ್ಷದ ಹಲವು ಶಾಸಕರು ಅಲ್ಲಿಂದ ಕಾಲು ಕಿತ್ತುವ ವಾಸನೆಯೂ ಹೊಡೆಯುತ್ತಿರುವುದು ಜೆಡಿಎಸ್ ನಾಯಕರನ್ನು ಇನ್ನಷ್ಟು ಕಂಗಾಲಾಗಿಸುತ್ತಿದೆ. ಜೆಡಿಎಸ್ ಸೋಲಿಸಿ ಗೆದ್ದಿರುವ ಕಾಂಗ್ರೆಸ್ ನ ಯೋಗೇಶ್ವರ್ ಆಕ್ರಮಣಕಾರಿ ಮಾತುಗಳೂ ಹೆಚ್ಚಿವೆ. ಎದುರಾಳಿ ಪಕ್ಷದ ಬಗ್ಗೆ ಟೀಕಿಸಬಹುದಾದರೂ ಬಿಜೆಪಿ–ಆರ್.ಎಸ್.ಎಸ್. ಮಂಡ್ಯದಂತಹ ಜಿಲ್ಲೆಯನ್ನೂ ಒಳಗೊಂಡು ಒಕ್ಕಲಿಗರ ನೆಲೆಯಾಗಿರುವ ದಕ್ಷಿಣ ಕರ್ನಾಟಕದಲ್ಲಿ ಬೇರೂರಲು ನಡೆಸಿರುವ ಅವಿರತ ಪ್ರಯತ್ನಗಳ ಬಗ್ಗೆ ಅರಿವಿರಲಾರದೇ ಹೋಗುವುದು ತರವಲ್ಲ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ನಡುವೆಯೇ ರಾಜಕೀಯ ಧೃವೀಕರಣವನ್ನು ಕಾಂಗ್ರೆಸ್ ಬಯಸುವುದೂ ಕೂಡ ಅದರ ಹಿತಕ್ಕೂ ಸಹಾಯಕವಲ್ಲ.

ಈ ಮೂರು ಕ್ಷೇತ್ರಗಳಲ್ಲಿ ತಾವೇ ಗೆಲ್ಲುವುದಾಗಿ ಹೇಳುತ್ತಿದ್ದರೂ ಅದಕ್ಕೆ ಗಟ್ಟಿ ಆಧಾರಗಳಿರಲಿಲ್ಲ. ಹೀಗಾಗಿ ಕಾಂಗ್ರೆಸ್ ಗೆದ್ದಿರುವುದು ಅನಿರೀಕ್ಷಿತ. ಚುನಾವಣಾ ಪೂರ್ವ ಬಹುತೇಕ ಸಮೀಕ್ಷೆಗಳು ಈ ಹಿಂದೆ ಗೆದ್ದಿರುವ ಆಯಾ ಕ್ಷೇತ್ರಗಳನ್ನು ಆಯಾ ಪಕ್ಷಗಳು ಪಡೆಯುತ್ತವೆ ಎಂಬುದನ್ನೇ ಹೇಳಿದ್ದವು. ಆದರೆ ಚುನಾವಣೆಯ ಕಾವು ಹೆಚ್ಚುತ್ತಿರುವಂತೆ ಗೆಲ್ಲಲು ಏನನ್ನಾದರೂ ಮಾಡಲೇ ಬೇಕು ಎನ್ನುವ ಸ್ಪರ್ಧೆಗೆ ಪ್ರತಿಯೊಬ್ಬರೂ ಇಳಿದ ಬಳಿಕ ಫಲಿತಾಂಶ ಹೀಗೇ ಎಂದು ನಿಖರವಾಗಿ ಹೇಳುವುದು ಸ್ವಲ್ಪ ಕಷ್ಟವಾಗಿತ್ತು. ಹೀಗಾಗಿ ಮೂರೂ ಕ್ಷೇತ್ರಗಳಲ್ಲಿ ಹತ್ತಿರದ ಹಣಾಹಣಿ ಇದೆ ಎನ್ನಲಾಗುತ್ತಿತ್ತು. ಮತದಾನ ಹತ್ತಿರವಾಗುತ್ತಿರುವಂತೆ ಸಚಿವ ಜಮೀರ್ ಅಹ್ಮದ್ ಹೆಚ್.ಡಿ.ಕೆ. ಯನ್ನು ಕಾಲಿಯಾ ಎಂದು ಕರೆದ ಮಾತುಗಳು ಒಕ್ಕಲಿಗರನ್ನು ರೊಚ್ಚಿಗೆಬ್ಬಿಸಿ ಜೆಡಿಎಸ್ ನ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ ಗಳಿಕೆಗೆ ಕಾರಣವಾಗಬಹುದು ಎಂಬ ಆತಂಕ ಸ್ವತಃ ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ಅವರನ್ನು ಕಾಡಿತ್ತು. ಮತದಾನದ ಬಳಿಕ ಅದನ್ನೇ ಆಡಿದ್ದರು. ಆದರೆ ಅದು ಸಂಭವಿಸಲಿಲ್ಲ. ಕಾಂಗ್ರೆಸ್ ಗೆದ್ದದ್ದು ಜೆಡಿಎಸ್ ಮತ್ತು ಒಕ್ಕಲಿಗರ ನಡುವಿನ ನಾಯಕತ್ವದ ವಿಷಯದಲ್ಲಿ ಯಾರ ಕೈ ಮೇಲಾಯಿತು ಎಂಬುದು ಯೋಚಿಸಬೇಕಾದ ಅಂಶ. ಇಲ್ಲಿನ ಫಲಿತಾಂಶ ಡಿ.ಕೆ ಶಿವಕುಮಾರ ಮತ್ತು ಸಹೋದರರ ಭವಿಷ್ಯದ ಮೇಲೂ ಪರಿಣಾಮ ಬೀರುವುದಾಗಿತ್ತು.

ಬಸವರಾಜ ಬೊಮ್ಮಾಯಿ ಹಿಂದೆ ಗೆಲುತ್ತಲೇ ಬಂದಿದ್ದ ಶಿಗ್ಗಾವಿ ಕ್ಷೇತ್ರದಲ್ಲಿ ಅವರ ಮಗನಿಗೆ ಟಿಕೆಟ್ ಪಡೆಯಲಾಗಿತ್ತು ಮತ್ತು ಸಹಜವಾಗಿ ಗೆಲವು ಬರಬಹುದು ಎನ್ನುವ ನಿರೀಕ್ಷೆಯನ್ನು ಇರಿಸಿಕೊಳ್ಳಲಾಗಿತ್ತು. ಕಾಂಗ್ರೆಸ್ ಅಭ್ಯರ್ಥಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದಕ್ಕೆ ಸೇರಿದವರಾದ್ದರಿಂದ ಹಿಂದೂಗಳ ಮತಗಳ ಕ್ರೋಢೀಕರಣಗೊಂಡು ಸುಲಭವಾಗಿ ಗೆಲ್ಲಬಹುದು ಎಂಬ ಸರಳ ಲೆಕ್ಕ ಅವರಲ್ಲಿತ್ತು. ಆದರೆ ಅದು ಘಟಿಸಲಿಲ್ಲ.

ಸಂಡೂರು ಕ್ಷೇತ್ರದಲ್ಲಿಯೂ ಗಾಲಿ ಜನಾರ್ದನ ರೆಡ್ಡಿ ಅಲ್ಲಿಯೇ ತಳ ಊರಿ ಬಿಜೆಪಿ ಅಭ್ಯರ್ಥಿ ಹನುಮಂತ ಅವರಿಗೆ ಗಂಗಾವತಿಯಲ್ಲಿ ಮಾಡಿದಂತೆ ಮ್ಯಾಜಿಕ್ ಮಾಡಬಹುದು ಎಂಬ ಮಾತುಗಳು ವ್ಯಾಪಕವಾಗಿದ್ದವು. ಮೇಲಾಗಿ ಕಾಂಗ್ರೆಸ್ಸಿನ ಭ್ಯರ್ಥಿಯು ಹಿಂದಿನ ಶಾಸಕ, ಹಾಲಿ ಸಂಸದ ತುಕರಾಮ್ ಅವರ ಪತ್ನಿ ಗೆ ಟಿಕೆಟ್ ನೀಡಿರುವುದು ಬೆಳೆಯುತ್ತಿದ್ದ ಒಳ ಅತೃಪ್ತಿಯಿಂದಾಗಿ ಸೋಲಬಹುದು ಎಂಬ ನಿರೀಕ್ಷೆಗಳು ಕೆಲವರಲ್ಲಿ ಇದ್ದವು, ಅದು ಆಗಲಿಲ್ಲ. ಅಲ್ಲಿ ಕಡಿಮೆ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕರಾಮ್ ಗೆದ್ದರು. ಆದರೆ ಸಂಡೂರು ಕಾಂಗ್ರೆಸ್ಸಿಗೆ ಅತ್ಯಂತ ಪ್ರಯಾಸದ ಗೆಲುವು.

ಈ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿರುವುದು ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಿಂದಾಗಲಿ ಅಥವಾ ಕಾಂಗ್ರೆಸ್ ಸರ್ಕಾರ ಕೈಗೊಂಡ ಭಾರಿ ಜನಪರ ಕೆಲಸಗಳಿಂದ ಅಥವಾ ನಾಯಕರ ವರ್ಚಸಿನಿಂದ ಎಂದಷ್ಟೇ ಭಾವಿಸುವುದು ತಪ್ಪಾಗುತ್ತದೆ. ಒಂದೊಂದು ಕ್ಷೇತ್ರದಲ್ಲೂ ಒಂದೊಂದು ರೀತಿಯ ಜಾತಿ–ಮತ. ಹಣ ಸಂಯೋಜನೆಗಳು ಕೆಲಸ ಮಾಡಿವೆ. ಸಂಡೂರಿನಲ್ಲಿ ಬೀಡು ಬಿಟ್ಟು ಅಲ್ಲಿಂದ ತಮ್ಮ ರಾಜಕೀಯದ ಆಟಗಳನ್ನು ಆಡಲು ನೆಲೆ ಕಂಡು ಕೊಳ್ಳಬೇಕೆಂದಿದ್ದ ಗಾಲಿ ಜನಾರ್ಧನ ರೆಡ್ಡಿಯವರ ಮತ್ತು ಅವರ ಶಿಷ್ಯ ಅಭ್ಯರ್ಥಿ ಹನುಮಂತ ಅವರ ನಕಾರಾತ್ಮಕ ಇತಿಹಾಸ ಮತ್ತು ಆಕ್ರಮಣಕಾರಿ ನಡೆಗಳು ಅಹಂಕಾರದ ಮಾತುಗಳು ಜನರಲ್ಲಿ ಆತಂಕ ಹುಟ್ಟಿಸಿದ್ದು ನಿಜ. ಅತ್ಯಂತ ಸಂಪದ್ಭರಿತ ಅದಿರು, ಗಣಿಗಾರಿಕೆ ಮತ್ತು ಬೃಹತ್ ಕೈಗಾರಿಕೆಗಳಿರುವ ಹಾಗೂ ಮತ್ತಷ್ಟು ಉದ್ಯಮಗಳು ಬೆಳೆಯಬಹುದಾದ ಸಾಧ್ಯತೆಗಳಿರುವ ಸಂಡೂರು ಮತ್ತು ವಿಶೇಷವಾಗಿ ಬಳ್ಳಾರಿ ಜಿಲ್ಲೆ ಮತ್ತೊಮ್ಮೆ ಗಣಿಗಳ್ಳರ ಬಹಿರಂಗ ಆಟಾಟೋಪಗಳ ಕೇಂದ್ರವಾಗದಿರುವಂತೆ ಜನತೆ ಎಚ್ಚರ ವಹಿಸಿದ್ದಾರೆ. ವಿಶೇಷವಾಗಿ ಇಲ್ಲಿಯ ಗಣಿ ಕಂಟ್ರಾಕ್ಟರ್ ಗಳು, ಬೃಹತ್ ಕೈಗಾರಿಕೆಗಳ ಮಾಲೀಕರು ಸಹ ಅವರದೇ ಹಿತಾಸಕ್ತಿಗಳಿಗಾಗಿ ಕಾಂಗ್ರೆಸ್ಸನ್ನು ಬೆಂಬಲಿಸುವ, ಬಿಜೆಪಿಯನ್ನು ಸೋಲಿಸುವುದರಲ್ಲಿ ಸಕ್ರಿಯವಾಗಿದ್ದಾರೆ. ಸಂಸದ ತುಕಾರಾಮ ಅವರಿಗೆ ಇತರೆ ಜನ ವಿಭಾಗಗಳ ಜೊತೆಗೆ ಮೇಲ್ಜಾತಿ ಮತ್ತು ಮೇಲ್ವರ್ಗದೊಂದಿಗೆ ಉತ್ತಮವಾದಂತಹ ಬಾಂಧವ್ಯ ಇರುವುದು ಸಹ ಇಲ್ಲಿ ಫಲಿತಾಂಶ ಪರವಾಗಿ ಬರಲು ಸಾಧ್ಯವಾಗಿಸಿದೆ. ಈ ಕ್ಷೇತ್ರದಲ್ಲಿ ಹಣದ

ಪುಟ 15 ಕ್ಕೆ

ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿನ ಉದ್ಯೋಗಸ್ಥ ಮಹಿಳೆಯರಿಗೆ ವರ್ಷಕ್ಕೆ ಆರು ದಿನ ವೇತನ ಸಹಿತ ಮುಟ್ಟಿನ ರಜೆ (ಪಿಎಂಎಲ್) ನೀಡಲು ಕ್ರೈಸ್ತ್ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥೆ ಸಪ್ನಾ ಮೋಹನ್ ಅವರ ಅಧ್ಯಕ್ಷತೆಯ 18 ಸದಸ್ಯರ ತಜ್ಞರ ಸಮಿತಿಯು 2024ರ ಸೆಪ್ಟೆಂಬರ್ ನಲ್ಲಿ ಶಿಫಾರಸ್ಸು ಮಾಡಿದೆ. ಕರ್ನಾಟಕ ಸರ್ಕಾರವು ಉದ್ಯೋಗಸ್ಥ ಮಹಿಳೆಯರಿಗೆ ವರ್ಷಕ್ಕೆ ಆರು ದಿನಗಳ ವೇತನ ಸಹಿತ ಮುಟ್ಟಿನ ರಜೆ ನೀಡುವ ಪ್ರಸ್ತಾವನೆಯ ಕುರಿತು ಸಾರ್ವಜನಿಕ ಅಭಿಪ್ರಾಯವನ್ನು ಕೇಳಿದೆ. ಉದ್ಯೋಗಸ್ಥ ಮಹಿಳೆಯರಿಗೆ ತಿಂಗಳಿಗೆ ಒಂದು ದಿನದ ಮುಟ್ಟಿನ ರಜೆಯ ಸೌಲಭ್ಯ ಇರಬೇಕು ಮತ್ತು ವೇತನಕ್ಕಾಗಿ ದುಡಿಯುವ ಎಲ್ಲಾ ಮಹಿಳಾ ವಿಭಾಗಗಳನ್ನು ಈ ಸೌಲಭ್ಯ ಒಳಗೊಳ್ಳಬೇಕು ಎಂದು ಸಿಐಟಿಯು ಸೇರಿದಂತೆ ಕೇಂದ್ರ ಕಾರ್ಮಿಕ ಸಂಘಟನೆಗಳು ಸರ್ಕಾರಕ್ಕೆ ಮನವಿ ಮಾಡಿವೆ. ಪತ್ರದ ಸಾರಾಂಶ ಇಲ್ಲಿದೆ:

ತಿಂಗಳಿಗೆ ಒಂದು ದಿನದ ಮುಟ್ಟಿನ ರಜೆಯ ಸೌಲಭ್ಯ ಇರಬೇಕು

ವೇತನಕ್ಕಾಗಿ ದುಡಿಯುವ ಎಲ್ಲಾ ಮಹಿಳಾ ವಿಭಾಗಗಳನ್ನು ಒಳಗೊಳ್ಳಬೇಕು; ಕೇಂದ್ರ ಕಾರ್ಮಿಕ ಸಂಘಟನೆಗಳ ಮನವಿ

ಕೆಲಸದ ಎಲ್ಲಾ ಸ್ಥಳಗಳಲ್ಲಿ ಮಹಿಳೆಯರಿಗೆ ತಿಂಗಳಿಗೆ ಒಂದು ದಿನದ ಮುಟ್ಟಿನ ರಜೆಯ ಸೌಲಭ್ಯದ ಅನುಷ್ಠಾನಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿರುವ ಸಿಐಟಿಯು ಸೇರಿದಂತೆ ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಜ್ಯದ ಉದ್ಯೋಗಸ್ಥ ಮಹಿಳೆಯರಿಗೆ ತಿಂಗಳಿಗೆ ಒಂದು ದಿನದ ಮುಟ್ಟಿನ ರಜೆಯ ಸೌಲಭ್ಯ ಬೇಕು ಮತ್ತು ವೇತನಕ್ಕಾಗಿ ದುಡಿಯುವ ಎಲ್ಲಾ ಮಹಿಳಾ ವಿಭಾಗಗಳನ್ನು ಈ ಸೌಲಭ್ಯವು ಒಳಗೊಳ್ಳಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿವೆ.

ಸರ್ಕಾರಿ ಸೇವೆಗಳು, ಪೊಲೀಸ್ ಇಲಾಖೆ, ಬ್ಯಾಂಕ್‌ಗಳು, ಐಟಿ/ಬಿಟಿ ಗಳಲ್ಲಿ ದುಡಿಯುವ ಮಹಿಳೆಯರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಬಿಸಿಯೂಟ ಮತ್ತು ಪ್ಲಾಂಟೇಶನ್ ಗಳಲ್ಲಿ ಗಣನೀಯ ಸಂಖ್ಯೆಯ ಮಹಿಳೆಯರು ಉದ್ಯೋಗದಲ್ಲಿದ್ದಾರೆ. ಆದ್ದರಿಂದ, ರಾಜ್ಯದ ಸರ್ಕಾರಿ ಸೇವೆಗಳು ಮತ್ತು ಪ್ಲಾಂಟೇಶನ್ ಗಳನ್ನು ಸೇರಿಸಲು ಅನುಷ್ಠಾನದ ವ್ಯಾಪ್ತಿಯನ್ನು ವಿಸ್ತರಿಸಬೇಕು. ಮತ್ತು ವೇತನಕ್ಕಾಗಿ ದುಡಿಯುವ ಎಲ್ಲಾ ಮಹಿಳಾ ವಿಭಾಗಗಳನ್ನು ಒಳಗೊಳ್ಳಬೇಕು. ಸಮಿತಿಯ ಮುಂದೆ ನಾವು ಮಂಡಿಸಿದ ವಾದಗಳನ್ನು ಸೂಕ್ತವಾಗಿ ಪರಿಗಣಿಸಿ ಮತ್ತು ಮುಟ್ಟಿನ ರಜೆಯ ಅನುಷ್ಠಾನದ ಪರವಾಗಿ ಸೂಕ್ತವಾದ ನಿರ್ಧಾರವನ್ನು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು ಎಂದು ಭಾವಿಸುತ್ತೇವೆ ಎಂದು ಕಾರ್ಮಿಕ ಆಯುಕ್ತರಿಗೆ ಸಲ್ಲಿಸಿದ ಪತ್ರದಲ್ಲಿ ಹೇಳಲಾಗಿದೆ.

ಕ್ರೈಸ್ತ್ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥೆ ಸಪ್ನಾ ಮೋಹನ್ ಅವರ ಅಧ್ಯಕ್ಷತೆಯ 18 ಸದಸ್ಯರ ತಜ್ಞರ ಸಮಿತಿಯು, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿನ ಉದ್ಯೋಗಸ್ಥ ಮಹಿಳೆಯರಿಗೆ ವರ್ಷಕ್ಕೆ ಆರು ದಿನ ವೇತನ ಸಹಿತ ಮುಟ್ಟಿನ ರಜೆ (ಪಿಎಂಎಲ್) ನೀಡಲು 2024ರ ಸೆಪ್ಟೆಂಬರ್‌ನಲ್ಲಿ ಶಿಫಾರಸ್ಸು ಮಾಡಿದೆ. ಈ ಸಮಿತಿಯು ಕಾರ್ಮಿಕ ಇಲಾಖೆಯ ಪ್ರತಿನಿಧಿಗಳು, ವೈದ್ಯರು, ಉದ್ಯಮ ಮಾಲೀಕರು, ಕಾರ್ಮಿಕ ಸಂಘಟನೆಗಳು, ಪ್ರಾಧ್ಯಾಪಕರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡಿದೆ.

ತಜ್ಞರ ಸಮಿತಿ ರಚನೆ ಸ್ವಾಗತಾರ್ಹ

ದೀರ್ಘಕಾಲದಿಂದ ಮುಟ್ಟಿನ ವಿಷಯವನ್ನು ಬಹಿರಂಗವಾಗಿ ಚರ್ಚಿಸಲು ನಿಷೇಧಿಸಲಾಗಿದೆ ಎಂದು ಪರಿಗಣಿಸಲಾಗಿತ್ತು, ಇದರಿಂದಾಗಿ ಭಾರತದಲ್ಲಿ ಮಹಿಳಾ ಉದ್ಯೋಗಿಗಳು ಎದುರಿಸುತ್ತಿರುವ ಸಮಸ್ಯೆಯನ್ನು ತಗ್ಗಿಸುವ ಯಾವುದೇ ಪ್ರಯತ್ನ ಮತ್ತು ಕ್ರಿಯೆಗಳಿಗೆ ಅಡ್ಡಿಯಾಗಿತ್ತು ಎಂದಿರುವ ಕಾರ್ಮಿಕ ಸಂಘಟನೆಗಳು, ಕರ್ನಾಟಕದಲ್ಲಿ ಮಹಿಳಾ ಕಾರ್ಮಿಕರಿಗೆ ಮುಟ್ಟಿನ ರಜೆ ಸೌಲಭ್ಯದ ಅನುಷ್ಠಾನದ ಕುರಿತು ಚರ್ಚಿಸಲು ತಜ್ಞರ ಸಮಿತಿಯನ್ನು ರಚಿಸಿದ ಕರ್ನಾಟಕದ ಕಾರ್ಮಿಕ ಇಲಾಖೆಯನ್ನು ಅಭಿನಂದಿಸಿವೆ. ಪರಿಹಾರ ಪ್ರಕ್ರಿಯೆಯ ಮೊದಲ ಹೆಜ್ಜೆಯಾಗಿ ಸಾರ್ವಜನಿಕ ಸಂವಾದ ಮತ್ತು ಚರ್ಚೆಗಳಾಗಬೇಕು. ನಮ್ಮ ಸಮಾಜದಲ್ಲಿ ಮುಟ್ಟಿನ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿದೆ. ಈ ಸಂಬಂಧ ಸಮಿತಿಯಲ್ಲಿ ನಮ್ಮ ರಚನಾತ್ಮಕ ಭಾಗವಹಿಸುವಿಕೆಯಿಂದ ವಸ್ತು ಮತ್ತು ವಿಚಾರವನ್ನು ಸೇರಿಸಲು ನಾವು ಇಚ್ಚಿಸುತ್ತೇವೆ ಎಂದು ಅದು ಹೇಳಿದೆ.

ಕಾರ್ಮಿಕ ಆಯುಕ್ತರಿಗೆ ನೀಡಿದ ಪತ್ರದ ಪ್ರಮುಖ ಅಂಶಗಳು ಹೀಗಿವೆ:

ಜೈವಿಕ ಅಂಶಗಳು

ವೈಜ್ಞಾನಿಕ ಮತ್ತು ವೈಚಾರಿಕ ಸಮಾಜದಲ್ಲಿ ಮುಟ್ಟನ್ನು ಮಹಿಳೆಯ ಅಂಗರಚನಾಶಾಸ್ತ್ರದ ಸಂಪೂರ್ಣ ಜೈವಿಕ ಪ್ರಕ್ರಿಯೆ ಎಂದು ಅರ್ಥಮಾಡಿಕೊಳ್ಳುವತ್ತ ಶ್ರಮಿಸಬೇಕು. "ಮುಟ್ಟು" ಋತುಚಕ್ರದ ಭಾಗವಾಗಿದ್ದು, ಮಹಿಳೆಯು ತನ್ನ ಯೋನಿಯಿಂದ ಕೆಲವು ದಿನಗಳವರೆಗೆ ರಕ್ತಸ್ರಾವಕ್ಕೆ ಒಳಗಾಗುತ್ತಾಳೆ. ಹೆಚ್ಚಿನ ಮಹಿಳೆಯರಲ್ಲಿ ಇದು 28 ದಿನಗಳ ಚಕ್ರವಾಗಿರುತ್ತದೆ ಅಥವಾ ಕೆಲವು ಮಹಿಳೆಯರಲ್ಲಿ ಇದಕ್ಕಿಂತ ಕಡಿಮೆ ಅಥವಾ ಜಾಸ್ತಿಯಾಗಿ 23ರಿಂದ 35 ದಿನಗಳ ವರೆಗೆ ವ್ಯತ್ಯಾಸವಾಗುವುದು ಸಹ ಅತ್ಯಂತ ಸಹಜ ಪ್ರಕ್ರಿಯೆಯಾಗಿದೆ. ಮುಟ್ಟು ನಿಲ್ಲುವ ವಯಸ್ಸಿನವರೆಗೂ ಮುಟ್ಟು ಮುಂದುವರೆಯುತ್ತದೆ, ಸಾಮಾನ್ಯವಾಗಿ 50ರ ವರ್ಷಗಳ ಮಧ್ಯಭಾಗದಲ್ಲಿ. ಸರಾಸರಿಯಾಗಿ, ಪ್ರತಿ ಮಹಿಳೆಯು 13 ವರ್ಷದಿಂದ 51 ವರ್ಷಗಳವರೆಗೆ, ಪ್ರತಿ 28 ದಿನಗಳಿಗೊಮ್ಮೆ, 3ರಿಂದ 7 ದಿನಗಳ ತನಕ ಮುಟ್ಟಾಗುತ್ತಾಳೆ. ಈ ಅವಧಿಯಲ್ಲಿ, ಮಹಿಳೆಯು ತಲೆನೋವು, ಆಯಾಸ, ಕಿಬ್ಬೊಟ್ಟೆಯ ಸೆಳೆತ, ಉಬ್ಬುವುದು, ವಾಕರಿಕೆ, ಅತಿಸಾರ, ಆತಂಕ, ಕಿರಿಕಿರಿ, ಕಡಿಮೆ ಬೆನ್ನು ನೋವು ಮತ್ತು ನಿದ್ರಾಹೀನತೆಯಂತಹ ಲಕ್ಷಣಗಳನ್ನು ಅನುಭವಿಸುತ್ತಾಳೆ.



ಲ್ಯಾನ್ಸೆಟ್ ಜರ್ನಲ್ ಮುಟ್ಟಿನ ಆರೋಗ್ಯವನ್ನು "ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿ ಮತ್ತು ಮುಟ್ಟಿಗೆ ಸಂಬಂಧಿಸಿದಂತೆ ಕೇವಲ ರೋಗ ಅಥವಾ ದೌರ್ಬಲ್ಯದ ಅನುಪಸ್ಥಿತಿಯಲ್ಲ" ಎಂದು ವ್ಯಾಖ್ಯಾನಿಸುತ್ತದೆ. ಈ ವ್ಯಾಖ್ಯಾನವು ಮುಟ್ಟಿನ ಆರೋಗ್ಯಕ್ಕೆ ಐದು ಅವಶ್ಯಕತೆಗಳನ್ನು ಹೇಳುತ್ತದೆ:

1. ಜೀವನದುದ್ದಕ್ಕೂ ಮುಟ್ಟಿನ ಬಗ್ಗೆ ಮಾಹಿತಿ ಮತ್ತು ಶಿಕ್ಷಣದ ಅವಕಾಶ
2. ಆದ್ಯತೆಗಳು, ನೈರ್ಮಲ್ಯ, ಸೌಕರ್ಯ, ಗೌಪ್ಯತೆ ಮತ್ತು ಸುರಕ್ಷತೆಯನ್ನು ಬೆಂಬಲಿಸುವಂತಹ ದೇಹದ ಕಾಳಜಿಗೆ ಅವಶ್ಯ ವಸ್ತುಗಳು, ಸೌಲಭ್ಯಗಳು ಮತ್ತು ಸೇವೆಗಳಿಗೆ ಅವಕಾಶ
3. ಸಮಯೋಚಿತ ರೋಗನಿರ್ಣಯಕ್ಕೆ ಅವಕಾಶ, ಮುಟ್ಟಿಗೆ ಸಂಬಂಧಿಸಿದ ಅಸ್ವಸ್ಥತೆ ಮತ್ತು ಅಸ್ವಸ್ಥತೆಗಳಿಗೆ ಚಿಕಿತ್ಸೆ ಮತ್ತು ಆರೈಕೆ
4. ಮಾನಸಿಕ ಯಾತನೆ ಮತ್ತು ಕಳಂಕ ರಹಿತ ಮುಕ್ತವಾದ ಬೆಂಬಲದ ಸಾಮಾಜಿಕ ವಾತಾವರಣ
5. ಮುಟ್ಟಿನಲ್ಲಿಯೂ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಭಾಗವಹಿಸಲು ತಾರತಮ್ಯರಾಹಿತ್ಯ ಮತ್ತು ಸ್ವಾತಂತ್ರ್ಯ. ಮುಟ್ಟಿನ ಆರೋಗ್ಯದ ಸುರಕ್ಷತೆ ಯುಎನ್‌ಡಿಪಿಯ ಸುಸ್ಥಿರ ಗುರಿಗಳ ಕಾರ್ಯಕ್ರಮದ ಒಂದು ಭಾಗವಾಗಿದೆ.

ಪೂರಕ ಸಾಮಾಜಿಕ ವಾತಾವರಣ ಒದಗಿಸುವುದು

ಮಹಿಳೆಯರಿಗೆ ಮುಟ್ಟಿನ ಆರೋಗ್ಯವನ್ನು ಉತ್ತಮಪಡಿಸಲು, ಮುಟ್ಟಿನ ಆರೋಗ್ಯವನ್ನು ಅರ್ಥಮಾಡಿಕೊಳ್ಳುವ ಮತ್ತು ಬೆಂಬಲಿಸುವ ಕೆಲಸದ ವಾತಾವರಣವನ್ನು ಒಳಗೊಂಡ ಪೂರಕ ಸಾಮಾಜಿಕ ವಾತಾವರಣ ಒದಗಿಸುವುದು ಮುಖ್ಯವಾಗಿದೆ. ಪ್ರತಿ ವ್ಯಾಖ್ಯಾನವು ತಾರತಮ್ಯದ ಯಾವುದೇ ಭಯವಿಲ್ಲದೆ ಉದ್ಯೋಗಗಳಲ್ಲಿ ಭಾಗವಹಿಸುವ ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ಮಹಿಳೆಯರಿಗೆ ಮುಟ್ಟಿನ ಕಾಲದಲ್ಲಿ ವಿಶ್ರಾಂತಿ ಪಡೆಯಲು ವೇತನ ಸಹಿತ ರಜೆಯ ಸೌಲಭ್ಯ ಖಂಡಿತಾ ಅಗತ್ಯ. ಆದ್ದರಿಂದ, ಮುಟ್ಟಿನ ರಜೆಯ ಪರಿಕಲ್ಪನೆಯು ಮುಟ್ಟಿನ ಆರೋಗ್ಯ ಸುಧಾರಣೆಯ ಕುರಿತಾದ ಪ್ರಶ್ನೆಗಳಿಗೆ ಉತ್ತರಿಸುತ್ತದೆ ಮತ್ತು ನಮ್ಮ ಸಮಾಜದಲ್ಲಿ ಮುಟ್ಟಿನ ಆರೋಗ್ಯದ ಸುಧಾರಣೆಗಳನ್ನು ಸಾಧಿಸಲು ಇದು ತುಂಬಾ ಅಗತ್ಯ.

ಸಾಮಾಜಿಕ–ಸಾಂಸ್ಕೃತಿಕ ಅಂಶಗಳು

ಪಿತೃಪ್ರಧಾನ ಸಮಾಜದಲ್ಲಿ ಮುಟ್ಟು ಅವೈಜ್ಞಾನಿಕ ಕಳಂಕಕ್ಕೆ ಒಳಗಾಗಿದೆ. ಈ ಕಳಂಕದಿಂದ ಕೆಲಸದ ಸ್ಥಳಗಳಲ್ಲಿ ಮುಟ್ಟಿಗೆ ಸಂಬಂಧಿಸಿದ ಚರ್ಚೆಯ ಅನುಪಸ್ಥಿತಿಯಲ್ಲಿ, ಯಾವುದೇ ನಿರ್ಣಯ ಅಥವಾ ಕಳಂಕ ಕಡಿಮೆಗೊಳಿಸುವ ಅವಕಾಶ ಇರುವುದಿಲ್ಲ. ಅಶುದ್ಧತೆ/ಮಾಲಿನ್ಯದ ಮಧ್ಯಕಾಲೀನ ಮತ್ತು ಜಾತಿವಾದಿ ಪರಿಕಲ್ಪನೆಗಳು ಇಂದಿಗೂ ಮುಟ್ಟಿನ ಸುತ್ತಲಿನ ಶುದ್ಧತೆ ಮತ್ತು ಸಾಮಾಜಿಕ ಕಟ್ಟುಪಾಡುಗಳನ್ನು ತಿಳಿಸುತ್ತವೆ. ದೈಹಿಕ ವಿಸರ್ಜನೆಯನ್ನು ಅಶುದ್ಧವೆಂದು ಪರಿಗಣಿಸಲಾಗುತ್ತದೆ ಮತ್ತು ಆದ್ದರಿಂದ ವಿಸರ್ಜನೆಯನ್ನು ಉತ್ಪಾದಿಸುವ ದೇಹಗಳನ್ನು ಅಶುದ್ಧವೆಂದು ಪರಿಗಣಿಸಲಾಗುತ್ತದೆ. ಇಂತಹ ಅವೈಜ್ಞಾನಿಕ ನಂಬಿಕೆಗಳು ಲೈಂಗಿಕ ಆರೋಗ್ಯ, ಸಂತಾನೋತ್ಪತ್ತಿ ಆರೋಗ್ಯ ಮತ್ತು ಮುಟ್ಟಿನ ಆರೋಗ್ಯದ ಕಡೆಗೆ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಮಕ್ಕಳಿಗೆ ನೀಡಬೇಕಾದ ಕೌಟುಂಬಿಕ ಶಿಕ್ಷಣ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಇಂತಹ ನಂಬಿಕೆಗಳಿಂದ ಹೊರಬಂದ ಫಲಿತಾಂಶ ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಮತ್ತು ಉದ್ಯೋಗಗಳು ಲಿಂಗಾದಾರಿತವಾಗಿವೆ. ಈ ಸನ್ನಿವೇಶದಲ್ಲಿ, ಮುಟ್ಟಿನ ರಜೆಯ ಪ್ರಸ್ತಾಪವು ಕೆಲಸದ ಸ್ಥಳದಲ್ಲಿ ಇಂತಹ ತರ್ಕರಹಿತ ಮತ್ತು ಅವೈಜ್ಞಾನಿಕ ನಂಬಿಕೆಗಳನ್ನು ಎದುರಿಸಲು ಸಹಾಯ ಮಾಡುತ್ತದೆ. ಕೆಲಸದ ಸ್ಥಳಗಳಲ್ಲಿ ಮುಟ್ಟಿನ ರಜೆಯ ಅನುಷ್ಠಾನವು ಬಹುಪಾಲು ಪುರುಷ ಕಾರ್ಮಿಕರು ಮತ್ತು ಹೆಚ್ಚಾಗಿ ಪುರುಷ ಮೇಲ್ವಿಚಾರಕರನ್ನು ಒಳಗೊಂಡಿರುವ ಉದ್ಯೋಗಿಗಳಲ್ಲಿ ಮುಟ್ಟಿನ ತರ್ಕಬದ್ಧತೆ ಮತ್ತು ಜೈವಿಕ ಸ್ವರೂಪವನ್ನು ಸಾಂಸ್ಥಿಕಗೊಳಿಸಲು ಕಾರಣವಾಗುತ್ತದೆ.

ಆರ್ಥಿಕ ಅಂಶಗಳು

ಮೂರನೆಯದಾಗಿ, ಪ್ರಸ್ತುತ ಚರ್ಚೆಯ ಆರ್ಥಿಕ ಪರಿಸ್ಥಿತಿಯ ಹಿನ್ನಲೆಯನ್ನು. ಕರ್ನಾಟಕ ರಾಜ್ಯದಲ್ಲಿ ಮಹಿಳಾ ಉದ್ಯೋಗಿಗಳ ವ್ಯಾಪ್ತಿಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಕರ್ನಾಟಕದ ಉದ್ಯೋಗಿಗಳೊಳಗೆ ಬಲವಾದ ಲಿಂಗಆದಾರಿತ ಅಂತರವಿದೆ. ನಗರ ಉದ್ಯೋಗಿಗಳೊಳಗಿನ ಲಿಂಗಆದಾರಿತ ಅಂತರಕ್ಕೆ ಹೋಲಿಸಿದರೆ ಗ್ರಾಮೀಣ ಕಾರ್ಮಿಕರಲ್ಲಿ ಲಿಂಗಆದಾರಿತ ಅಂತರವು ಕಡಿಮೆಯಾಗಿದೆ.

ಸ್ವಯಂ ಉದ್ಯೋಗದಲ್ಲಿ ಶೇ. 13.78ರಷ್ಟು ನಗರವಾಸಿ ಮಹಿಳೆಯರು ಭಾಗಿಯಾಗಿದ್ದರೆ, ಶೇ. 38.66 ಗ್ರಾಮೀಣ ಮಹಿಳೆಯರು ಭಾಗಿಯಾಗಿದ್ದಾರೆ. ನಿಯಮಿತ ಉದ್ಯೋಗದಲ್ಲಿ ಈ ಪ್ರಮಾಣ ಶೇ. 56.87 ಮತ್ತು ಶೇ. 8.9ರಷ್ಟಿದ್ದರೆ, ಸಾಂದರ್ಭಿಕ ಉದ್ಯೋಗದಲ್ಲಿ ಇದು ಶೇ. 29.35 ಮತ್ತು 24.83ರಷ್ಟಿದೆ. ಈ ವಿಶಾಲ ಚೌಕಟ್ಟಿನೊಳಗೆ, ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವು ನಗರ ಪ್ರದೇಶದ ಮಹಿಳೆಯರಿಗಿಂತ ತುಂಬಾ ಹೆಚ್ಚಾಗಿದೆ ಎಂಬುದನ್ನು ನಾವು ಗಮನಿಸಬೇಕು.

ಹೆಚ್ಚಿನ ಗ್ರಾಮೀಣ ಮಹಿಳೆಯರು ಸ್ವಂತ ಕುಟುಂಬದ ಕೂಲಿಯಾಗಿ ಅಥವಾ ಕೃಷಿ ಮತ್ತು ಸಂಬಂಧಿತ ವಲಯದಲ್ಲಿ ಸಾಂದರ್ಭಿಕ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ ಎಂಬುದು ಇದರ ತಾತ್ಪರ್ಯ. ನಿಯಮಿತ ಸಂಬಳದ ಉದ್ಯೋಗದಲ್ಲಿರುವ ಗಮನಾರ್ಹ ಬಹುಪಾಲು ಮಹಿಳೆಯರೊಂದಿಗೆ ನಗರ ಮಹಿಳಾ ಕಾರ್ಮಿಕರು ಉತ್ತಮ ಸ್ಥಾನದಲ್ಲಿದ್ದಾರೆ. ಆದ್ದರಿಂದ, ಮುಟ್ಟಿನ ರಜೆಯ ಪ್ರಶ್ನೆಯು ನಿಯಮಿತ ಸಂಬಳದ ಉದ್ಯೋಗದಲ್ಲಿರುವ ಮಹಿಳೆಯರಿಗೆ ಮಾತ್ರ ವಾಸ್ತವವಾಗಿ ನಿರ್ಬಂಧಿತವಾಗಿ ಅನ್ವಯಿಸುತ್ತದೆ. ಮುಟ್ಟಿನ ರಜೆಯ ಘೋಷಣೆಯು ಕರ್ನಾಟಕದಲ್ಲಿ ಮಹಿಳೆಯರ ಕಾರ್ಮಿಕ ಬಲದ ಭಾಗವಹಿಸುವಿಕೆಯ ಪ್ರಮಾಣವನ್ನು ಹೆಚ್ಚಿಸಲು ಪ್ರೋತ್ಸಾಹಕವಾಗಿರುತ್ತದೆ.

ರಾಜ್ಯದಲ್ಲಿ ಮುಟ್ಟಿನ ರಜೆಯನ್ನು ಪರಿಚಯಿಸುವ ಪರವಾಗಿ ಮತ್ತೊಂದು ವಾದವಿದೆ. ಕೆಲಸದ ಸ್ಥಳದ ಉತ್ಪಾದಕತೆಯನ್ನು ನಿರ್ಣಯಿಸುವ ಸಾಂಪ್ರದಾಯಿಕ ವಿಧಾನಗಳಲ್ಲಿ (ಪ್ಯಾರಾಮೀಟರ್‌ಗಳು) ಒಂದು ಗೈರುಹಾಜರಿ ದರ, ಅಂದರೆ ಗೈರು ದಿನಗಳು ಮತ್ತು ಒಟ್ಟು ಕೆಲಸದ ದಿನಗಳ ಅನುಪಾತ. ಆದಾಗ್ಯೂ, ಇತ್ತೀಚಿನ ಅಧ್ಯಯನಗಳು ಕೆಲಸದ ಸ್ಥಳದಲ್ಲಿ ದಿನಗಳು ಅಥವಾ ಗಂಟೆಗಳ ಸಂಖ್ಯೆಯಲ್ಲಿ ಮಾತ್ರ ಉತ್ಪಾದಕತೆಯನ್ನು ಅರ್ಥಮಾಡಿಕೊಳ್ಳಲು ಅಥವಾ ಅಳೆಯಲು ಸಾಧ್ಯವಿಲ್ಲ ಎಂಬುದನ್ನು ತೋರಿಸಿವೆ. ಉದ್ಯೋಗಿಗಳು ಕಡಿಮೆ ಉತ್ಪಾದಕತೆಯ ಮಟ್ಟಗಳೊಂದಿಗೆ ಅನಾರೋಗ್ಯಕ್ಕೆ ಒಳಗಾಗುವ ಸಂದರ್ಭಗಳಿವೆ. ಇದನ್ನು 'ಹಾಜರಾತಿ'

ಪುಟ 12 ಕ್ಕೆ

ಕರ್ನಾಟಕದಲ್ಲಿ ಹಲವು ಲಕ್ಷ, ಭಾರತದಲ್ಲಿ 5.8 ಕೋಟಿ ಪಡಿತರ ಚೀಟಿಗಳ ರದ್ದು: ಜನರನ್ನು ತೀವ್ರವಾಗಿ ತಟ್ಟುತ್ತಿರುವ WTO ಜೊತೆಗಿನ ಒಪ್ಪಂದದ ಬಿಸಿ

* ಕಾಂಗ್ರೆಸ್ ಬಡವರ ಅನ್ನ ಕಸಿಯುತ್ತಿದೆ. ದೇವರು ಒಳ್ಳೇದು ಮಾಡ್ತಾನಾ ಇವರಿಗೆ? ಪಾಪಿಗಳ ಸರ್ಕಾರ ಇದು: ಆರ್. ಅಶೋಕ
* ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸುವುದನ್ನು ತಕ್ಷಣ ನಿಲ್ಲಿಸಿ: ಅಶ್ವತ್ ನಾರಾಯಣ:
* 14 ಲಕ್ಷ ಬಡವರ ಬಿಪಿಎಲ್ ಕಾರ್ಡ್ ಕಿತ್ತುಕೊಳ್ಳುವುದು ಘೋರ ಅಪರಾಧ. ಅದರಲ್ಲೂ ಜಾತಿ ಹುಡುಕಿ ಕಾರ್ಡ್ ರದ್ದು. ಬಡವರ ಅನ್ನಕ್ಕೂ ಕನ್ನ ಹಾಕುವ ಪರಮ ಅನ್ಯಾಯ ಇದಾಗಿದೆ: ಸಿ.ಟಿ.ರವಿ
* ಹಿಂದೂಗಳನ್ನೇ ಟಾರ್ಗೆಟ್ ಮಾಡಿ ಬಿಪಿಎಲ್ ಕಾರ್ಡ್ ರದ್ದು ಮಾಡುತ್ತಿದ್ದಾರೆ; ಬಸನಗೌಡ ಪಾಟೀಲ್ ಯತ್ನಾಳ್
* ರಾಜ್ಯ ಸರ್ಕಾರವು ದಿವಾಳಿಯಾಗಿದ್ದು, ಇದೇ ಕಾರಣಕ್ಕೆ ಬಿಪಿಎಲ್ ಕಾರ್ಡ್ ರದ್ದು ಪ್ರಕ್ರಿಯೆ ಪ್ರಾರಂಭಿಸಿದೆ. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ಎಡವಿದೆ. ಇದರಿಂದಲೇ ಆರ್ಥಿಕ ನಷ್ಟವಾಗುತ್ತಿದ್ದು, ಇದನ್ನು ಸರಿದೂಗಿಸಲು ಈ ಕ್ರಮ ಅನುಸರಿಸಲಾಗುತ್ತಿದೆ: ಬಿಜೆಪಿ ಹಾಗೂ ಜೆಡಿಎಸ್.
* ಅನರ್ಹರು ಹೊಂದಿರುವ ಬಿಪಿಎಲ್ ಕಾರ್ಡ್ ರದ್ದುಗೊಂಡಿದ್ದರೆ, ಅವುಗಳನ್ನು ಮರಳಿ ಕೊಡಲಾಗುವುದು. ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಮಾನದಂಡವನ್ನು ರಾಜ್ಯದಲ್ಲೂ ಅನುಸರಿಸಲಾಗುತ್ತಿದೆ. ಆದರೆ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮಾತ್ರ ಈ ವಿಚಾರದಲ್ಲಿ ಮೊಸರಲ್ಲೂ ಕಲ್ಲು ಹುಡುಕುವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ: ಡಿಕೆಶಿ ಮತ್ತು ಸಿದ್ದರಾಮಯ್ಯ.

ಏನಿದು ಇವರ ನಾಟಕ? ನಿಜವಾದ ಕಾರಣವನ್ನು ಯಾಕಾಗಿ ಮರೆಮಾಚುತ್ತಿದ್ದಾರೆ? ಕೇಂದ್ರದಲ್ಲಿ ಆಡಳಿತ ನಡೆಸಿದ ಈ ಎರಡೂ ರಾಜಕೀಯ ಪಕ್ಷಗಳ ಗುರಿ ಏನು? ಇವೆಲ್ಲಕ್ಕೂ ಉತ್ತರ: ವಿಶ್ವ ವಾಣಿಜ್ಯ ಸಂಘಟನೆ(**WTO**) ಜೊತೆಗೆ ಮಾಡಿಕೊಂಡಿರುವ ಸರಕು ಮತ್ತು ಸೇವೆಗಳಿಗೆ ಸಂಬಂಧಿಸಿದ ಸಾಮಾನ್ಯ ಒಪ್ಪಂದ(GATTವನ್ನು ಜಾರಿಗೆ ತರುವುದೇ ಇವರ ಗುರಿಯಾಗಿದೆ. ಈ ಒಪ್ಪಂದವನ್ನು ಜಾರಿಗೆ ತರಬೇಕಾದರೆ, ಕೃಷಿ ಉತ್ಪನ್ನಗಳಿಗೆ ಸರ್ಕಾರ ನೀಡುತ್ತಿರುವ ಬೆಂಬಲ ಬೆಲೆ ಕಡಿತಗೊಳಿಸಬೇಕು, ಧಾನ್ಯಗಳ ಸಂಗ್ರಹ

ಕೆಲ ದಿನಗಳಿಂದ ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ರದ್ದುಗೊಳ್ಳುತ್ತಿರುವ ಬಗ್ಗೆಯೇ ಎಲ್ಲೆಡೆ ಮಾತುಗಳು ಕೇಳಿಬರುತ್ತಿವೆ. ಇದರಿಂದ ಅರ್ಹ ಕುಟುಂಬಗಳೂ ವಂಚಿತರಾಗುತ್ತಿದ್ದಾರೆ. ಬಿಪಿಎಲ್ ಕಾರ್ಡ್‌ಗಳನ್ನು ಕಳೆದುಕೊಂಡ ಬಡ ಕುಟುಂಬದವರಿಂದ ಆಕ್ರೋಶ ವ್ಯಕವಾದ ನಂತರ, ಈಗ ರದ್ದುಗೊಳಿಸಿರುವ ಅರ್ಹ ಬಡಕುಟುಂಬಗಳ ಬಿಪಿಎಲ್ ಕಾರ್ಡ್‌ಗಳನ್ನು ಮರಳಿ ಕೊಡಲು ರಾಜ್ಯ ಸರ್ಕಾರ ಮುಂದಾಗಿದೆ. ಇದು ತಾತ್ಕಾಲಿಕ ಪರಿಹಾರವಷ್ಟೆ. 'ಬಿಟ್ಟಿ ಭಾಗ್ಯ' ಎಂದು ಕರೆಯುತ್ತಿದ್ದ ಬಿಜೆಪಿ ನಾಯಕರು ಜನರ ಆಕ್ರೋಶವನ್ನು ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳತೊಡಗಿದ್ದಾರೆ. ವಿಶ್ವ ವಾಣಿಜ್ಯ ಸಂಘಟನೆ ಜೊತೆಗಿನ ಒಪ್ಪಂದವನ್ನು ಜಾರಿಗೊಳಿಸುತ್ತಿರುವ ಪರಿಣಾಮ ಇದಾಗಿದೆ ಎಂಬ ಸತ್ಯವನ್ನು ಈ ಎರಡೂ ರಾಜಕೀಯ ಪಕ್ಷಗಳು ಜನರಿಂದ ಮುಚ್ಚಿಟ್ಟು ಜನರನ್ನು ಮತ್ತೆ ವಂಚಿಸತೊಡಗಿವೆ.

ಮತ್ತು ದಾಸ್ತಾನುಗಳನ್ನು ಸರ್ಕಾರ ಕಡಿಮೆ ಮಾಡಬೇಕು ಮತ್ತು ಪಡಿತರ ವ್ಯವಸ್ಥೆಯನ್ನು ಇಲ್ಲವಾಗಿಸಬೇಕು. ಇದರ ಪರಿಣಾಮವೇ ಇಂದು ಅನರ್ಹರು ಎಂಬ ಹೆಸರಿನಲ್ಲಿ ರಾಜ್ಯದಲ್ಲಿ ಲಕ್ಷಾಂತರ ಬಿಪಿಎಲ್ ಕಾರ್ಡ್‌ಗಳ ರದ್ದು. ದೇಶದಲ್ಲಿ ಇದುವರೆಗೆ 5.8 ಕೋಟಿ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದೆ.

ಡಿಜಿಟಲೈಸೇಶನ್ ಡ್ರೈವ್‌ನಿಂದಾಗಿ ಭಾರತದಲ್ಲಿ 5.8 ಕೋಟಿ ಪಡಿತರ ಚೀಟಿಗಳ ರದ್ದು!

ಕರ್ನಾಟಕದಲ್ಲಿ ಮಾತ್ರವೇ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಮಾಡುತ್ತಿರುವುದಲ್ಲ. ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿಯೂ ಪಡಿತರ ಚೀಟಿಗಳನ್ನು ರದ್ದು ಮಾಡಲಾಗುತ್ತಿದೆ. ಸಬ್ಸಿಡಿ ದರದ ಅಕ್ಕಿ ಮತ್ತು ಗೋಧಿಯನ್ನು ಪಡೆಯುವ ಅನರ್ಹ ಫಲಾನುಭವಿಗಳನ್ನು ಹೊರಹಾಕುವ ಧಾವಂತದ ನಡುವೆ, ಬಹುತೇಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅರ್ಹ ಕುಟುಂಬಗಳನ್ನೂ ಪಡಿತರ ಸೌಲಭ್ಯ ಪಡೆಯುವುದರಿಂದ ಹೊರಹಾಕುತ್ತಿವೆ.



ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ರದ್ದುಗೊಳಿಸುತ್ತಿರುವುದಕ್ಕೆ ರಾಜ್ಯ ಬಿಜೆಪಿ ನಾಯಕರು ರಾಜ್ಯ ಸರ್ಕಾರವನ್ನು ಹಿಗ್ಗಾಮುಗ್ಗಾ ಟೀಕಿಸುತ್ತಿರುವ ಸಂದರ್ಭದಲ್ಲಿಯೇ 2024ರ ನವೆಂಬರ್ 19ರಂದು ಕೇಂದ್ರ ಆಹಾರ ಸಚಿವಾಲಯದಿಂದ ಮತ್ತಷ್ಟು ಆತಂಕಗೊಳ್ಳುವ ವರದಿ ಬಂದಿದೆ. ಡಿಜಿಟಲ್ ಕ್ರಾಂತಿ ಹೆಸರಿನಲ್ಲಿ ದೇಶದಲ್ಲಿನ 5.8 ಕೋಟಿ ಕುಟುಂಬಗಳ ಪಡಿತರ ಚೀಟಿಗಳನ್ನು ಸರ್ಕಾರ ಕಸಿದುಕೊಂಡಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯು (PDS) ಆಧಾರ್ ಆಧಾರಿತ ದೃಢೀಕರಣ ಮತ್ತು ಎಲೆಕ್ಟ್ರಾನಿಕ್ ನೋ ಯುವರ್ ಕಸ್ಟಮರ್ (eKYC) ಮೂಲಕ 5.8 ಕೋಟಿ ನಕಲಿ ಪಡಿತರ ಕಾರ್ಡ್‌ಗಳನ್ನು ತೆಗೆದುಹಾಕಿದೆ. 80.6 ಕೋಟಿ ಫಲಾನುಭವಿಗಳನ್ನು ಒಳಗೊಂಡಿರುವ ಡಿಜಿಟಲೀಕರಣದ ಚಾಲನೆಯು ಉದ್ದೇಶಿತ ಆಹಾರ ಧಾನ್ಯ ವಿತರಣೆಯನ್ನು ಖಚಿತಪಡಿಸುತ್ತದೆ, ಸೋರಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ ಎಂದು ಆಹಾರ ಇಲಾಖೆ ಹೇಳುತ್ತದೆ.

WTO ಒಪ್ಪಂದದಲ್ಲಿ ಏನಿದೆ?

ವಿಶ್ವ ವಾಣಿಜ್ಯ ಸಂಘಟನೆ(WTO) ಸದಸ್ಯರಾಗಿರುವ ಭಾರತವು ತನ್ನನ್ನು ಒಳಗೊಂಡಂತೆ ಅದರ ಸದಸ್ಯರಿಂದ ಸಹಿ ಮಾಡಿದ ಮತ್ತು ಅನುಮೋದಿಸಲಾದ ಒಪ್ಪಂದಗಳಿಗೆ ಬದ್ಧವಾಗಿ ನಡೆದುಕೊಳ್ಳುತ್ತಿದೆ. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು ಒದಗಿಸುವುದು ವಿರೂಪವೆಂದು ಆ ಒಪ್ಪಂದದ ಆರ್ಟಿಕಲ್-6 ಪರಿಗಣಿಸುತ್ತದೆ ಮತ್ತು ಇದು ಮಿತಿಗಳಿಗೆ ಒಳಪಟ್ಟಿರುತ್ತದೆ. "ಕನಿಷ್ಠ ಬೆಂಬಲ" ದಿಂದ ಉಂಟಾಗುವ ಸಹಾಯಧನವು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಕೃಷಿ ಉತ್ಪಾದನೆಯ ಮೌಲ್ಯದ 10 ಪ್ರತಿಶತವನ್ನು ಮೀರಬಾರದು ಎಂದು ಅದು ಹೇಳುತ್ತದೆ.

ಭಾರತದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ(PDS) ಅಂದರೆ, ಪಡಿತರ ವ್ಯವಸ್ಥೆಯು ಕನಿಷ್ಠ ಬೆಂಬಲ ಬೆಲೆಗಳು ಮತ್ತು ಆಹಾರ ಧಾನ್ಯಗಳ ಸಾರ್ವಜನಿಕ ದಾಸ್ತಾನುಗಳನ್ನು ಒಳಗೊಂಡಿರುತ್ತದೆ. ಭಾರತವು ಡಬ್ಲ್ಯೂಟಿಓ ಜತೆಗಿನ ಈ ಕೃಷಿ ಒಪ್ಪಂದವನ್ನು ಜಾರಿಗೆ ತರಲು ಮುಂದಾಗಿದೆ. ಈ ಕಾರಣದಿಂದಾಗಿಯೇ ಆಹಾರ ಭದ್ರತೆ ನೀಡುವ ತನ್ನ ಜವಾಬ್ದಾರಿಯಿಂದ ನಿಧಾನವಾಗಿ ನುಣುಚಿಕೊಳ್ಳತೊಡಗಿದೆ. ಹಸಿವು ಮತ್ತು ಆಹಾರ ಧಾನ್ಯಗಳ ಕೊರತೆಯ ಸಮಸ್ಯೆಗಳನ್ನು ಪರಿಹರಿಸಲು ಭಾರತವು ಪಿಡಿಎಸ್ ನೊಂದಿಗೆ ಮುಂದುವರಿಯಬೇಕು. ಇದು ಆಹಾರ ಧಾನ್ಯಗಳ ಸಂಗ್ರಹಣೆ ಮತ್ತು ಸಾರ್ವಜನಿಕ ದಾಸ್ತಾನುಗಳನ್ನು ಒಳಗೊಂಡಿರುತ್ತದೆ. ಆದರೆ, ಭಾರತವು WTO ಹಾಕಿರುವ ಷರತ್ತುಗಳನ್ನು ಪೂರೈಸುವತ್ತ ಹೆಜ್ಜೆ ಇಡುತ್ತಿದೆ. ಅಂದಿನ ಪಿ.ವಿ. ನರಸಿಂಹರಾವ್ ಸರ್ಕಾರ, ನಂತರದ ಮನಮೋಹನ್ ಸಿಂಗ್ ಸರ್ಕಾರ (60 ಸಂಸದರಿದ್ದ ಎಡಪಕ್ಷಗಳ ಬೆಂಬಲ ಪಡೆದಿದ್ದ ಯುಪಿಎ ಒಂದರ ಅವಧಿಯಲ್ಲಿ ಇದಕ್ಕೆ ತಡೆ ಉಂಟಾಗಿತ್ತು), ಈಗ ನರೇಂದ್ರ ಮೋದಿ ಸರ್ಕಾರ ಇವರೆಲ್ಲರೂ ವಿಶ್ವ ವಾಣಿಜ್ಯ ಸಂಘಟನೆಯ ಎದುರು ಶರಣಾಗುವ ಮೂಲಕ ಭಾರತದ ಜನರ ಅನ್ನ ಕಸಿಯುತ್ತಿದ್ದಾರೆ. ಮೂರು ಕೃಷಿ ಕಾಯ್ದೆಗಳ ಜಾರಿ (ರೈತರ ಒಂದು ವರ್ಷದ ದಿಟ್ಟ ಹೋರಾಟದ ನಂತರ ಈ ಕಾಯ್ದೆಗಳನ್ನು ಮೋದಿ ಸರ್ಕಾರ ಹಿಂಪಡೆಯಿತಾದರೂ, ಹಿಂಬಾಗಿಲ ಮೂಲಕ ಇವುಗಳನ್ನು ಜಾರಿಗೊಳಿಸುತ್ತಿದೆ), ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಮಾಡದೇ ಇರುವುದು ಸೇರಿದಂತೆ ಇನ್ನೂ ಹಲವು ಯೋಜನೆಗಳು ಇದೇ ಕಾರಣಕ್ಕಾಗಿ. ಆದರೂ ಈ ಎರಡು ರಾಜಕೀಯ ಪಕ್ಷಗಳ ನಾಯಕರು ಪರಸ್ಪರ ಕೆಸರೆರಚಾಟದ ನಾಟಕವಾಡುತ್ತಾ ಜನರಿಂದ ಸತ್ಯವನ್ನು ಮರೆಮಾಚತೊಡಗಿದ್ದಾರೆ.

ಧಾನ್ಯಗಳ ಬದಲು ನೇರ ನಗದು ಯೋಜನೆ

30, ಮಾರ್ಚ್ 2022ರಂದು ಪ್ರೆಸ್ ಇನ್ಫರ್ಮೇಷನ್ ಬ್ಯೂರೋ (PIB) ಪ್ರಕಟಣೆಯ ಮೂಲಕ ಸರ್ಕಾರ ಈ ರೀತಿ ಹೇಳಿದೆ: ಆಹಾರ ಸಬ್ಸಿಡಿಯನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ 'ನೇರ ನಗದು ವರ್ಗಾವಣೆ'ಯನ್ನು ಮೂರು ಕೇಂದ್ರಾಡಳಿತ ಪ್ರದೇಶಗಳಾದ-ಚಂಡೀಗಢ ಮತ್ತು ಪುದುಚೇರಿಯಲ್ಲಿ ಸೆಪ್ಟೆಂಬರ್ 2015ರಿಂದ ಮತ್ತು ದಾದ್ರಾ ಮತ್ತು ನಗರ ಹವೇಲಿಯ ನಗರ ಪ್ರದೇಶಗಳಲ್ಲಿ ಮಾರ್ಚ್ 2016ರಿಂದ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತಿದೆ.


ನೇರ ನಗದು ವರ್ಗಾವಣೆ (DBT) ಆಹಾರ ಧಾನ್ಯಗಳ ಬೃಹತ್ ಭೌತಿಕ ಚಲನೆಯ ಅಗತ್ಯವನ್ನು ಕಡಿಮೆ ಮಾಡಲು, ಫಲಾನುಭವಿಗಳಿಗೆ ತಮ್ಮ ಬಳಕೆಯ ಬುಟ್ಟಿಯನ್ನು ಆಯ್ಕೆ ಮಾಡಲು ಹೆಚ್ಚಿನ ಸ್ವಾಯತ್ತತೆಯನ್ನು ಒದಗಿಸಲು, ಆಹಾರದ ವೈವಿಧ್ಯತೆಯನ್ನು ಹೆಚ್ಚಿಸಲು, ಸೋರಿಕೆಯನ್ನು ಕಡಿಮೆ ಮಾಡಲು, ಉತ್ತಮ ಗುರಿಯನ್ನು

ಪುಟ 12 ಕ್ಕೆ


30 ಕೆಜಿ ಅಕ್ಕಿ ಸೋಮಾರಿತನವನ್ನು ಹೆಚ್ಚು ಮಾಡುತ್ತದೆ ಎಂದಿದ್ದ ಪ್ರತಾಪ್ ಸಿಂಹ

"ಸರ್ಕಾರ 30 ಕೆ.ಜಿ ಅಕ್ಕಿಯನ್ನೂ ಕೊಡುತ್ತದೆ, ನರೇಗಾವೆಂಬ ಕಳ್ಳಾಟಕ್ಕೂ 120 ಕೊಡುತ್ತದೆ. ಹೀಗಾಗಿ ನಮ್ಮ ಜನ ಸಾರಾಯಿಗಷ್ಟೇ ಚಿಂತೆಪಡಬೇಕೇ ಹೊರತು, ಅನ್ನಕ್ಕಲ್ಲ. ಮೈ ಬಗ್ಗಿಸಿ ದುಡಿದಿದ್ದರೆ ಆರೋಗ್ಯವಾದರೂ ಸರಿಯಿರುತ್ತಿತ್ತು. ಆದರೆ ಆಗುತ್ತಿರುವುದೇನು? ಇಂತಹ ಉಚಿತ ಸೌಲಭ್ಯಗಳು, ಯೋಜನೆಗಳಿಂದ ಮನುಷ್ಯರಲ್ಲಿ ಆಲಸೀತನ, ಸೋಮಾರಿತನವನ್ನು ಹೆಚ್ಚು ಮಾಡಲಾಗುತ್ತಿದೆಯೇ ಹೊರತು, ಅದರಿಂದ ಜನಕ್ಕಾಗಲಿ, ದೇಶಕ್ಕಾಗಲಿ ಒಳಿತಾಗುತ್ತಿಲ್ಲ." ಇದು 27 ಏಪ್ರಿಲ್, 2013ರ ಕನ್ನಡಪ್ರಭ ಪತ್ರಿಕೆಯಲ್ಲಿನ 'ಬೆತ್ತಲೆ_ಪ್ರಪಂಚ' ಎಂಬ ತಮ್ಮ ಅಂಕಣದಲ್ಲಿನ ಲೇಖನದಲ್ಲಿ ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಬಡವರ ಬಗೆಗಿನ ವ್ಯಂಗ್ಯದ ಮಾತುಗಳು. ಅದೇ ಲೇಖನದಲ್ಲಿ ಅವರು ಹೀಗೆ ಬರೆದಿದ್ದರು: "2004ರಲ್ಲಿ ಪ್ರಧಾನಿ ಸ್ಥಾನವನ್ನು ನಿರಾಕರಿಸುವ ನಾಟಕವಾಡಿ, ರಾಷ್ಟ್ರೀಯ ಸಲಹಾ ಮಂಡಳಿ (ಎನ್‌ಎಸಿ) ಮೂಲಕ ಪರೋಕ್ಷವಾಗಿ ಸರ್ಕಾರದ ಕಡಿವಾಣ ಕೈಗೆತ್ತಿಕೊಂಡ ಸೋನಿಯಾ ಗಾಂಧಿ ನೇತೃತ್ವದ ಈ ಸಮಿತಿಯಲ್ಲಿ ತರ್ಲೆ ಕಮ್ಯುನಿಸ್ಟರೇ ತುಂಬಿಕೊಂಡಿದ್ದಾರೆ. ಇವರ ಸಲಹೆಯ ಫಲವೇ ನರೇಗಾ ಯೋಜನೆ. ವರ್ಷಕ್ಕೆ 100 ದಿನಗಳು ಖಚಿತ ಕೆಲಸ, ದಿನವೊಂದಕ್ಕೆ ಈಗ 120 ಕೂಲಿ ನೀಡುವ ಈ ಯೋಜನೆಯಿಂದ ಎಂಥ ಅನಾಹುತ ಸಂಭವಿಸಿದೆಯೆಂದರೆ ಅಸ್ಸಾಂನ ಟೀ ಎಸ್ಟೇಟ್ ಗಳಿಂದ ಕರ್ನಾಟಕದ ಬತ್ತ ಬೆಳೆಯುವವರೆಗೂ ಕಾರ್ಮಿಕರ ಕೊರತೆ ಕಾಡುತ್ತಿದೆ. ಈ ಯೋಜನೆಗೆ ಇದುವರೆಗೂ 1.25 ಲಕ್ಷ ಕೋಟಿ ವ್ಯಯವಾಗಿದೆ! ಆದರೆ ನರೇಗಾದಿಂದಾಗಿ ಯಾವುದಾದರೂ ಎದ್ದು ಕಾಣುವ ಅಭಿವೃದ್ಧಿ ಕಾರ್ಯಗಳಾಗಿದ್ದನ್ನು ನೋಡಿದ್ದೀರಾ? ನಕಲಿ ಕೂಲಿಕಾರರ ಸೃಷ್ಟಿ, ಕೆಲಸದ ವಿಷಯದಲ್ಲೂ ನಿರ್ದಿಷ್ಟ ಗುರಿಯಿಲ್ಲ. ಹೀಗಾಗಿ 55 ಸಾವಿರ ಕೋಟಿ ವಿನಾಕಾರಣ ಪೋಲಾಗಿದೆ."

ಬಿಜೆಪಿ ಇದೇ ಪ್ರತಾಪ್ ಸಿಂಹನಿಗೆ ಲೋಕಸಭಾ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿಕೊಂಡಿತು. ಪ್ರತಾಪ್ ಸಿಂಹ ಮಾತ್ರವಲ್ಲ, ಬಡವರಿಗಾಗಿ ತಂದಿರುವ ಯಾವುದೇ ಯೋಜನೆಗಳನ್ನು 'ಬಿಟ್ಟಿ ಭಾಗ್ಯ' ಎಂದೇ ಕರೆಯುತ್ತಾರೆ. ಅಂದರೆ, ಬಿಜೆಪಿ ಪಡಿತರ ವ್ಯವಸ್ಥೆಯ ಬಗ್ಗೆ ಹೊಂದಿರುವ ನಿಲುವೇನು ಎಂಬುದನ್ನು ಇದು ತೋರಿಸುತ್ತದೆ. ಇವೆಲ್ಲವನ್ನೂ ನೋಡಿದರೆ, ಇಂದು ಬಿಪಿಎಲ್ ಕಾರ್ಡ್ ಗಳನ್ನು ಕಳೆದುಕೊಂಡವರ ಪರವಾದ ಅದರ ಕನಿಕರದ ಮಾತುಗಳು ಮೊಸಳೆ ಕಣ್ಣೀರಲ್ಲದೆ ಮತ್ತೇನು?







ಮಹಾಯುತಿಯ 'ಮಹಾ' ವಿಜಯ ಹೇಗಾಯಿತು?

ವಸಂತರಾಜ್ ಎನ್.ಕೆ.

ಬಿಜೆಪಿ ನಾಯಕತ್ವದ ಮಹಾಯುತಿ ಕೂಟ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳಲ್ಲಿ ಮಹಾವಿಜಯ ಗಳಿಸಿದೆ. ಎಪ್ರಿಲ್‌ನ ಲೋಕಸಭಾ ಚುನಾವಣೆಯಲ್ಲಿ ನೆಲ ಕಚ್ಚಿದ್ದ ಮಹಾಯುತಿಯ ಚುನಾವಣಾ ಸಾಧನೆಯಲ್ಲಿ ನಾಟಕೀಯ ತಿರುವು ಕಂಡಿದೆ. 'ಗೆಲುವು ನಮ್ಮದೇ' ಎಂದು ಬೀಗಿದ್ದ ಮಹಾರಾಷ್ಟ್ರ ವಿಕಾಸ ಅಘಾಡಿ ಮಹಾಸೋಲು ಕಂಡಿದೆ. ಹರಿಯಾಣ, ಮಹಾರಾಷ್ಟ್ರಗಳಲ್ಲಿ ಬಿಜೆಪಿ/ಎನ್‌ಡಿಎ ಅನಿರೀಕ್ಷಿತ ವಿಜಯವು ದೇಶದ ರಾಜಕಾರಣದಲ್ಲಿ ಮಹತ್ವದ ಪರಿಣಾಮ ಬೀರಲಿದೆ. ಮಹಾಯುತಿಯ ಮಹಾವಿಜಯದ ವಿವರಣೆ ಮತ್ತು ಅದರ ಹಿಂದಿರಬಹುದಾದ ಕಾರಣಗಳ ವಿಶ್ಲೇಷಣೆ ಇಲ್ಲಿದೆ.

ಚುನಾವಣಾ ಅಂಕಿಅಂಶಗಳನ್ನು ನೋಡಿದರೆ ಮಹಾಯುತಿಗೆ ಮಹಾವಿಜಯ ದೊರಕಿದೆ. ಕೆಲವೇ ತಿಂಗಳುಗಳ ಹಿಂದೆ ನಡೆದ ಲೋಕಸಬಾ ಚುನಾವಣೆಗೆ ಹೋಲಿಸಿದರೆ ಪ್ರಚಂಡ ಮುನ್ನಡೆ ಸಾಧಿಸಿದೆ. ಕಳೆದ ವಿಧಾನಸಭೆಗೆ ಹೋಲಿಸಿದರೂ ಉತ್ತಮ ಮುನ್ನಡೆ ಸಾಧಿಸಿದೆ. ಕೋಷ್ಟಕ–1ರಲ್ಲಿ ಪ್ರತಿ ಪಕ್ಷ ಮತ್ತು ಕೂಟದ ಸೀಟು ಗಳಿಕೆ ಹಾಗೂ ಕಳೆದ ವಿಧಾನಸಭೆಯ (2022ರಲ್ಲಿ ಶಿವಸೇನಾ ಮತ್ತು ಎನ್‌ಸಿಪಿ ವಿಭಜನೆಯ ನಂತರದ) ಸೀಟು ಸ್ಥಿತಿಯಿಂದ ಮತ್ತು ಇತ್ತೀಚಿನ (ಏಪ್ರಿಲ್ 2024) ಲೋಕಸಬಾ ಚುನಾವಣೆಗಳಲ್ಲಿ ವಿಧಾನಸಭೆಗಳಲ್ಲಿ ಮುನ್ನಡೆಯಿಂದ ವ್ಯತ್ಯಾಸ (ಏರಿಕೆ/ಇಳಿಕೆ), ಪ್ರತಿ ಪಕ್ಷ ಮತ್ತು ಕೂಟದ ಮತ ಗಳಿಕೆ ಪ್ರಮಾಣ (%), ಲೋಕಸಬಾ ಚುನಾವಣೆಯ ಫಲಿತಾಂಶದಿಂದ ವ್ಯತ್ಯಾಸ (ಏರಿಕೆ/ಇಳಿಕೆ)ವನ್ನು ಸಹ ಕೊಡಲಾಗಿದೆ.

ಕೋಷ್ಟಕ 1 ರಿಂದ ತಿಳಿಯುವ ಅಂಶಗಳು ಹೀಗಿವೆ:

* ಮಹಾಯುತಿ ಕೂಟ ತನ್ನ ಮತಗಳಿಕೆಯನ್ನು ಶೇಕಡಾ 4.3ರಷ್ಟು ಹೆಚ್ಚಿಸಿಕೊಂಡಿದೆ. ಮಹಾ ವಿಕಾಸ ಅಘಾಡಿ ಶೇ. 10ರಷ್ಟು ಮತ ಕಳೆದುಕೊಂಡಿದೆ. ಹೀಗಾಗಿ ಮಹಾಯುತಿ ಕೂಟ ಶೇ.15ರಷ್ಟು ಮತ ಅಂತರದಿಂದ ಪ್ರಚಂಡ ಮುನ್ನಡೆ ಸಾಧಿಸಿ ಮುಕ್ಕಾಲುಕ್ಕಿಂತಲೂ ಹೆಚ್ಚು ಸೀಟುಗಳನ್ನು ಪಡೆದಿದೆ.
* ಮಹಾಯುತಿಯ ಪಕ್ಷಗಳಲ್ಲಿ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಶಿವಸೇನಾ (ಶಿಂಧೆ ಬಣ)ದ ಮತಪ್ರಮಾಣದಲ್ಲಿ ಸ್ವಲ್ಪ ಕಡಿಮೆಯಗಿದ್ದು (–0.6%) ಮತ್ತು ಬಿಜೆಪಿಯ ಮತಪ್ರಮಾಣದಲ್ಲಿ ಸ್ವಲ್ಪ ಏರಿಕೆಯಾಗಿದ್ದು (+0.6), ಎನ್‌ಸಿಪಿ (ಅಜಿತ್ ಪವಾರ್ ಬಣ) ಮತಪ್ರಮಾಣದಲ್ಲಿ ಗಮನಾರ್ಹ ಏರಿಕೆ (ಶೇ. 5.4) ಕಂಡಿದೆ
* ಮಹಾ ವಿಕಾಸ ಅಘಾಡಿಯ ಪಕ್ಷಗಳಲ್ಲಿ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಮತಪ್ರಮಾಣದಲ್ಲಿ ಶೀವಸೇನಾ (ಊದ್ಧವ ಬಣ) (–6.5%) ಕಾಂಗ್ರೆಸ್ (–4.5%) ಗಮನಾರ್ಹ ಇಳಿಕೆಯಾಗಿದೆ, ಎನ್‌ಸಿಪಿ (ಶರತ್ ಪವಾರ್ ಬಣ) ಮತಪ್ರಮಾಣದಲ್ಲಿ ಸಣ್ಣ ಏರಿಕೆ (1.0%) ಆಗಿದೆ.
* ಮಹಾಯುತಿ ಕಳೆದ ಲೋಕಸಭಾ ಚುನಾವಣೆಯ ಸ್ಥಿತಿಗೆ ಹೋಲಿಸಿದರೆ 106 ಹೆಚ್ಚಿನ ಸೀಟುಗಳಲ್ಲಿ ಮುನ್ನಡೆ ಸಾಧಿಸಿದೆ. ಕಳೆದ ವಿಧಾನಸಭೆಯ (2022ರ ನಂತರದ ಸ್ಥಿತಿಗೆ) ಹೋಲಿಸಿದರೆ 49 ಹೆಚ್ಚಿನ ಸೀಟು ಪಡೆದಿದೆ. ಎನ್‌ಸಿಪಿ ಲೋಕಸಭಾ ಚುನಾವಣೆ ಸ್ಥಿತಿಗೆ ಹೋಲಿಸಿದರೆ (ಇದರಲ್ಲಿ ಅದರ ಸಾಧನೆ ಭಾರೀ ಕಳಪೆಯಾಗಿದ್ದರಿಂದ) ಭಾರೀ ಮುನ್ನಡೆ ಸಾಧಿಸಿದರೆ, ಹಿಂದಿನ ವಿಧಾನಸಭೆಗೆ ಹೋಲಿಸಿದರೆ ತನ್ನ ಸ್ಥಾನಗಳನ್ನು ಕಾಯ್ದುಕೊಂಡಿದೆ ಅಷ್ಟೇ.
* ಮಹಾ ವಿಕಾಸ ಅಘಾಡಿ ಕಳೆದ ಲೋಕಸಭಾ ಚುನಾವಣೆ ಸ್ಥಿತಿಗೆ ಹೋಲಿಸಿದರೆ 105 ಸೀಟುಗಳನ್ನು, ಮತ್ತು ಕಳೆದ ವಿಧಾನಸಭೆಯ (2022ರ ನಂತರದ ಸ್ಥಿತಿಗೆ) ಹೋಲಿಸಿದರೆ 26 ಸೀಟುಗಳನ್ನೂ ಕಳೆದುಕೊಂಡಿದೆ. ಕಳೆದ ಲೋಕಸಭಾ ಚುನಾವಣೆ ಸ್ಥಿತಿಗೆ ಹೋಲಿಸಿದರೆ ಕೂಟ ಭಾರೀ ಸಂಖ್ಯೆಯ ಸೀಟುಗಳನ್ನು ಕಳೆದುಕೊಂಡಿವೆ. ಆದರೆ ಹಿಂದಿನ ವಿಧಾನಸಭೆಗೆ ಹೋಲಿಸಿದರೆ ಎನ್‌ಸಿಪಿ (ಶರತ್ ಪವಾರ್ ಬಣ) 2 ಸೀಟು ಕಳೆದುಕೊಂಡಿದೆ. ಶಿವಸೇನಾ (ಉದ್ಧವ್ ಬಣ) 4 ಸೀಟು ಹೆಚ್ಚಿಸಿಕೊಂಡಿದೆ. ಆದರೆ ಕಾಂಗ್ರೆಸ್ ಭಾರೀ ಪ್ರಮಾಣದಲ್ಲಿ (28) ಸೀಟು ಕಳೆದುಕೊಂಡಿದೆ.
* ಇತರ ಪಕ್ಷಗಳು ಮತ್ತು ಪಕ್ಷೇತರರ ಮತಪ್ರಮಾಣ ಸಹ ಈ ಬಾರಿ ಶೇ. 6.9 ಏರಿದ್ದೂ ಮಹಾಯುತಿಯ ಪ್ರಚಂಡ ಗೆಲುವಿಗೆ ನೆರವಾಗಿದೆ. 2019ರ ವಿಧಾನಸಭೆಯಲ್ಲಿ ಹಲವು ಪಕ್ಷೇತರರು ಮತ್ತು ಎರಡೂ ಕೂಟಗಳಿಗೆ ಸೇರದ ಹಲವು ಪಕ್ಷಗಳು ಗಮನಾರ್ಹ ಮತಪ್ರಮಾಣ ಮತ್ತು ಸೀಟು ಗಳಿಸಿದ್ದವು. ಪಕ್ಷೇತರರು 13 ಮತ್ತು ಇತರ ಪಕ್ಷಗಳ 5 ಅಭ್ಯರ್ಥಿಗಳು ಗೆದ್ದಿದ್ದು, ಶೇ. 20ರಷ್ಟು ಮತ ಪಡೆದಿದ್ದರು. ಅದು ಯುಪಿಎಯ ಸೋಲಿಗೆ ಒಂದು ಕಾರಣವಾಗಿತ್ತು. ಆದರೆ ಇವರ ಮತಪ್ರಮಾಣ 2024ರ ಲೋಕಸಭಾ ಚುನಾವಣೆಯಲ್ಲಿ ಕಡಿಮೆಯಾಗಿದ್ದು, ಮತ್ತೆ 2024ರ ವಿಧಾನಸಭಾ ಚುನಾವಣೆಗಳಲ್ಲಿ ಹೆಚ್ಚಾಗಿದೆ.

ಕೋಷ್ಟಕ-1

ಪಕ್ಷ/ಕೂಟ	ಸೀಟು ಸ್ಪರ್ಧೆ	ಸೀಟು ಗಳಿಕೆ	ಸೀಟು ವ್ಯತ್ಯಾಸ (ಲೋಕಸಭಾ ಚು.2024)	ಸೀಟು ವ್ಯತ್ಯಾಸ (2022ರಿಂದ ವಿಧಾನಸಭಾ)	ಮತ ಗಳಿಕೆ %	ಮತಗಳಿಕೆ ವ್ಯತ್ಯಾಸ (ಲೋಕಸಭಾ ಚು.2024)
ಬಿಜೆಪಿ	149	132	+49	+27	26.8	+0.6
ಶಿವಸೇನಾ (ಶಿಂಧೆ)	81	57	+19	+19	12.4	-0.6
ಎನ್.ಸಿ.ಪಿ (ಅಜಿತ್ ಪವಾರ್)	59	41	+35	+1	9.0	+5.4
ಇತರ #	6	4	+3	+2	1.1	+0.1
ಮಹಾಯುತಿ	**295***	**234**	**+106**	**+49**	**49.3%**	**+4.3**
ಕಾಂಗ್ರೆಸ್	101	16	-47	-28	12.4	-4.5
ಶಿವಸೇನಾ (ಉದ್ಧವ್)	95	20	-36	+4	10.0	-6.5
ಎನ್.ಸಿ.ಪಿ (ಶರತ್ ಪವಾರ್)	86	10	-22	-2	11.3	+1.0
ಇತರರು&	18	4	-	-	1.5	-
ಮಹಾವಿಕಾಸ ಅಘಾಡಿ	**300***	**50**	**-105**	**-26**	**35.2**	**-10.0**
ಇತರಪಕ್ಷಗಳು!		2	-2	-15	7.2	+4.8
ಪಕ್ಷೇತರರು		2	-4	-11	8.3	+2.1

* ಎರಡು ಕೂಟದಲ್ಲೂ ಪಕ್ಷಗಳು ತಮಗೆ ಕೂಟದಲ್ಲಿ ದೊರಕದ ಕೆಲವು ಸೀಟುಗಳಲ್ಲಿ ಪರಸ್ಪರ ಸ್ಪರ್ಧೆಗೆ ಇಳಿದಿದ್ದರಿಂದ ಒಟ್ಟು ಸ್ಪರ್ಧಿಸಿದ ಸೀಟುಗಳ ಸಂಖ್ಯೆ 288 ಕ್ಕಿಂತ ಹೆಚ್ಚಿದೆ.

ಮಹಾಯುತಿಯಲ್ಲಿ ಸ್ಪರ್ಧಿಸಿದ ಇತರ ಪಕ್ಷಗಳು (ಮತ್ತು ಪಡೆದ ಸೀಟುಗಳು) – JSS (2), RYSP(1), RSVA(1)

& ಮಹಾವಿಕಾಸ ಅಘಾಡಿಯಲ್ಲಿ ಸ್ಪರ್ಧಿಸಿದ ಇತರ ಪಕ್ಷಗಳು (ಮತ್ತು ಪಡೆದ ಸೀಟುಗಳು) - SP (2), CPI(M) (1), PWPI (1)! ಕೂಟಕ್ಕೆ ಸೇರದ ಇತರ ಪಕ್ಷಗಳು – AIMIM(1), RSPS(1)

ಮಹಾವಿಜಯ – ಸಮಗ್ರ, ಆಶ್ಚರ್ಯಕರ

'ದಿ ಹಿಂದೂ' ಪತ್ರಿಕೆ ನಡೆಸಿದ ಮತದಾನದ ವಿವರವಾದ ಅಧ್ಯಯನದ ಪ್ರಕಾರ, ಮಹಾ ವಿಕಾಸ ಅಘಾಡಿ ರಾಜ್ಯದ ಆರೂ ಪ್ರದೇಶಗಳಲ್ಲಿ ಗಮನಾರ್ಹ ಮತಪ್ರಮಾಣ ಕಳೆದುಕೊಂಡಿದೆ. ಯಾವ ಪ್ರದೇಶದಲ್ಲೂ ಮುನ್ನಡೆ ಸಾಧಿಸಿಲ್ಲ, ಹಿಂದಿನ ಮುನ್ನಡೆ ಉಳಿಸಿಕೊಂಡಿಲ್ಲ. ಈ ಕೂಟ ಹಿಂದೆ ಗ್ರಾಮೀಣ, ಅರೆ ಗ್ರಾಮೀಣ ಪ್ರದೇಶಗಳಲ್ಲಿ ಇದ್ದ ಮುನ್ನಡೆ ಸಹ ಕಳೆದುಕೊಂಡಿದೆ. ಅದೇ ರೀತಿ –ಶ್ರೀಮಂತ, ಮಧ್ಯಮ, ಬಡ– ಎಲ್ಲ ಆದಾಯ ಗುಂಪುಗಳಲ್ಲಿ ಗಮನಾರ್ಹ ಮತಪ್ರಮಾಣ ಕಳೆದುಕೊಂಡಿದೆ. ಹೀಗೆ ಮಹಾಯುತಿ ಮಹಾ ವಿಕಾಸ ಅಘಾಡಿ ಮೇಲೆ ಸಮಗ್ರ ಜಯ ಗಳಿಸಿದೆ, ಭಾರೀ ಮುನ್ನಡೆ ಸಾಧಿಸಿದೆ ಎಂದು ಅಂಕೆಸಂಖ್ಯೆಗಳು ಹೇಳುತ್ತಿವೆ.

'ದಿ ಹಿಂದೂ' ಅಧ್ಯಯನದಿಂದ ಈ ಮುಂದಿನ ಅಂಶಗಳನ್ನು ಗಮನಿಸಬಹುದು: ಕೊಂಕಣ, ಮುಂಬಯಿ–ಠಾಣೆ, ಪಶ್ಚಿಮ ಮಹಾರಾಷ್ಟ್ರ, ಉತ್ತರ ಮಹಾರಾಷ್ಟ್ರ, ವಿದರ್ಭ, ಮರಾಠವಾಡ– ಚಾರಿತ್ರಿಕ, ಸಮಾಜೋ–ಆರ್ಥಿಕ ಬೆಳವಣಿಗೆಗಳಲ್ಲಿ ಭಿನ್ನವಾಗಿದ್ದು ಹೀಗಾಗಿ ರಾಜಕೀಯವಾಗೂ ಭಿನ್ನವಾಗಿ ವರ್ತಿಸುವ ರಾಜ್ಯದ ಆರು ಪ್ರದೇಶಗಳು. ಕೊಂಕಣ, ಮುಂಬಯಿ–ಠಾಣೆಗಳಲ್ಲಿ ಶಿವಸೇನಾ ಪ್ರಬಲವಾಗಿದ್ದರೆ, ಪಶ್ಚಿಮ ಭಾಗ ಎನ್‌ಸಿಪಿ ಪ್ರಾಬಲ್ಯದ ಸಕ್ಕರೆ ನಾಡು, ವಿದರ್ಭ ಮರಾಠವಾಡಗಳು ಕಾಂಗ್ರೆಸ್ ಪ್ರಬಲ ಪ್ರದೇಶಗಳಾದರೆ, ಬಿಜೆಪಿ ಹೆಚ್ಚಿನ ಪ್ರದೇಶಗಳಲ್ಲಿ ನಗರ, ಅರೆ–ನಗರ ಪ್ರದೇಶಗಳಲ್ಲಿ ಪ್ರಬಲವಾಗಿದೆ. ಕಾಂಗ್ರೆಸ್ ಗ್ರಾಮೀಣ, ಅರೆ–ಗ್ರಾಮೀಣ ಪ್ರದೇಶಗಳಲ್ಲಿ ನೆಲೆ ಹೊಂದಿದ್ದವು.

ಹಾಗೆನೇ ಶ್ರೀಮಂತ, ಮಧ್ಯಮ ವರ್ಗಗಳಲ್ಲಿ ಬಿಜೆಪಿ ಹೆಚ್ಚು ಗಟ್ಟಿ ನೆಲೆ ಹೊಂದಿದ್ದರೆ, ಕಾಂಗ್ರೆಸ್ ಬಡವರಲ್ಲಿ ಹೆಚ್ಚು ನೆಲೆ ಹೊಂದಿದ್ದವು. ಶಿವಸೇನಾ, ಎನ್‌ಸಿಪಿ ಪ್ರಬಲ ಮರಾಠಾ ಸಮುದಾಯದಲ್ಲಿ ನೆಲೆ ಹೊಂದಿದ್ದರೆ, ಬಿಜೆಪಿ ಉಚ್ಚ ಜಾತಿಗಳು, ಕೆಲವು ಒಬಿಸಿ ಸಮುದಾಯಗಳಲ್ಲಿ, ಕಾಂಗ್ರೆಸ್ ದಲಿತ, ಆದಿವಾಸಿ, ಮುಸ್ಲಿಂ ಸಮುದಾಯಗಳಲ್ಲಿ ನೆಲೆ ಹೊಂದಿತ್ತು. ಇವು ಮತಗಳಿಕೆ, ಸೀಟು ಗಳಿಕೆಯಲ್ಲಿ ಬಿಂಬಿತವಾಗುತ್ತಿದ್ದವು ಆದರೆ ಈ ಯಾವ ಭಿನ್ನತೆಗಳಿಲ್ಲದೆ ಎಲ್ಲ ಜನವಿಭಾಗಗಳಲ್ಲೂ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಮಹಾಯುತಿ ಮತಪ್ರಮಾಣವನ್ನು (ಸಮಾನವಾಗಿ ಅಲ್ಲದಿದ್ದರೂ) ಗಮನಾರ್ಹವಾಗಿ ಏರಿಸಿಕೊಂಡಿರುವುದು, ಮಹಾ ವಿಕಾಸ ಅಘಾಢಿ ಎಲ್ಲ ಜನವಿಭಾಗಗಳಲ್ಲಿ ಮತಪ್ರಮಾಣವನ್ನು ಗಮನಾರ್ಹವಾಗಿ ಕಳೆದುಕೊಂಡಿರುವುದು ಆಶ್ವರ್ಯಕರವೂ ಆಗಿದೆ.

ಮಹಾಯುತಿ ಕೂಟದ ಈ ಆಶ್ಚರ್ಯಕರ ಸಮಗ್ರ 'ಮಹಾ' ವಿಜಯ ಹೇಗಾಯಿತು, ಎನ್ನುವುದಕ್ಕೆ ಕೆಲವು ಸ್ಥೂಲ ಕಾರಣಗಳನ್ನು ಹುಡುಕಬಹುದು.

'ಲಾಡ್ಕಿ ಬಹಿಣ' ಯೋಜನೆ ಮೆಚ್ಚಿದ ಮಹಿಳೆಯರು

ಲೋಕಸಭೆಯಲ್ಲಿ ಪರಾಭವದ ನಂತರ ಮಹಾಯುತಿ ಸರಕಾರ ಹಲವಾರು ಕಲ್ಯಾಣ ಯೋಜನೆಗಳನ್ನು ಘೋಷಿಸಿತು, ಮಾತ್ರವಲ್ಲ ಮಿಂಚಿನ ವೇಗದಲ್ಲಿ ಚುನಾವಣೆಯವರೆಗೆ ಇದ್ದ ಅವಧಿಯಲ್ಲಿ ಅಚ್ಚುಕಟ್ಟಾಗಿ ಜಾರಿಗೆ ತಂದಿತು. ಅದರ ಕುರಿತು ಬಿರುಸಿನ ಪ್ರಚಾರ ಮಾಡಿತು. ಇವುಗಳಲ್ಲಿ ವಾರ್ಷಿಕ ಆಧಾಯ 2.5 ಲಕ್ಷ ರೂ ಗಿಂತ ಕಡಿಮೆ ಇರುವ 21–65 ವಯಸ್ಸಿನ ಮಹಿಳೆಯರಿಗೆ ತಿಂಗಳಿಗೆ ರೂ.1500 ಕೊಡುವ 'ಲಾಡ್ಕಿ ಬಹಿಣ' (ಮುದ್ದಿನ ಸೋದರಿ) ಯೋಜನೆ ಅತಿ ಹೆಚ್ಚು ಪ್ರಭಾವ ಬೀರಿದಂತೆ ಕಾಣುತ್ತದೆ. ಇದನ್ನು 5 ತಿಂಗಳುಗಳ ಕಾಲ ಜಾರಿಗೆ ತಂದಿದ್ದು ಎಲ್ಲ ಜನವಿಭಾಗಗಳ ಬಡ ಮಹಿಳೆಯರಲ್ಲಿ ಇದು ಪ್ರಬಲ ಮಹಾಯುತಿ–ಪರ ಒಲವು ಉಂಟು

ಪುಟ 11 ಕ್ಕೆ



ಕೃಪೆ: ಪಿ. ಮಹಮ್ಮದ್

ಸಂಭಲ್: ನ್ಯಾಯಾಂಗದ ಅತಿರೇಕ ನಿಲ್ಲಲಿ

ಪ್ರಕಾಶ್ ಕಾರತ್

ಉತ್ತರ ಪ್ರದೇಶದ ಸಂಭಲ್‌ನಲ್ಲಿ ಇತ್ತೀಚೆಗೆ ನಡೆದ ಘಟನೆಗಳು ಮತ್ತು ಐದು ಮುಸ್ಲಿಂ ಯುವಕರ ಸಾವು, 1991ರಲ್ಲಿ ಸಂಸತ್ತು ರೂಪಿಸಿದ್ದ ಪೂಜಾ ಸ್ಥಳಗಳ (ವಿಶೇಷ ನಿಯಮಗಳು) ಕಾನೂನು–1991ರ ಮಹತ್ವವನ್ನು ತೋರಿಸುತ್ತದೆ. ಈ ಕಾನೂನು, 'ಯಾವುದೇ ಪೂಜಾ ಸ್ಥಳವನ್ನು ಪರಿವರ್ತಿಸುವುದನ್ನು' ನಿಷೇಧಿಸುತ್ತದೆ (ಸೆಕ್ಷನ್ 3) ಮತ್ತು 'ಯಾವುದೇ ಪೂಜಾ ಸ್ಥಳವು 1947ರ ಆಗಸ್ಟ್ 15ರಂದು ಹೇಗೆ ಇತ್ತೋ ಅದೇ ರೀತಿಯಲ್ಲಿ ಅದರ ಸ್ಥಾನಮಾನವನ್ನು ನಿರ್ವಹಿಸಬೇಕು' (ಸೆಕ್ಷನ್ 4) ಎಂದು ಹೇಳಿದೆ. 'ಯಾವುದೇ ಧರ್ಮ ಅಥವಾ ಪಂಗಡಕ್ಕೆ ಸೇರಿದ ಪ್ರಾರ್ಥನಾ ಸ್ಥಳವನ್ನು ಅದೇ ಧರ್ಮದವರ ಇನ್ನೊಂದು ವಿಭಾಗದವರು ಅಥವಾ ಬೇರೊಂದು ಧರ್ಮದ ಪೂಜಾ ಸ್ಥಳವನ್ನಾಗಿ ಯಾವ ವ್ಯಕ್ತಿಯೂ ಪರಿವರ್ತಿಸಲಾಗದು'. ರಾಮ ಜನ್ಮಭೂಮಿ–ಬಾಬರಿ ಮಸೀದಿ ವಿವಾದವನ್ನು ಈ ಕಾನೂನಿನ ವ್ಯಾಪ್ತಿಯಿಂದ ಹೊರಗಿಡಲಾಯಿತು. 2019ರಲ್ಲಿ, ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿದ ಐದು ಸದಸ್ಯರ ಪೀಠ ಕೂಡ ಪೂಜಾ ಸ್ಥಳಗಳ ಕಾನೂನಿನ ಸಿಂಧುತ್ವವನ್ನು ಪುನರುಚ್ಚರಿಸಿತ್ತು. ಧಾರ್ಮಿಕ ಸ್ಥಳಗಳ ಮೇಲಿನ ಹಕ್ಕು ಸ್ವಾಮ್ಯವನ್ನು ಕಾನೂನು ಮಾನ್ಯ ಮಾಡಲು ಸಾಧ್ಯವಿಲ್ಲ ಎಂದೂ ಹೇಳಿತ್ತು. ಆದರೆ, 2022ರ ಮೇನಲ್ಲಿ ಸುಪ್ರೀಂ ಕೋರ್ಟ್, ವಾರಾಣಾಸಿಯಲ್ಲಿರುವ ಜ್ಞಾನವಾಪಿ ಮಸೀದಿಯ ಸಮೀಕ್ಷೆಗೆ ಅವಕಾಶ ಕಲ್ಪಿಸಿತು. ನಾಶ ಮಾಡಲಾದ ದೇವಾಲಯವೊಂದರ ಮೇಲೆ ಮಸೀದಿಯನ್ನು ಕಟ್ಟಲಾಗಿದೆ ಎಂದು ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಲಾದ ಅರ್ಜಿಯಲ್ಲಿ ಹೇಳಲಾಗಿತ್ತು. ಧಾರ್ಮಿಕ ಸ್ಥಳವೊಂದರ ಸ್ವರೂಪವನ್ನು ಕಂಡು ಹಿಡಿಯುವುದನ್ನು 1991ರ ಕಾನೂನು ನಿರ್ಬಂಧಿಸಿಲ್ಲ ಎಂದು ಅಭಿಪ್ರಾಯಪಟ್ಟ, ಅಂದಿನ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಸಮೀಕ್ಷೆಯನ್ನು ಮುಂದುವರಿಸಲು ಅನುಮತಿಸಿತು. ನಂತರ, 1947ರ ಆಗಸ್ಟ್ 15ರಲ್ಲಿದ್ದಂತೆ ಆ ಸ್ಥಳದ ಸ್ಥಾನಮಾನವನ್ನು ತಿಳಿಯುವುದಷ್ಟೇ ಅರ್ಜಿದಾರರ ಉದ್ದೇಶವಾಗಿದೆ. ಅದನ್ನು ಬದಲಿಸುವುದಾಗಲೀ ಅದರ ಸ್ವರೂಪವನ್ನು ಪರಿವರ್ತಿಸುವುದಾಗಲೀ ಅವರ ಬಯಕೆಯಲ್ಲ ಎಂದೂ ಸರ್ವೋಚ್ಚ ನ್ಯಾಯಾಲಯ ಹೇಳಿತ್ತು.

ಅತಿರೇಕದ ತೀರ್ಪು

ಈ ಅತಿರೇಕದ ತೀರ್ಪು, ಮಸೀದಿಗಳು ಇರುವಲ್ಲೆಲ್ಲ ಕಾನೂನು ವಿವಾದಗಳನ್ನು ಕೆದಕಲು ಹಿಂದೂ ಕೋಮುವಾದಿಗಳಿಗೆ ಅವಕಾಶದ ಹೆಬ್ಬಾಗಿಲನ್ನೇ ತೆರೆಯಿತು. ಜ್ಞಾನವಾಪಿ ಮಸೀದಿ ಸಮೀಕ್ಷೆ ಬೇಡಿಕೆ ರೀತಿಯಲ್ಲೇ ಮಥುರಾದ ಈದ್ಗಾದ ವಿಚಾರದಲ್ಲೂ ಬೇಡಿಕೆ ಮಂಡನೆಯಾಗಿ ಸಮೀಕ್ಷೆಗೆ ಜಿಲ್ಲಾ ಕೋರ್ಟ್ ಆದೇಶಿಸಿದೆ. ಅದರ ಮುಂದಿನ ಸರದಿಯೇ ಸಂಭಾಲ್. 1526ರಲ್ಲಿ ನಿರ್ಮಿಸಲಾದ ಮೊಘಲ್ ಕಾಲದ ಮಸೀದಿಯ ಸಮೀಕ್ಷೆ ನಡೆಸಲು ನವೆಂಬರ್ 19ರಂದು ಜಿಲ್ಲಾ ಕೋರ್ಟ್ ಆದೇಶಿಸಿತ್ತು. ಮಥುರಾ ಮತ್ತು ವಾರಾಣಸಿ ಜಿಲ್ಲಾ ಕೋರ್ಟ್‌ಗಳಿಗೆ ಅರ್ಜಿ ಸಲ್ಲಿಸಿದ್ದ ವಿಷ್ಣು ಶಂಕರ್ ಜೈನ್ ಎಂಬ ವಕೀಲನೇ ಸಂಭಾಲ್ ವಿಚಾರದಲ್ಲೂ ಅರ್ಜಿ ಹಾಕಿದ್ದು ಅದರ ಆಧಾರದಲ್ಲಿ ನ್ಯಾಯಾಲಯ ಸಮೀಕ್ಷೆಗೆ ಅನುವು ಮಾಡಿಕೊಟ್ಟಿದೆ. ಮಸೀದಿಯು ಒಂದು ಸಂರಕ್ಷಿತ ಸ್ಮಾರಕ ಎಂಬುದು ವಾಸ್ತವವಾದರೂ ಅರ್ಜಿಯನ್ನು ತಕ್ಷಣವೇ ವಿಚಾರಣೆಗೆ ಅಂಗೀಕರಿಸಲಾಯಿತು. ಅಷ್ಟೇ ಅಚ್ಚರಿಯ ಚುರುಕಿನ ನಡೆಯಲ್ಲಿ, ಅಡ್ವೊಕೇಟ್ ಕಮಿಷನ್ ಒಂದನ್ನು ರಚಿಸಿದ ಜಿಲ್ಲಾ ಕೋರ್ಟ್, ಅದೇ ದಿನ ಸಮೀಕ್ಷೆ ನಡೆಸುವಂತೆ ಆದೇಶಿಸಿತು. ಸಮೀಕ್ಷೆಯ ವರದಿಯನ್ನು ನವೆಂಬರ್ 29ರಂದು ಸಲ್ಲಿಸಬೇಕಿತ್ತು. ಮಸೀದಿ ಸಮಿತಿಗೆ ತನ್ನ ಅಭಿಪ್ರಾಯವನ್ನು ತಿಳಿಸಲು ಕೂಡ ಅವಕಾಶ ನೀಡಲಿಲ್ಲ.

ಮಸೀದಿ ಸಮಿತಿಯ ಸಂಪೂರ್ಣ ಸಹಕಾರದೊಂದಿಗೆ ಸಮೀಕ್ಷೆಯನ್ನು ನಡೆಸಲಾಯಿತು. ಆದರೆ, ನವೆಂಬರ್ 24ರಂದು ಸಮೀಕ್ಷೆ ತಂಡ ಮಸೀದಿಗೆ ಬಂದು ಮತ್ತೆ ಸಮೀಕ್ಷೆಗೆ ಮುಂದಾಯಿತು. ಈ ಸಲ ಸಮಿತಿ ಸದಸ್ಯರೊಂದಿಗೆ ಪೊಲೀಸರಲ್ಲದೆ 'ಜೈ ಶ್ರೀ ರಾಮ್' ಘೋಷಣೆ ಕೂಗುವ ಜನರ ಒಂದು ಗುಂಪೇ ಬಂದಿತ್ತು. ಪ್ರತಿಯಾಗಿ, ಮುಸ್ಲಿಮರೂ ಗುಂಪು ಸೇರಿದಾಗ ಪರಿಸ್ಥಿತಿ ಕೈ ಮೀರಿತು. ಕಲ್ಲು ತೂರಾಟ, ಲಾಠಿ ಪ್ರಹಾರ, ಅಶ್ರುವಾಯು ಶೆಲ್ ಪ್ರಯೋಗ ಹಾಗೂ ಗೋಲಿಬಾರ್ ನಡೆದವು. ಗುಂಡೇಟಿನ ಗಾಯಗಳಿಂದ ಮೂರು ಮುಸ್ಲಿಂ ಯುವಕರು ಸ್ಥಳದಲ್ಲೇ ಮೃತಪಟ್ಟರು. ಇನ್ನಿಬ್ಬರು ಗಾಯಾಳುಗಳು ನಂತರ ಅಸು ನೀಗಿದರು. ಸಮಾಜವಾದಿ ಪಕ್ಷದ ಸ್ಥಳೀಯ ಎಂಪಿ ಹಾಗೂ ಆ ಪಕ್ಷದ ಶಾಸಕರೊಬ್ಬರ ಮಗ ಗಲಭೆ ಹಾಗೂ ಹಿಂಸಾಚಾರವನ್ನು ಪ್ರಚೋದಿಸಿದರು ಎಂದು ಪೊಲೀಸರು ದಾಖಲಿಸಿಕೊಂಡಿರುವ ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

ಆದಿತ್ಯನಾಥ ಪಾರುಪತ್ಯ

ಉತ್ತರ ಪ್ರದೇಶದಲ್ಲಿ ಆದಿತ್ಯನಾಥ ಆಡಳಿತದಡಿಯಲ್ಲಿ ಯವುದಾದರೂ ನೆಪವೊಡ್ಡಿ ಮುಸ್ಲಿಮರ ವಿರುದ್ಧ ಪೂರ್ಣ ಪ್ರಮಾಣದ ದಾಳಿಗಳನ್ನು ನಡೆಸಲಾಗುತ್ತಿದೆ. ಕೆಲವು ವಾರಗಳ ಹಿಂದೆ ಬಹರೈಚ್‌ನಲ್ಲಿ ನಡೆದ ಕೋಮು ಹಿಂಸಾಚಾರದ ಹಿನ್ನೆಲೆಯಲ್ಲಿ ಮುಸ್ಲಿಂ ಸಮುದಾಯದ ವಿರುದ್ಧ ಸರಕಾರವೇ ದಬ್ಬಾಳಿಕೆ ನಡೆಸಿತು ಹಾಗೂ ಅನೇಕ ಮುಸ್ಲಿಂ ಪುರುಷರನ್ನು ಬಂಧಿಸಿತು. ಹಿಂದೂತ್ವ ಸಂಘಟನೆಗಳು ನಾನಾ ಮಸೀದಿಗಳನ್ನು ಗುರಿಯಾಗಿಸಿ ಅವುಗಳ ಬಗ್ಗೆ ವಿವಾದ ಸೃಷ್ಟಿಸಲು ಕಾನೂನು ಮಾರ್ಗವನ್ನು ಬಳಸಿಕೊಳ್ಳುತ್ತಿವೆ.

ಸಂಭಾಲ್‌ನ 16ನೇ ಶತಮಾನದ ಮಸೀದಿಯ ವಿವಾದವನ್ನು ಕೆದಕುವ ಪ್ರಯತ್ನಗಳಿಗೆ ನ್ಯಾಯಾಂಗದ ಶಾಮೀಲು ನೆರವಾಗುತ್ತಿದೆ. ವಾರಾಣಸಿ, ಮಥುರಾ ಮತ್ತು ಈಗ ಸಂಭಾಲ್‌ನಲ್ಲಿ ನಾವು ಗಮನಿಸಿದಂತೆ, ಹಿಂದೂ ಶ್ರೇಷ್ಠತೆಯನ್ನು ಸ್ಥಾಪಿಸಲು ಶತಮಾನಗಳಷ್ಟು ಹಳೆಯ ಮಸೀದಿಗಳನ್ನು ರಣರಂಗವಾಗಿ ಪರಿವರ್ತಿಸುವ ಯೋಜಿತ ಪ್ರಯತ್ನಗಳಿಗೆ ಉತ್ತರ ಪ್ರದೇಶದಾದ್ಯಂತ ಸ್ಥಳೀಯ ಕೋರ್ಟ್‌ಗಳು ನೆರವಾಗುತ್ತಿವೆ. ಜಸ್ಟಿಸ್ ಚಂದ್ರಚೂಡರ ಅಡಿಯಲ್ಲಿ ಸ್ವತಃ ಸುಪ್ರೀಂ ಕೋರ್ಟೇ ಇದನ್ನೆಲ್ಲ ಸುಲಭಸಾಧ್ಯಗೊಳಿಸಿದೆ ಎನ್ನುವುದು ಹೆಚ್ಚು ಕಳವಳಕಾರಿಯಾದ ವಾಸ್ತವವಾಗಿದೆ. ಯಾವ ಕಾನೂನನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ಪಾಲಿಸಬೇಕೆಂದು ಈ ಹಿಂದೆ ಹೇಳಿತ್ತೋ ಅದೇ ಸುಪ್ರೀಂ ಕೋರ್ಟ್ ಹೀಗೆ ಮಾಡಿದೆ. ಈ ವಿನಾಶಕಾರಿ ಮಾರ್ಗವನ್ನು ಹಿಮ್ಮೆಟ್ಟಿಸಬೇಕಾದರೆ, ಸುಪ್ರೀಂ ಕೋರ್ಟ್ ತಕ್ಷಣವೇ ಮಧ್ಯ ಪ್ರವೇಶಿಸಬೇಕು ಮತ್ತು 1947ರ ಆಗಸ್ಟ್ 15ರ ನಂತರ ಯಾವುದೇ ಪ್ರಾರ್ಥನಾ ಸ್ಥಳದ ಬಗ್ಗೆ ಕಾನೂನು ವಿವಾದವನ್ನು ಎತ್ತಬಾರದೆಂದು ಹೇಳಿರುವ 1991ರ ಪೂಜಾ ಸ್ಥಳಗಳ ಕಾಯಿದೆಯ ಪಾವಿತ್ರ್ಯವನ್ನು ಎತ್ತಿ ಹಿಡಿಯಬೇಕು.



ಅನು: ವಿಶ್ವ

ಬಳ್ಳಾರಿಯ ಬಾಣಂತಿಯರ ಸಾವು: ನ್ಯಾಯಾಂಗ ತನಿಖೆಗೆ ಒಪ್ಪಿಸಿ–ಸಿಪಿಐ(ಎಂ)



ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದ ನಾಲ್ಕು ಬಾಣಂತಿ ಮಹಿಳೆಯರ ಸಾವಿಗೆ ಕೊಲ್ಕತ್ತಾದ ಕಂಪನಿಯು ಪೂರೈಸಿದ ರಿಂಗರ್ ಲ್ಯಾಕ್ಟೇಟ್ ಐವಿ ಗ್ಲೂಕೋಸ್ ದ್ರಾವಣವೇ ಕಾರಣವೆಂದು ಕಂಡುಬಂದಿದೆ. ಈ ಗ್ಲೂಕೋಸ್ ದ್ರಾವಣವನ್ನು ಪೂರೈಸಿದ ಸಂಸ್ಥೆಯ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಮತ್ತು ಔಷಧ ನಿಯಂತ್ರಕರನ್ನು ಅಮಾನತಿನಲ್ಲಿಟ್ಟು ತನಿಖೆಗೆ ಕ್ರಮವಹಿಸಲು, ಮುಖ್ಯಮಂತ್ರಿಗಳು ಮತ್ತು ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿಗಳು ಆದೇಶಿಸಿದ ಕ್ರಮವನ್ನು ಸ್ವಾಗತಿಸಿರುವ ಸಿಪಿಐ(ಎಂ) ರಾಜ್ಯ ಸಮಿತಿಯು, ಜನತೆಯ ವಿಶ್ವಾಸಕ್ಕೆ ಉಂಟಾದ ಆಘಾತವನ್ನು ಸರಿಪಡಿಸಲು, ಸರಕಾರಿ ಆಸ್ಪತ್ರೆಗಳಲ್ಲಿ ಬಳಸಲಾಗುತ್ತಿರುವ ಎಲ್ಲ ಔಷಧಗಳ ಗುಣಮಟ್ಟವನ್ನು ಪರಿಶೀಲನೆಗೆ ಒಳಪಡಿಸಲು ಮತ್ತು ಔಷಧ ಒದಗಿಸುವ ಕಂಪನಿಗಳ ಸಮರ್ಪಕತೆಯನ್ನು ಪರಿಶೀಲಿಸಲು ನ್ಯಾಧೀಶರೊಬ್ಬರ ನೇತೃತ್ವದಲ್ಲಿ ಒಂದು ತಜ್ಞರ ವಿಶೇಷ ತನಿಖಾ ತಂಡವನ್ನು ರಚಿಸಬೇಕು ಮತ್ತು ಸಾವಿಗೀಡಾದ ಬಾಣಂತಿಯರ ಕುಟುಂಬಕ್ಕೆ ರಾಜ್ಯ ಸರಕಾರ ಕೂಡಲೇ ತಲಾ 25 ಲಕ್ಷ ರೂಗಳ ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿಯವರನ್ನು ಆಗ್ರಹಿಸಿದೆ.

ಈ ಘಟನೆ ರಾಜ್ಯದ ನಾಗರೀಕರನ್ನು ತೀವ್ರ ಆತಂಕಕ್ಕೀಡು ಮಾಡಿದ್ದಲ್ಲದೆ, ಸರಕಾರಿ ಆಸ್ಪತ್ರೆಗಳ ಗೌರವವನ್ನು ಕುಗ್ಗಿಸಿ ಜನಗಳ ವಿಶ್ವಾಸಕ್ಕೆ ದಕ್ಕೆ ಉಂಟು ಮಾಡಿದೆ. ಜನರು ಸರಕಾರಿ ಆಸ್ಪತ್ರೆಗಳ ಔಷಧಿಗಳ ಗುಣಮಟ್ಟದ ಕುರಿತು ಮತ್ತಷ್ಟು ಅನುಮಾನಗಳನ್ನು ಹೊಂದುವಂತೆ ಮಾಡಿವೆ. ಮುಖ್ಯಮಂತ್ರಿಗಳು ನಡೆಸಿದ ಸಭೆಯಲ್ಲಿನ ನಿರ್ಧಾರವು ಕಳಪೆ ಔಷಧಿಯು ಈ ಸಾವುಗಳಿಗೆ ಕಾರಣವಾಗಿದೆ ಎಂಬುದನ್ನು ಸಾಬೀತುಪಡಿಸಿದೆ. ಔಷಧ ನಿಯಂತ್ರಕರ ಶಾಮೀಲುತನವು ಕ್ರಿಮಿನಲ್ ಸ್ವರೂಪದ್ದಾಗಿದ್ದು, ಅವರ ಮೇಲೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು, ಔಷಧಿ ಕಂಪನಿ ಹಾಗು ಔಷಧ ನಿಯಂತ್ರಕರ ಆಸ್ತಿಗಳ ಮುಟ್ಟುಗೋಲಿಗೆ ಅಗತ್ಯ ಕ್ರಮ ವಹಿಸಬೇಕು ಎಂದು ಸಿಪಿಐ(ಎಂ) ಒತ್ತಾಯಿಸಿದೆ.

ಬಸವಣ್ಣನವರನ್ನು ಕುರಿತ ಯತ್ನಾಳ್ ತುಚ್ಛ ಹೇಳಿಕೆ: ಖಂಡನೆ

ಸಮಾಜ ಪರಿವರ್ತಕ ಜಾತಿ ಹಾಗು ಲಿಂಗ ದಬ್ಬಾಳಿಕೆಯ ವಿರೋದಿ, ಮಾನವ ಘನತೆಯನ್ನು ಮೆರೆದ ಅಣ್ಣ ಬಸವಣ್ಣರವರ ಕುರಿತು ಬಸನಗೌಡ ಪಾಟೀಲ್ ಯತ್ನಾಳ್ ಅತ್ಯಂತ ತುಚ್ಛವಾಗಿ ಮಾತನಾಡಿರುವುದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ.

ಬಸವಣ್ಣನವರ ಕುರಿತು ಅತ್ಯಂತ ತುಚ್ಛವಾಗಿ ಮಾತನಾಡಿ, ಅದೇ ಬರದಲ್ಲಿ ಮುಸ್ಲಿಂ ಅಲ್ಪಸಂಖ್ಯಾತ ನಾಗರೀಕರನ್ನು ನಿಂದಿಸಿರುವ ಕೋಮುವಾದಿ, ಪ್ರಜಾಪ್ರಭುತ್ವ ವಿರೋಧಿ, ಜಾತಿ ತಾರತಮ್ಯ ಪ್ರತಿಪಾದಕ ಬಿಜೆಪಿ ಹಾಗು ಆರ್ ಎಸ್ ಎಸ್ ಮುಖಂಡ ಯತ್ನಾಳ್ ಮೇಲೆ ಕಠಿಣ ಕಾನೂನಿನ ಕ್ರಮವನ್ನು ವಹಿಸಬೇಕೆಂದು ರಾಜ್ಯ ಸರಕಾರವನ್ನು ಆಗ್ರಹಿಸಿದೆ.

ಲಿಂಗಾಯತ ಪಂಚಮಶಾಲಿ ಸಮಾಜದ ಮುಖಂಡನೆಂದು ಹೇಳಿಕೊಂಡು, ರಾಜಕೀಯ ರಕ್ಷೆ ಪಡೆದುಕೊಂಡಿರುವ ಈತ, ಆ ಸಮುದಾಯಕ್ಕೆ ಈ ರೀತಿಯ ದುರ್ವರ್ತನೆಯ ಮೂಲಕ ಕೆಸರು ಮೆತ್ತುತ್ತಿದ್ದಾನೆ. ಆ ಕುರಿತು ಸಮುದಾಯವು ಕೂಡಾ ಅಗತ್ಯ ಶಿಸ್ತು ಕ್ರಮ ವಹಿಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ಅದಾನಿ ಲಂಚ ಪ್ರಕರಣವೂ– ದುಬಾರಿ ವಿದ್ಯುತ್ ದರವೂ

ಸಿ.ಸಿದ್ದಯ್ಯ

2029 ಕೋಟಿ ರೂ. ಲಂಚದ ವ್ಯವಹಾರ ನಡೆಸಿರುವ ಆರೋಪದ ಮೇಲೆ ಗೌತಮ್ ಅದಾನಿ ವಿರುದ್ಧ ಅಮೆರಿಕ ನ್ಯಾಯಾಲವೊಂದು ಬಂಧನದ ವಾರೆಂಟ್ ಹೊರಡಿಸಿದೆ. ಅದಾನಿ ಆಪ್ತ ಮಿತ್ರ ನರೇಂದ್ರ ಮೋದಿ ಮತ್ತು ಅದಾನಿ ನೆಚ್ಚಿನ ಪಕ್ಷ ಭಾರತೀಯ ಜನತಾ ಪಕ್ಷ ಅಡಳಿತ ನಡೆಸುತ್ತಿರುವ ಈ ಸಂದರ್ಭದಲ್ಲಿ ಸಹಸ್ರ ಕೋಟಿ ರೂ. ಮೊತ್ತದ ಲಂಚದ ಅವ್ಯವಹಾರ ನಡೆಸಿದ ಅದಾನಿಗೆ ಶಿಕ್ಷೆ ಆಗುತ್ತದೆಯೋ ಇಲ್ಲವೋ ಆದರೆ, ಈ ಲಂಚದ ವ್ಯವಹಾರವು, ವಿದ್ಯುತ್ ಗೆ ದುಬಾರಿ ದರ ವಿಧಿಸುವ ಮೂಲಕ ಜನಸಾಮಾನ್ಯರನ್ನು ನಿರಂತರ 'ಶಿಕ್ಷೆ'ಗೆ ಗುರಿಪಡಿಸಿದೆ.

ಇದೆಂತಹ ಮಾತು ಅಂತ ಆಡ್ತೀರಿ? ಅದಾನಿ ಸಮೂಹ ಅಧಿಕಾರಿಗಳಿಗೆ ಮತ್ತು ರಾಜಕೀಯ ನಾಯಕರಿಗೆ ಸಾವಿರಾರು ಕೋಟಿ ಲಂಚ ಕೊಟ್ಟರೆ ವಿದ್ಯುತ್ ದರ ದುಬಾರಿ ಹೇಗಾಗುತ್ತದೆ? ಇಂತಹ ಪ್ರಶ್ನೆ ಮೂಡುತ್ತದಲ್ಲವೇ? ತಮ್ಮ ಕೆಲಸ ಮಾಡಿಕೊಡಲಿ ಎಂದು ಒಬ್ಬ ರೈತ ಅಥವಾ ಒಬ್ಬ ಸಾಮಾನ್ಯ ವ್ಯಕ್ತಿ ಅಧಿಕಾರಿಗಳಿಗೆ ಲಂಚ ಕೊಡುವುದೇ ಬೇರೆ. ಉದ್ಯಮಿಗಳು ಹೆಚ್ಚಿನ ಲಾಭಕ್ಕಾಗಿ ತಮ್ಮ ಯಾವುದೋ ಒಂದು ವ್ಯವಹಾರ ಕುದುರಿಸಲು ಆದಿಕಾರಿಗಳಿಗೆ, ರಾಜಕಾರಣಿಗಳಿಗೆ ಲಂಚ ಕೊಡುವುದೇ ಬೇರೆ. ಈ ಎರಡನ್ನೂ ಒಂದೇ ರೀತಿ ನೋಡಲಾಗದು.

ಉದಾಹರಣೆಗೆ ಒಬ್ಬ ರೈತ ತನ್ನ ಜಮೀನಿಗೆ ಪಹಣಿ ಪತ್ರ ಪಡೆಯಲು ಕಂದಾಯ ಇಲಾಖೆ ನೌಕರನಿಗೆ ಲಂಚ ಕೊಡುತ್ತಾರೆ ಎಂದಿಟ್ಟುಕೊಳ್ಳೋಣ. ಇಲ್ಲಿ ರೈತನಿಗಲ್ಲದೆ ಬೇರೊಬ್ಬರಿಗೆ ನಷ್ಟವಿಲ್ಲ. ಒಬ್ಬ ಹಿರಿಯ ನಾಗರಿಕ ತನಗೆ ಬರಬೇಕಾದ ವೃದ್ದಾಪ್ಯ ಪಿಂಚಣಿ ಪಡೆಯಲು ಸಂಬಂಧಪಟ್ಟ ಸರ್ಕಾರಿ ನೌಕರನಿಗೆ ಲಂಚ ಕೊಡುತ್ತಾನೆ ಎಂದಿಟ್ಟುಕೊಳ್ಳೋಣ. ಇಲ್ಲಿ ಆ ಹಿರಿಯ ನಾಗರಿಕನಿಗಲ್ಲದೆ ಬೇರೊಬ್ಬರಿಗೆ ನಷ್ಟವಿಲ್ಲ. ಇದು ಲಂಚ ಎಂಬುದಕ್ಕಷ್ಟೇ ಸೀಮಿತವಾಗಿರುತ್ತದೆ.

ಆದರೆ, ಒಬ್ಬ ಉದ್ಯಮಿ ಅಥವಾ ಒಬ್ಬ ಗುತ್ತಿಗೆದಾರ ಲಂಚ ಕೊಟ್ಟು, ಸರ್ಕಾರ ಅಥವಾ ಸರ್ಕಾರಿ ಒಡೆತನದ ಸಂಸ್ಥೆ/ಇಲಾಖೆ ಜೊತೆ ಯಾವುದಾದರೂ ಒಪ್ಪಂದ ಕುದುರಿಸಿದರೆ, ಈ ಲಂಚದ ವ್ಯವಹಾರದಿಂದ ಲಂಚ ಕೊಡುವ ಮತ್ತು ಲಂಚ ಪಡೆಯುವ ಇಬ್ಬರಿಗೂ ಲಾಭವಾಗುತ್ತದೆ. ಇದು ಹೇಗೆ ಎನ್ನುತ್ತೀರಾ?

"ವಿದ್ಯುತ್ ಒಪ್ಪಂದಗಳನ್ನು ಗೆಲ್ಲುವ ಮೂಲಕ 2 ಶತಕೋಟಿ ಡಾಲರ್ (ಅಂದಾಜು 16,000 ಕೋಟಿ ರೂ.) ಲಾಭ ಬರುತ್ತದೆ ಎಂದು ಅಮೆರಿಕದ ಹೂಡಿಕೆದಾರರನ್ನು ಅದಾನಿ ಸಮೂಹ ನಂಬಿಸಿದೆ" ಎಂದು ಅಮೆರಿಕಾ ಪ್ರಾಸಿಕ್ಯೂಟರ್‌ಗಳು ಆರೋಪ ಮಾಡಿದ್ದಾರೆ. ಈ 16,000 ಕೋಟಿ ಲಾಭ ಎಲ್ಲಿಂದ ಬರುತ್ತದೆ? ಇದು ಗ್ರಾಹಕರನ್ನು ಸುಲಿಗೆ ಮಾಡುವ ಮೂಲಕವೇ ಅಲ್ಲವೇ? ಅಂದರೆ, 2,000 ಕೋಟಿ ಲಂಚ ಕೊಟ್ಟು 16,000 ಕೋಟಿ ಹಣವನ್ನು ವಿದ್ಯುತ್ ಬಳಕೆದಾರರಿಂದ ಸುಲಿಗೆ ಮಾಡುತ್ತಾರೆ ಎಂದರ್ಥವಲ್ಲವೇ?

ಗೌತಮ್ ಅದಾನಿ ಬಂಧನಕ್ಕೆ ವಾರೆಂಟ್

ಮೊದಲಿಗೆ ಅದಾನಿ ಸಮೂಹದ ಲಂಚದ ಪ್ರಕರಣ ಏನೆಂಬುದನ್ನು ನೋಡೋಣ. ಅದಾನಿ ಗ್ರೀನ್ ಎನರ್ಜಿ ಕಂಪನಿಯು ತಾನು ಸೌರಶಕ್ತಿಯಿಂದ ಉತ್ಪಾದಿಸುವ ವಿದ್ಯುತ್ ಪೂರೈಕೆ ಒಪ್ಪಂದವನ್ನು ಪಡೆದುಕೊಳ್ಳಲು ಭಾರತದ ಕೆಲವು ರಾಜ್ಯಗಳ ಅಧಿಕಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ಅಂದಾಜು 2029 ಕೋಟಿ ರೂ. ಲಂಚ ಕೊಟ್ಟಿದೆ ಎಂದು ಅಮೆರಿಕದ ನ್ಯಾಯಾಲಯವೊಂದು ಆರೋಪಿಸಿದೆ. ಈ ನ್ಯಾಯಾಲಯವು ಗೌತಮ್ ಅದಾನಿ ಬಂಧನಕ್ಕೆ ವಾರೆಂಟ್ ಹೊರಡಿಸಿದೆ. ಗೌತಮ್ ಅದಾನಿ, ಅವರ ಸೋದರಳಿಯ ಸಾಗರ್ ಅದಾನಿ ಮತ್ತು ಇತರ ಆರು ಮಂದಿಯ ವಿರುದ್ಧ ಅಮೆರಿಕದ ಪ್ರಾಸಿಕ್ಯೂಟರ್‌ಗಳು ನ್ಯೂಯಾರ್ಕ್ ಜಿಲ್ಲಾ ನ್ಯಾಯಾಲಯದಲ್ಲಿ ದೋಷಾರೋಪಣೆ ಮಾಡಿದ್ದಾರೆ. 2020–2024ರ ನಡುವೆ ಈ ಲಂಚದ ವ್ಯವಹಾರ ನಡೆದಿವೆ ಎಂದು ಅವರು ಆರೋಪಿಸಿದ್ದಾರೆ. ಸೌರ ವಿದ್ಯುತ್ ಯೋಜನೆಗಳಿಗಾಗಿ ಅದಾನಿ ಸಮೂಹ ವಾಸ್ತವಗಳನ್ನು ಮುಚ್ಚಿಟ್ಟು ಅಮೆರಿಕಾ ಬ್ಯಾಂಕ್‌ಗಳು ಮತ್ತು ಹೂಡಿಕೆದಾರರಿಂದ ಹಲವು ಶತಕೋಟಿ ಹಣವನ್ನು ಸಂಗ್ರಹಿಸಿದೆ. ಈ ಮೂಲಕ ಅವರಿಗೆ ಮೋಸ ಮಾಡಿದೆ. ವಿದ್ಯುತ್ ಒಪ್ಪಂದಗಳನ್ನು ಗೆಲ್ಲುವ ಮೂಲಕ 2 ಶತಕೋಟಿ ಡಾಲರ್ (ಅಂದಾಜು 16,000 ಕೋಟಿ ರೂ.) ಲಾಭ ಬರುತ್ತದೆ ಎಂದು ನಂಬಿಸಿದೆ ಎಂದು ಅದು ಆರೋಪಿಸಿದೆ.



ಏನಿದು ಪ್ರಕರಣ?

ಅಮೆರಿಕಾ ಪ್ರಾಸಿಕ್ಯೂಟರ್ಗಳ ಆರೋಪಗಳ ಪ್ರಕಾರ... ಭಾರತ ಸರ್ಕಾರದ ಒಡೆತನಕ್ಕೆ ಸೇರಿದ ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ (ಖಇಅಖ–ಖಇಅಖ)ಗೆ 12 ಗಿಗಾವ್ಯಾಟ್ ವಿದ್ಯುತ್ ಪೂರೈಕೆ ಮಾಡಲು ಅದಾನಿ ಗ್ರೀನ್ ಎನರ್ಜಿ ಮತ್ತು ಅಮೆರಿಕಾ ಸಂಸ್ಥೆಯು ಜಂಟಿಯಾಗಿ ಒಪ್ಪಂದವನ್ನು ಪಡೆದುಕೊಂಡಿವೆ. ಆದರೆ ಎಸ್‌ಇಸಿಐ ಗೆ ಭಾರತದಲ್ಲಿ ಸೌರ ವಿದ್ಯುತ್ ಅನ್ನು ಖರೀದಿ ಮಾಡುವವರು ಕಾಣಲಿಲ್ಲ. ಖರೀದಿದಾರರ ಕೊರತೆಯ ಕಾರಣದಿಂದ ಈ ಒಪ್ಪಂದ ಮುಂದುವರಿಯಲಿಲ್ಲ. ಇದರಿಂದಾಗಿ ಈ ಎರಡು ಕಂಪನಿಗಳು ತಾವು ನಿರೀಕ್ಷಿಸಿದ ಲಾಭವನ್ನು ಪಡೆಯಲಾಗದ ಪರಿಸ್ಥಿತಿ ನಿರ್ಮಾಣವಾಯಿತು. ಆ ಸಮಯದಲ್ಲಿ, ಅದಾನಿ ಗ್ರೂಪ್ ಮತ್ತು ಅಜೂರೆ ಪವರ್ ಜಂಟಿಯಾಗಿ ಒಂದು ಯೋಜನೆಯನ್ನು ರಚಿಸಿಕೊಂಡು ಭಾರತದ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿತು. ಇದಕ್ಕೆ ಪ್ರತಿಫಲವಾಗಿ, ಎಸ್‌ಇಸಿಐ ಜೊತೆಗೆ ವಿದ್ಯುತ್ ಸರಭರಾಜು ಒಪ್ಪಂದಗಳನ್ನು ಕುದುರಿಸಲು ಆ ಅಧಿಕಾರಿಗಳು ರಾಜ್ಯ ವಿದ್ಯುತ್ ವಿತರಣಾ ಕಂಪನಿಗಳನ್ನು ಒಪ್ಪಿಸಿದರು. ಈ ಎರಡು ಕಂಪನಿಗಳು ಭಾರತದ ಅಧಿಕಾರಿಗಳಿಗೆ 265 ಮಿಲಿಯನ್ ಡಾಲರ್ (2029 ಕೋಟಿ ರೂ.) ಕಾಣಿಕೆಗಳನ್ನು ನೀಡುವುದಾಗಿ ಭರವಸೆ ನೀಡಿವೆ. ಕಾಣಿಕೆಯ ಹೆಚ್ಚಿನ ಭಾಗ ಆಂಧ್ರಪ್ರದೇಶದ ಅಧಿಕಾರಿಗಳಿಗೆ ತಲುಪಿದೆ.

ಅಧಿಕಾರಿಗಳು ಒಪ್ಪಿಗೆ ನೀಡಿದ ನಂತರ ಕೆಲವು ರಾಜ್ಯದ ವಿದ್ಯುತ್ ಕಂಪನಿಗಳು ಎಸ್‌ಇಸಿಐ ಜತೆ ಒಪ್ಪಂದ ಮಾಡಿಕೊಂಡಿವೆ. ಅದರ ಭಾಗವಾಗಿ ಆ ಎರಡು ಕಂಪನಿಗಳಿಂದ ಸೌರ ವಿದ್ಯುತ್ ಖರೀದಿಸಿದರು. ಯಾರು ಯಾರಿಗೆ ಎಷ್ಟೆಷ್ಟು ಹಣ ನೀಡಬೇಕೆಂಬುದರ ಕುರಿತು ಅದಾನಿ ಗ್ರೀನ್ ಎನರ್ಜಿ ಮತ್ತು ಅಜೂರೆ ಪವರ್ ಸೇರಿ ನಿರ್ಧಾರ ಕೈಗೊಂಡಿವೆ. ಆದರೆ ಅವರು ತಮ್ಮ ಗುರುತನ್ನು ಮರೆಮಾಡಲು ಕೋಡ್ ಹೆಸರುಗಳನ್ನು ಕೂಡಾ ಬಳಸಿದ್ದಾರೆ. ಉದಾಹರಣೆಗೆ, ಗೌತಮ್ ಅದಾನಿಯನ್ನು 'ನ್ಯೂಮೆರೋ ಯುನೊ', 'ದಿ ಬಿಗ್ ಮ್ಯಾನ್' ಎಂದು ಸಂಬೋಧಿಸಿದ್ದಾರೆ. ಗುಪ್ತ ಸಂದೇಶಗಳ ಮೂಲಕ ಸಂವಹನ ನಡೆಸಲಾಗಿದೆ.

ಕಥೆ ತಿರುವು ಪಡೆದಿದ್ದು ಹೀಗೆ

ಇಲ್ಲಿಯೇ ಕಥೆ ತಿರುವು ಪಡೆಯುತ್ತದೆ. ಅಮೆರಿಕದ ಕಂಪನಿಯ ಮಾಲೀಕತ್ವ ಕೈಗಳು ಬದಲಾದಂತೆ ಗುಟ್ಟು ರಟ್ಟಾಗಿದೆ. 2019–2022ರ ನಡುವಿನ ಅವಧಿಯಲ್ಲಿ ರಂಜಿತ್ ಗುಪ್ತಾ ಅವರು ಅಜೂರೆ ಪವರ್ ಗೆ ಸಿಇಓ ಆಗಿ ವ್ಯವಹರಿಸಿದರು. 2022–23 ರಿಂದ ರೂಪೇಶ್ ಅಗರ್ವಾಲ್ ಆ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಈ ಯೋಜನೆಯಲ್ಲಿ ಭಾಗಿಯಾಗಿರುವ ಕೆಲವು ಕಂಪನಿಯ ಕಾರ್ಯನಿರ್ವಾಹಕರನ್ನು ರಾಜೀನಾಮೆ ನೀಡುವಂತೆ ಕೇಳಲಾಯಿತು. ಭರವಸೆ ನೀಡಿದ ಪ್ರಕಾರ ಕಾಣಿಕೆಗಳನ್ನು ಹೇಗೆ ತಲುಪಿಸಬೇಕು ಎಂಬ ವಿಷಯದ ಮೇಲೆ ಚರ್ಚಿಸಲು ಹಲವಾರು ಸಭೆಗಳು ನಡೆದವು. ಯೋಜನೆಯ ಮೊತ್ತವನ್ನು ಸ್ವಲ್ಪ ಸ್ವಲ್ಪ ಭಾಗಗಳಾಗಿ ವಿಭಜಿಸಿ ಅವುಗಳನ್ನು ವರ್ಗಾಯಿಸುವ ಮತ್ತು ಶುಲ್ಕದ ರೂಪದಲ್ಲಿ ಪಾವತಿ ಮಾಡುವ ಸಾಧ್ಯತೆಗಳನ್ನು ಪರಿಶೀಲಿಸಿದರು.

ಪಿತೂರಿಗಾರರು ತಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸಲು ಪ್ರಾರಂಭಿಸಿದರು. ಕಾಣಿಕೆಗಳನ್ನು ಖಾತರಿಯ ನೆರವೇರಿಕೆಯ ಭಾಗವಾಗಿ ಅದರ ಒಂದು ಭಾಗವನ್ನು ಅದಾನಿ ಗ್ರೀನ್ ಎನರ್ಜಿ ಕಂಪನಿಗೆ ಹಿಂತಿರುಗಿಸಿದರು. ಹಣವನ್ನು ಹಿಂತಿರುಗಿಸಲು ಅವರು ಕೆಲವು ಕಾರಣಗಳನ್ನು ಸೃಷ್ಟಿಸಿದರು ಎಂದು ಅಮೆರಿಕಾ ಪ್ರಾಸಿಕ್ಯೂಟರ್ಗಳು ವಿವರಿಸಿದ್ದಾರೆ.

ಆಂಧ್ರದ ಉನ್ನತ ಅಧಿಕಾರಿಗೆ 1,750 ಕೋಟಿ ರೂ.

ಕೈಗಾರಿಕೋದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕಾ ಪ್ರಾಸಿಕ್ಯೂಟರ್ಗಳು ಮಾಡಿರುವ ಆರೋಪದಲ್ಲಿ ಆಘಾತಕಾರಿ ವಿಷಯಗಳು ಬೆಳಕಿಗೆ ಬಂದಿವೆ. ಮೇ 2019 ರಿಂದ ಈ ವರ್ಷದ ಜೂನ್ ವರೆಗೆ ಆಂಧ್ರಪ್ರದೇಶ ಸರ್ಕಾರದಲ್ಲಿ ಕೆಲಸ ಮಾಡಿದ ಉನ್ನತ ಅಧಿಕಾರಿಯೊಬ್ಬರಿಗೆ ಗೌತಮ್ ಅದಾನಿ ಮತ್ತು ಅವರ ಸಹ–ಸಂಚುಕೋರರು 1,750 ಕೋಟಿ ರೂಪಾಯಿಗಳನ್ನು 'ಭ್ರಷ್ಟ ಪಾವತಿ'ಯಾಗಿ ಒದಗಿಸಿದ್ದಾರೆ ಎಂದು ಅಮೆರಿಕಾ ಪ್ರಾಸಿಕ್ಯೂಟರ್ಗಳು ಬಹಿರಂಗಪಡಿಸಿದ್ದಾರೆ. ಆ ಸರ್ಕಾರಿ ಅಧಿಕಾರಿಯನ್ನು 'ವಿದೇಶಿ ಅಧಿಕಾರಿ 1' ಎಂದು ನ್ಯಾಯಾಲಯದ ದಾಖಲಾತಿಗಳಲ್ಲಿ ಗುರುತಿಸಲಾಗಿದೆ. ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಇಸಿ)ದಿಂದ ಏಳು ಗಿಗಾವ್ಯಾಟ್ ಸೌರ ವಿದ್ಯುತ್ ಖರೀದಿಸಲು ಆಂಧ್ರದ ವಿತರಣಾ ಕಂಪನಿಗಳು ಅಂಗೀಕರಿಸಿದ್ದಕ್ಕೆ ಪ್ರತಿಫಲವಾಗಿ ಈ ಮೊತ್ತವನ್ನು ನೀಡಲಾಗಿದೆ. ಗೌತಮ್ ಅದಾನಿ ವೈಯಕ್ತಿಕವಾಗಿ ಆಂಧ್ರಪ್ರದೇಶಕ್ಕೆ ಸೇರಿದ ವಿದೇಶಿ ಅಧಿಕಾರಿ 1 ಅವರನ್ನು ಹಲವು ಬಾರಿ ಭೇಟಿಯಾದರು. ಸೆಸಿ ಮತ್ತು ಆಂಧ್ರಪ್ರದೇಶ ರಾಜ್ಯ ವಿದ್ಯುತ್ ವಿತರಣಾ ಕಂಪನಿ ನಡುವಿನ ವಿದ್ಯುತ್ ಮಾರಾಟ ಒಪ್ಪಂದವನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ಜಾರಿಗೆ ತರಬೇಕೆಂದು ಮನವಿ ಮಾಡಿದರು. ಅವರು ಆ ಅಧಿಕಾರಿಯನ್ನು 2021ರ ಆಗಸ್ಟ್ 7, ಸೆಪ್ಟೆಂಬರ್ 12 ಮತ್ತು ನವೆಂಬರ್ 20 ಓ ದಿನಗಳಲ್ಲಿ ಭೇಟಿಯಾದರು. ಕಾಣಿಕೆಗಳ ವ್ಯವಹಾರವನ್ನು ಮುಂದುವರೆಸಲು ಅದಾನಿಗೆ ಸೇರಿದ ನವೀಕರಿಸಬಹುದಾದ ಇಂಧನ ಅಂಗಸಂಸ್ಥೆಗಳಿಗೆ ಅನುಕೂಲವಾಗುವಂತೆ ಒಪ್ಪಂದಕ್ಕೆ ಶೀಘ್ರವಾಗಿ ಸಹಿ ಹಾಕುವುದನ್ನು ಖಚಿತಪಡಿಸಿಕೊಳ್ಳಲು ಈ ಭೇಟಿ ನಡೆದಿದೆ ಎಂದು ಅಮೆರಿಕಾ ಪ್ರಾಸಿಕ್ಯೂಟರ್ಗಳು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಆದರೆ, ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿ ಇನ್ನೂ ಹಲವರನ್ನೂ ಆರೋಪಿಗಳಾಗಿ ಸೇರಿಸಲಾಗಿದೆ. ಹಾಂಕಾಂಗ್‌ನಲ್ಲಿ ನೆಲೆಸಿರುವ ಅಮೆರಿಕನ್ ಹಾಗೂ ಅಮೆರಿಕದ ಕಂಪನಿಯೊಂದರಲ್ಲಿ ಕಾರ್ಯನಿರ್ವಾಹಕ ಹುದ್ದೆಯಲ್ಲಿರುವ ಭಾರತೀಯರೂ ಈ ಪಟ್ಟಿಯಲ್ಲಿದ್ದಾರೆ. ಎಲೆಕ್ಟ್ರಾನಿಕ್ ಸಂದೇಶಗಳು ಸೇರಿದಂತೆ ವಿವಿಧ ವಿಧಾನಗಳನ್ನು ಬಳಸಿಕೊಂಡು ಒಪ್ಪಂದಗಳನ್ನು ಜಾರಿಗೊಳಿಸಲು ಸಹ–ಪ್ರತಿವಾದಿಗಳು ಭಾರತೀಯ ಅಧಿಕಾರಿಗಳನ್ನು ಪ್ರೇರೇಪಿಸಲು ಪ್ರಯತ್ನಿಸಿದರು ಎಂದು ಅಮೆರಿಕಾ ಪ್ರಾಸಿಕ್ಯೂಟರ್‌ಗಳು ಆರೋಪಿಸಿದ್ದಾರೆ.

ಕರ್ನಾಟಕದಲ್ಲಿ ವಿದ್ಯುತ್ ಬೆಲೆ ಹೆಚ್ಚಳಕ್ಕೆ ಇದೂ ಒಂದು ಕಾರಣ

ಈಗ ಕರ್ನಾಟಕದಲ್ಲಿ ವಿದ್ಯುತ್ ದರ ಹೆಚ್ಚಳದ ವಿಷಯಕ್ಕೆ ಬರೋಣ. ಅದಾನಿ ಸಮೂಹದ ಲಂಚ ಪ್ರಕರಣದಲ್ಲಿ ಅಮೆರಿಕಾ ಪ್ರಾಸಿಕ್ಯೂಟರ್‌ಗಳು ಹೆಸರಿಸಿದ ರಾಜ್ಯಗಳಲ್ಲಿ ಕರ್ನಾಟಕ ಸೇರಿಲ್ಲ. ಆದರೂ, ಅದಾನಿ ಗ್ರೀನ್ ಎನರ್ಜಿ ಜೊತೆಗಿನ ವಿದ್ಯುತ್ ಖರೀಧಿ ಒಪ್ಪಂದದಿಂದಾಗಿ ರಾಜ್ಯದ ಗ್ರಾಹಕರ ಮೇಲೆ ವಿದ್ಯುತ್ ದರ ಹೆಚ್ಚಳದ ಬರೆ ಬಿದ್ದಿರುವುದಂತೂ ಸತ್ಯ.

ಕರ್ನಾಟದಲ್ಲಿ ಅದಾನಿ ಒಡೆತನದ ಅದಾನಿ ಗ್ರೀನ್ ಎನರ್ಜಿ (adani Green Energy) ಸೋಲಾರ್ ಪ್ಲಾಂಟ್ ಮೂಲಕ ಒಟ್ಟು– 1,180 ಮೆ. ವ್ಯಾ. ಉತ್ಪನ್ನ ಮಾಡುತ್ತಿದೆ. ಪಾವಗಡ– 350 ಮೆ. ವ್ಯಾ., ಚಿತ್ರದುರ್ಗ, ಮದುವನಹಳ್ಳಿ ಮತ್ತು ಕಲ್ಲೂರ್ ತಲಾ 100 ಮೆ.ವ್ಯಾ., ರಾಮನಗರ 60 ಮೆ.ವ್ಯಾ., ಮಸ್ಕಲ್, ಹತ್ತಿಗುಡೂರು ಮತ್ತು ರಾಜೇಶ್ವರ್ ತಲಾ 50 ಮೆ.ವ್ಯಾ., ಹೊಳೆನರಸೀಪುರ, ಕೆಆರ್ ಪೇಟ್, ಪಿರಿಯಾಪಟ್ಟಣ, ಬಸವನ ಬಾಗೇವಾಡಿ, ಬ್ಯಾಡಗಿ, ಚೆನ್ನಪಟ್ಟಣ, ಗುಬ್ಬಿ, ಜೇವರ್ಗಿ, ಬಿಜಾಪುರ, ↗



ಎಪ್ಪತ್ತೈದರ ಹರೆಯದಲ್ಲಿ ನಮ್ಮ ಸಂವಿಧಾನಕ್ಕೆ ಮುತ್ತಿಗೆ

ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳುತ್ತಿರುವವರು ಅದರ ತತ್ವಗಳನ್ನು ಬುಡಮೇಲು ಮಾಡುತ್ತಿದ್ದಾರೆ.

ಬೃಂದಾ ಕಾರತ್

ಭಾರತದ ಸಂವಿಧಾನವು ತನ್ನ ಎಪ್ಪತ್ತರ ಹರೆಯದಲ್ಲಿ ಮನೆ ಮಾತಾಗಿದೆ. ಸಂಸತ್ತಿನ ಚರ್ಚೆಗಳಲ್ಲಿ, ಚುನಾವಣೆಗಳ ಭಾಷಣಗಳಲ್ಲಿ, ಎಲ್ಲಾ ಪಕ್ಷಗಳ ರಾಜಕೀಯ ಧುರೀಣರು ತಮ್ಮ ಭಾಷಣಗಳಲ್ಲಿ ಅದು ಚರ್ಚೆಯ ಪ್ರಧಾನ ವಿಷಯವಾಗಿದೆ. ಅದು ಕಾಲದ ಪರೀಕ್ಷೆಯನ್ನು ಎದುರಿಸಿದೆಯಷ್ಟೇ ಅಲ್ಲ, ಇಂದು ಅದು ತನ್ನ ಪ್ರಮುಖ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಕೂಡ ಅದು ತೀರಾ ಅಗತ್ಯವಾದ ದೇಶಭಕ್ತಿಯ ಕರ್ತವ್ಯವಾಗಿ ಹೊರಹೊಮ್ಮಿದೆ. ಅದರ ಹೆಗ್ಗಳಿಕೆ ಆ ಸಂವಿಧಾನವನ್ನು ರಚಿಸಿದ ಸ್ಥಾಪಕ ಸದಸ್ಯರಿಗೆ ಸಲ್ಲಬೇಕು.

ಅಂದ ಮಾತ್ರಕ್ಕೆ ಭಾರತದ ಜನರು ಈ ಸಂವಿಧಾನದಿಂದ ಸಮವಾಗಿ ಪ್ರಯೋಜನ ಪಡೆದಿದ್ದಾರೆ ಎಂಬರ್ಥವಲ್ಲ. ಅದರಲ್ಲಿರುವ ಹಕ್ಕುಗಳನ್ನು ದೋಷಪೂರಿತವಾಗಿ ಮತ್ತು ಅಸಮವಾಗಿ ಜಾರಿಮಾಡಲಾಗಿದೆ. ಏಕೆಂದರೆ ಸಂವಿಧಾನವನ್ನು ತರ್ಕಹೀನವಾಗಿ ಮತ್ತು ಏಕಪಕ್ಷೀಯವಾಗಿ ಎರಡು ಭಾಗಗಳಾಗಿ (ನ್ಯಾಯಸಮ್ಮತ ಮತ್ತು ನ್ಯಾಯಸಮ್ಮತವಲ್ಲದ ಭಾಗಗಳಾಗಿ) ವಿಭಜಿಸಲಾಗಿದೆ. ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಕ್ಕೆ ಸಂಬಂಧಪಟ್ಟ ಬಹು ಮುಖ್ಯ ವಿಷಯಗಳನ್ನು ನಿರ್ದೇಶಕ ತತ್ವಗಳಡಿಯಲ್ಲಿ (ಡೈರೆಕ್ಟಿವ್ ಪ್ರಿನ್ಸಿಪಲ್ಸ್) ನ್ಯಾಯಸಮ್ಮತವಲ್ಲದ ವಿಭಾಗದಲ್ಲಿ ಕೆಳದರ್ಜೆಗೆ ಸೇರಿಸಲಾಗಿದೆ. ಹೀಗೆ ಎಲ್ಲಾ ನಾಗರಿಕರಿಗೂ ಸಮಾನ ಹಕ್ಕುಗಳನ್ನು ಖಾತರಿಪಡಿಸಿರುವ ಮಾದರಿ ಸಂವಿಧಾನದ ಭಾರತವೆಂದು ಪರಿಗಣಿಸಲ್ಪಡುತ್ತಿರುವಾಗ್ಯೂ, ಸಂವಿಧಾನದ ಚೌಕಟ್ಟಿನೊಳಗಡೆ, ಅದು ಅತ್ಯಂತ ಅಸಮಾನ ಸಮಾಜವಾಗಿ ಬೆಳೆದಿದೆ. ಸಂವಿಧಾನ ಸಭೆಯಲ್ಲಿ ಸಂವಿಧಾನವನ್ನು ರಚಿಸುವ ಸಮಯದಲ್ಲೇ ಕೆಲವು ಸದಸ್ಯರ ಆತಂಕಗಳು, ಸ್ವಯಂಘೋಷಿತ ಸಮಾಜವಾದಿ ಎಂದು ಹೇಳಿಕೊಂಡಿರುವ ಕೆ.ಟಿ. ಶಾ ಅವರ ಮಾತಿನಲ್ಲಿ ಹೇಳುವುದಾದರೆ, 'ಅಂತಹ ವಿಭಜನೆಗಳು ಬ್ಯಾಂಕುಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಹಣ ನಗದು ಮಾಡುಬಹುದಾದ ಚೆಕ್ಕನ್ನು ನೀಡಿದಂತೆ' ಎಂಬ ಮಾತು ಈಗ ನಿಜವಾಗಿ ಪರಿಣಮಿಸಿವೆ. ಸಂವಿಧಾನ ರಕ್ಷಣೆಯ ಮಾತನ್ನಾಡುವಾಗ ಅದು ಆರ್ಥಿಕ ಸಮಾನತೆ ಹಾಗೂ ನ್ಯಾಯವನ್ನೂ ಒಳಗೊಂಡ ನಿರ್ದೇಶಕ ತತ್ವಗಳನ್ನು ಜಾರಿ ಮಾಡಬೇಕು ಎನ್ನುವುದನ್ನು ಒಳಗೊಂಡಿರಬೇಕು.

"ಸಂವಿಧಾನ ಸಭೆಯು ನಿರ್ಧರಿಸಿದ ಸಂವಿಧಾನವನ್ನು ಅಂಗೀಕರಿಸಬೇಕು" ಎಂದು ಸಂವಿಧಾನ ಸಭೆಯ ಅಧ್ಯಕ್ಷ, ರಾಜೇಂದ್ರ ಪ್ರಸಾದ್ ಅವರು ನವಂಬರ್ 26, 1949ರಂದು ಮಂಡನೆ ಮಾಡಿದಾಗ ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು ಎಂದಾಗ, ಬಹಳ ಹೊತ್ತಿನ ವರೆಗೆ ಹರ್ಷೋದ್ಗಾರವಾಯಿತು. ಸಭೆಯ ಹೊರಗಡೆಯಲ್ಲಿ, ಸಂವಿಧಾನವು ಮನುಸ್ಮೃತಿಯಂತಹ ಧಾರ್ಮಿಕ ಗ್ರಂಥಗಳ ಆಧಾರದಲ್ಲಿ "ಭಾರತೀಯ" ಪರಂಪರೆಗೆ ಅನುಗುಣವಾಗಿ ಇಲ್ಲ ಎಂದು ಆರ್‌ಎಸ್‌ಎಸ್ ವಿರೋಧ ವ್ಯಕ್ತಪಡಿಸಿತು. ರಾಷ್ಟ್ರೀಯತೆ ಹಾಗೂ ನಾಗರಿಕ ಹಕ್ಕುಗಳು ಹಿಂದೂ ನಂಬಿಕೆಗಳನ್ನು ಅನುಸರಿಸುವ ಬಹುಸಂಖ್ಯಾತ ಧಾರ್ಮಿಕ ಅಸ್ಮಿತೆಗೆ ತಳಕು ಹಾಕಿಕೊಂಡಿರಬೇಕು ಮತ್ತು ಈ ಬಹುಸಂಖ್ಯಾತರಿಗೆ "ಇತರರು" ಎರಡನೇ ದರ್ಜೆಯವರಾಗಿ ಅಧೀನರಾಗಿಲ್ಲದಿದ್ದರೆ, 'ಅವರನ್ನು' ಸಮಾನ ನಾಗರಿಕರೆಂದು ಪರಿಗಣಿಸುವ ಹಕ್ಕು ಇರಬಾರದು ಎಂದು ಆರ್‌ಎಸ್‌ಎಸ್‌ನವರು ವಾದ ಮಾಡಿದರು. ಇಂತಹ ವಿಭಜಕ ವಾದಗಳನ್ನು ತಿರಸ್ಕರಿಸಿದ ಭಾರತವು ಸಂವಿಧಾನವನ್ನು ಅಂಗೀಕರಿಸಿತು. ನಿಜ ಹೇಳಬೇಕೆಂದರೆ, ಆರ್‌ಎಸ್‌ಎಸ್‌ನ ಈ ಧಾರ್ಮಿಕ ಅಸ್ಮಿತೆಯ ಆಧಾರಿತ ರಾಷ್ಟ್ರೀಯತೆಯ ವಾದವನ್ನು ಪಾಕಿಸ್ತಾನವು ಒಪ್ಪಿಕೊಂಡಿತು ಮತ್ತು ಅದಕ್ಕೆ ಅನುಗುಣವಾಗಿ ಪಾಕಿಸ್ತಾನವು ತನ್ನ ಸಂವಿಧಾನವನ್ನು ಮತ್ತು ಸರ್ಕಾರದ ಸ್ವರೂಪವನ್ನು ಜಾರಿಗೆ ತಂದಿತು.

ಸಮಸ್ಯೆ ಇರುವುದು 75 ವರ್ಷಗಳ ನಂತರವೂ, ಹಿಂದೂರಾಷ್ಟ್ರ ಸ್ಥಾಪಿಸುವ ತನ್ನ ಕಾರ್ಯಸೂಚಿಯನ್ನು ಮತ್ತು ತನ್ನ ನಂಬಿಕೆಯನ್ನು ಆರ್‌ಎಸ್‌ಎಸ್ ಹಾಗೆಯೇ ಉಳಿಸಿಕೊಂಡು ಬಂದಿದೆ. ಇನ್ನೂ ದೊಡ್ಡ ಸಮಸ್ಯೆಯೆಂದರೆ ಭಾರತವನ್ನು ಈಗ ಆಳುತ್ತಿರುವವರು ಚುನಾವಣೆ ಗೆಲ್ಲಲು ಆರ್‌ಎಸ್‌ಎಸ್‌ನ ಸಂಘಟನಾ ಜಾಲದ ಮೇಲೆಯೇ ಅವಲಂಬಿತರಾಗಿದ್ದಾರೆ. ಆರ್‌ಎಸ್‌ಎಸ್ ಹೊರತಾದ ಅಸ್ಮಿತೆಯನ್ನು ಹೊಂದಿದ್ದೇವೆ ಎನ್ನುವುದು ಈಗ ಇತಿಹಾಸವಾಗಿದೆ. ಕಳೆದ 10 ವರ್ಷಗಳ ಬಿಜೆಪಿ ಆಡಳಿತವು ಆರ್‌ಎಸ್‌ಎಸ್‌ನ ಕಾರ್ಯಸೂಚಿಗೆ ಬದ್ಧವಾಗಿರುವುದನ್ನು ಪ್ರತಿಫಲಿಸುತ್ತದೆ. ಅಬ್ಬರದ ಮುಸ್ಲಿಂ–ವಿರೋಧಿ ನೀತಿಗಳು ಮತ್ತು ಮುಸ್ಲಿಂದ್ವೇಷದ ಕಾನೂನುಗಳನ್ನು ರೂಪಿಸುವುದರಲ್ಲಿ ಅದು ಎದ್ದುಕಾಣುತ್ತಿದೆ; ಕರಾಳ ಕಾನೂನುಗಳನ್ನು ಬಳಸುವ ಮೂಲಕ ವಿಪಕ್ಷಗಳು ಹಾಗೂ ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರ ವಿರುದ್ಧ ಅನೈತಿಕ ದಾಳಿಗಳನ್ನು ನಡೆಸಲಾಗುತ್ತಿದೆ; ರಾಜ್ಯಗಳ ಸಾಂವಿಧಾನಿಕ ಹಕ್ಕುಗಳ ವಿರುದ್ಧ ನಿರಂಕುಶ ಕೇಂದ್ರಾಧಿಕಾರವನ್ನು ಚಲಾಯಿಸುತ್ತಿದೆ; ಇತಿಹಾಸ ಹಾಗೂ ಸಂಸ್ಕೃತಿಗಳ ವಿಕೃತ ದೃಷ್ಟಿಕೋನವನ್ನು ಹೇರಲಾಗುತ್ತಿದೆ; ಮನುವಾದಿ ಹಿಂದುತ್ವವನ್ನು ಪ್ರೋತ್ಸಾಹಿಸುತ್ತಾ ಜಾತಿ ವ್ಯವಸ್ಥೆಯನ್ನು ಮರೆಮಾಚಲು ಹವಣಿಸುತ್ತಿದೆ; ಸ್ವಾಯತ್ತ ಸಂಸ್ಥೆಗಳ ನಿಯಮಗಳನ್ನು ಬುಡಮೇಲು ಮಾಡಿ ತನ್ನ ಸೈದ್ಧಾಂತಿಕ ನಿಷ್ಠೆಗೆ ಬದ್ಧರಾದವರನ್ನು ನೇಮಕ ಮಾಡುತ್ತಿದೆ. ಸಂವಿಧಾನದ ಹೆಸರಿನಲ್ಲಿ ಅಧಿಕಾರಕ್ಕೆ ಬಂದವರು ಸಂವಿಧಾನದ ಮೂಲಭೂತ ಸಂರಚನೆಗಳಾದ ಜಾತ್ಯತೀತತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುವ ನೀತಿಗಳನ್ನು ಅನುಸರಿಸುತ್ತಿರುವ ಸನ್ನಿವೇಶವನ್ನು ಇಂದಿನ ಭಾರತ ಕಾಣುತ್ತಿದೆ.

ಒಬ್ಬ ನಿರ್ದಿಷ್ಟ ವ್ಯಕ್ತಿಯ ಅಧಿಕಾರದಾಹದ ಮನೋಭಾವದಿಂದಾಗಿ ಹೀಗಾಗುತ್ತಿದೆ ಎಂದು ಭಾವಿಸುವುದು ಸಂಪೂರ್ಣವಾಗಿ ತಪ್ಪಾಗುತ್ತದೆ. ಒಬ್ಬ ವ್ಯಕ್ತಿಯು ಸಂವಿಧಾನ–ವಿರೋಧಿ ರಾಜಕೀಯದ ಅತ್ಯಂತ ಪರಿಣಾಮಕಾರಿ ಪ್ರತಿನಿಧಿಯಾಗಿರಬಹುದು, ಆದರೆ ಅದು ವ್ಯಕ್ತಿಯನ್ನು ಮೀರಿದ ರಾಜಕೀಯವಾಗಿದ್ದು, ಅದರ ಬೇರುಗಳು ಸಾಮಾಜಿಕ ಹಾಗೂ ವರ್ಗ ರಾಜಕೀಯದ ಆಳದಲ್ಲಿ ಅಡಗಿದೆ.

ತುರ್ತುಪರಿಸ್ಥಿತಿಯ ರೂಪದಲ್ಲಿ ಈ ಹಿಂದೆ ಸಂವಿಧಾನದ ಮೇಲೆ ನಡೆದ ದಾಳಿಗಳು ಹಾಗೂ ಅದರ ಅನುಭವಗಳು ನಮಗೆ ಹೆಚ್ಚು ಉಪಯುಕ್ತವಾಗುತ್ತವೆ. ಆ ಸಮಯದ ನಾಗರಿಕ ಸ್ವಾತಂತ್ರ್ಯ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ಹರಣವನ್ನು ಪ್ರಬಲ ಬಂಡವಾಳಶಾಹಿಗಳು ಬೆಂಬಲಿಸಿದ್ದರು; ಕಾರ್ಮಿಕ ವರ್ಗವನ್ನು ಪಳಗಿಸಲು ಅದು ತೀರಾ ಅಗತ್ಯವಾದ ಕ್ರಮವಾಗಿತ್ತು ಎನ್ನುವುದು ಅವರ ಧೋರಣೆಯಾಗಿತ್ತು; ಅಗತಾನೇ ರೈಲ್ವೇ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ದೇಶಾದ್ಯಂತ ಐತಿಹಾಸಿಕ ಮುಷ್ಕರಕ್ಕೆ ಸಿದ್ಧತೆ ನಡೆಸಿದ್ದರು. ಆಗ ಕೈಗಾರಿಕೋದ್ಯಮಿ ಜೆಆರ್‌ಡಿ ಟಾಟಾರವರು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದ್ದರು: "ಪರಿಸ್ಥಿತಿ ತೀರಾ ಹದಗೆಟ್ಟುಹೋಗಿದೆ. ಎಲ್ಲಿ ನೋಡಿದರೂ ಮುಷ್ಕರಗಳು, ಪ್ರತಿಭಟನೆಗಳು, ಮತಪ್ರದರ್ಶನಗಳೇ ತಾಂಡವವಾಡುತ್ತಿವೆ. ಏನು ನಡೆಯುತ್ತಿದೆ ಎಂದು ಊಹಿಸುವುದೇ ಕಷ್ಟವಾಗಿದೆ. ಸಂಸದೀಯ ವ್ಯವಸ್ಥೆ ನಮ್ಮ ಅಗತ್ಯಗಳಿಗೆ ಹೊಂದುವುದಿಲ್ಲ..." ಸಂವಿಧಾನದ ಮೇಲಿನ ಇಂದಿರಾ ಗಾಂಧಿಯವರ ದಾಳಿ ಅವರ ಸ್ವಂತ ಹಿತಾಸಕ್ತಿ ಅಥವಾ ಅವರ ಪಕ್ಷದ ಹಿತಾಸಕ್ತಿಗಾಗಿ ಮಾತ್ರ ಮಾಡಿದ್ದಲ್ಲ, ಭಾರತದ ಬಂಡವಾಳಶಾಹಿ ವರ್ಗಗಳ ಬೇಡಿಕೆಗಳ ಈಡೇರಿಕೆಯ ಗುರಿ ಹೊಂದಿತ್ತು.

ಇವತ್ತಿನ ಪರಿಸ್ಥಿತಿಯಲ್ಲಿ, ಇವತ್ತಿನ ಆಳುವ ವರ್ಗಗಳ ನಿಷ್ಠೆಯು ಪ್ರಸ್ತುತ ಆಳ್ವಿಕೆಯ ಪರವಾಗಿರುವುದನ್ನು ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಸರ್ಕಾರಗಳು ಯಾವುದೇ ಅಧಕಾರಕ್ಕೆ ಬರಲಿ, ಆಳುವ ಸರ್ಕಾರದೊಂದಿಗೆ ಶ್ರೀಮಂತ ಹಾಗೂ ಬಂಡವಾಳಶಾಹಿ ವರ್ಗಗಳು ಕೊಡು ಕೊಳ್ಳುವ ವ್ಯವಹಾರದ ಮೂಲಕ ನಿಷ್ಠೆ ಬದಲಾಯಿಸುವ ಸಂಗತಿ ಅಸಹಜವೇನಲ್ಲ. ಆದರೆ ಪ್ರಮುಖ ಕೈಗಾರಿಕೋದ್ಯಮಿಗಳು ನಾಗಪುರ ಪ್ರಧಾನ ಕಛೇರಿಗೆ ತಲೆ ಬಾಗಿಸುತ್ತಿರುವ ವಿಷಯವು ನಾಜಿ ಆಡಳಿತಕ್ಕೆ ಅಂದಿನ ದೊಡ್ಡ ಬಂಡವಾಳಶಾಹಿಗಳು ತಲೆಬಾಗಿ ವಂದಿಸಿದ ಉದಾಹರಣೆಯನ್ನು ನೆನಪಿಸುತ್ತದೆ. ಕಾರ್ಪೊರೇಟ್ ಭಾರತ ಹಾಗೂ ಇವತ್ತಿನ ಆಳ್ವಿಕೆದಾರರು ಪರಸ್ಪರ ಒಬ್ಬರನ್ನೊಬ್ಬರು ಕೈಹಿಡಿದು ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ಕೆಲವು ಆಪ್ತರು ಇರುವುದನ್ನೂ ನೋಡುತ್ತಿದ್ದೇವೆ, ತಮ್ಮ ವರ್ಗ ಹಿತಾಸಕ್ತಿಗಾಗಿ ಯಾರ ಸೇವೆಗೂ ಸಿದ್ಧರಾಗುತ್ತಾರೆ ಎನ್ನುವುದನ್ನೂ ಕಾಣುತ್ತಿದ್ದೇವೆ. ಅವರ ಪರವಾಗಿ ಮೋದಿ ಸರ್ಕಾರ ಏನೆಲ್ಲಾ ಮಾಡುತ್ತಿದೆ ಮತ್ತು ಮಾಡಲು ಸಿದ್ಧವಿದೆ ಎನ್ನುವುದನ್ನೂ ಜನ ಕುತೂಹಲದಿಂದ ಗಮನಿಸುತ್ತಿದ್ದಾರೆ. ನಾಲ್ಕು ಸಂಹಿತೆಗಳ ಮೂಲಕ ಕಾರ್ಮಿಕ ಹಕ್ಕುಗಳನ್ನು ಕಸಿಯುವ, ಮೂರು ಕಾಯಿದೆಗಳ ಮೂಲಕ ರೈತ ಸಮುದಾಯದ ಹಕ್ಕುಗಳನ್ನು ಕಿತ್ತುಕೊಳ್ಳಲು ಮಾಡಿದ ಪ್ರಯತ್ನ, ದೊಡ್ಡ ಗಣಿ ಕೈಗಾರಿಕೋದ್ಯಮಿಗಳ ಹಾಗೂ ಖಾಸಗೀ ವಲಯದ ಹಿತಾಸಕ್ತಿಯನ್ನು ಕಾಪಾಡಲು ಆದಿವಾಸಿಗಳ ಜಮೀನುಗಳನ್ನು ಬಲವಂತವಾಗಿ ಕಿತ್ತುಕೊಳ್ಳುತ್ತಿರುವ ವಿದ್ಯಮಾನಗಳು ಮೋದಿ ಸರ್ಕಾರದ ರೈತ, ಕಾರ್ಮಿಕ–ವಿರೋಧಿ ಧೋರಣೆಯನ್ನು ಕಣ್ಣಿಗೆ ರಾಚುವಂತೆ ತೋರಿಸುತ್ತಿವೆ.

ಸಂವಿಧಾನವನ್ನು ಗುರಿಯಾಗಿಸಿದ ಬಿಜೆಪಿ ಸರ್ಕಾರದ ಅವಳಿ ಫಿರಂಗಿಗಳು (ಒಂದು ಬಹುಸಂಖ್ಯಾತವಾದ ಮತ್ತೊಂದು ಕಾರ್ಪೊರೇಟ್ ಹಿತಾಸಕ್ತಿಗಳು, ಪರಸ್ಪರ ಒಂದನ್ನೊಂದಕ್ಕೆ ತಳಕು ಹಾಕಿಕೊಂಡಿವೆ. ಸಂವಿಧಾನ ಅಂಗೀಕಾರದ 75ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ಪ್ರತಿರೋಧ ಹಾಗೂ ರಕ್ಷಣೆಯು ಈ ಎರಡು ಆಯಾಮಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್

ಅನು:ಟಿ.ಸುರೇಂದ್ರರಾವ್

ಇಂಡಿ, ಮದ್ದೇಬಿಹಾಳ, ಮಾಲೂರು, ಮಾಗಡಿ, ಟಿ.ನರಸೀಪುರ ಮತ್ತು ತಿಪಟೂರು ತಲಾ 20 ಮೆ.ವ್ಯಾ., ಸೋರಾಪುರ್? 10 ಮೆ.ವ್ಯಾ., ಬಾಗಲಕೋಟೆ ಮತ್ತು ಸಿಂದಗಿ ತಲಾ 5 ಮೆ.ವ್ಯಾ. ವಿದ್ಯುತ್ ಉತ್ಪಾಧಿಸುತ್ತಿವೆ.

ಈ ವಿದ್ಯುತ್ ಅನ್ನು ಅದಾನಿ ಕಂಪನಿ ಆಯಾ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಒಡೆತನದ ಆಯಾ ESCOM (ವಿದ್ಯುತ್ ಸರಬರಾಜು ಸಂಸ್ಥೆಗಳು) ಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದ (power purchase agreement-PPA)ಗಳನ್ನು ಮಾಡಿಕೊಂಡಿದ್ದಾರೆ. ಗ್ರೀನ್ ಎನರ್ಜಿ ಸೋಲಾರ್ ಪ್ಲಾಂಟ್ ನ ಸೌರ ವಿದ್ಯುತ್ ಯೋಜನೆಗಳಿಂದ 25 ವರ್ಷಗಳ ಅವಧಿಗೆ ಈ ಎಸ್ಕಾಂಗಳಿಂದ ವಿದ್ಯುತ್ ಖರೀದಿಸಲು, ಪ್ರತಿ ಯೂನಿಟ್ ಗೆ 4.79 ರೂಪಾಯಿಗಳಂತೆ ಖರೀದಿಸಲು ESCOMಗಳೊಂದಿಗೆ ಜೂನ್ 2016 ರಲ್ಲಿ ಪಿಪಿಎ ಮಾಡಿಕೊಳ್ಳಲಾಗಿದೆ. ಈ ಖರೀದಿ ದರ ಕಾಲಕಾಲಕ್ಕೆ ಹೆಚ್ಚಳವಾಗುತ್ತದೆ. ಪ್ರಸ್ತುತ ಗೃಹಬಳಕೆಯ ಒಂದು ಯೂನಿಟ್ ವಿದ್ಯುತ್ ಗೆ 5.90 ರೂ. ನಿಗದಿಪಡಿಲಾಗಿದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚು ವಿದ್ಯುತ್ ಬಳಕೆ ಮಾಡಿದರೆ ಯೂನಿಟ್ ದರದಲ್ಲಿ ಹೆಚ್ಚಳವಾಗುತ್ತದೆ. ವಾಣಿಜ್ಯ ಬಳಕೆಗೆ ದುಬಾರಿ ದರ ನಿಗದಿ ಮಾಡಲಾಗಿದೆ. ವಿದ್ಯುತ್ ಸಾಗಣೆ ಮತ್ತು ವಿತರಣೆಯ ವೆಚ್ಚ ಹಾಗೂ ಸಾಗಣೆ ಮತ್ತು ವಿತರಣೆಯ ಸಂದರ್ಭದಲ್ಲಿ ಆಗುವ ವಿದ್ಯುತ್ ನಷ್ಟಕ್ಕೆ ಎಸ್ಕಾಮ್ ಗಳೇ ಹೊಣೆಯಾಗುತ್ತವೆ.

ಈ ರೀತಿ ಆಗುವ ನಷ್ಟವನ್ನು ಪುಟ 10 ಕ್ಕೆ

ಧಾರ್ಮಿಕ ಸ್ಥಳಗಳ ಬಗ್ಗೆ ಕಾನೂನು ವಿವಾದಗಳನ್ನು ನಿಲ್ಲಿಸಬೇಕು

ಅಜ್ಮೀರ್ ಷರೀಫ್ ದರ್ಗಾದ ಕೆಳಗೆ ದೇವಾಲಯವಿದೆಯೇ ಎಂದು ಖಚಿತ ಪಡಿಸಿಕೊಳ್ಳಲು ಅದರ ಸಮೀಕ್ಷೆಯನ್ನು ಕೋರಿ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸಲು ರಾಜಸ್ಥಾನದ ಅಜ್ಮೀರ್‌ನಲ್ಲಿರುವ ಸಿವಿಲ್ ನ್ಯಾಯಾಲಯದ ನಿರ್ಧಾರವು ಅನಗತ್ಯವಾಗಿದೆ ಮತ್ತು ಅದಕ್ಕೆ ಯಾವುದೇ ಕಾನೂನು ಮಾನ್ಯತೆ ಇಲ್ಲ. ಅಲ್ಲದೆ ಇದು ಆಗಸ್ಟ್ 15, 1947ರ ಮೊದಲು ಅಸ್ತಿತ್ವದಲ್ಲಿದ್ದ ಧಾರ್ಮಿಕ ಸ್ಥಳದ ಬಗ್ಗೆ ಯಾವುದೇ ಕಾನೂನು ವಿವಾದವನ್ನು ಎತ್ತುವಂತಿಲ್ಲ ಎಂದು ವಿಧಿಸಿದ 'ಪೂಜಾ ಸ್ಥಳಗಳ (ವಿಶೇಷ ನಿಬಂಧನೆಗಳು) ಕಾಯಿದೆ', 1991ರ ನಿಬಂಧನೆಗಳಿಗೆ ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಕಾಯಿದೆಯ ಉಲ್ಲಂಘನೆಯು ಈಗಾಗಲೇ ಸಂಭಾಲ್‌ನಲ್ಲಿನ ಮಸೀದಿಯ ಸಮೀಕ್ಷೆಗೆ ಸಂಬಂಧಿಸಿದಂತೆ ದೋಷಪೂರಿತ ನಿರ್ಧಾರಕ್ಕೆ ಕಾರಣವಾಗಿದೆ, ಅದು ಹಿಂಸಾಚಾರ ಮತ್ತು ಐದು ಜನರ ಸಾವಿಗೆ ಕಾರಣವಾಗಿದೆ.

2019ರ ಅಯೋಧ್ಯೆ ತೀರ್ಪಿನಲ್ಲಿ ನ್ಯಾಯಾಲಯವೇ ಎತ್ತಿಹಿಡಿದ ಪೂಜಾ ಸ್ಥಳಗಳ ಕಾಯ್ದೆಗೆ ಅನುಗುಣವಾಗಿ ಇಂತಹ ಕಾನೂನು ಕಲಾಪಗಳನ್ನು ಕೊನೆಗೊಳಿಸಲು ಸುಪ್ರೀಂ ಕೋರ್ಟ್ ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಸುರಕ್ಷತೆ ಖಾತ್ರಿಗೊಳ್ಳಬೇಕು

ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ಪರಿಸ್ಥಿತಿಯು ಈಗಲೂ ಆತಂಕವನ್ನು ಉಂಟುಮಾಡುತ್ತಿದೆ. ಅವರ ಸುರಕ್ಷತೆ ಮತ್ತು ಭದ್ರತೆಗೆ ಧಕ್ಕೆ ತರುವ ವಿವಿಧ ಘಟನೆಗಳು ಸಂಭವಿಸಿವೆ. ಕೋಮು ವಿಭಜನೆಯನ್ನು ಸೃಷ್ಟಿಸಲು ಮೂಲಭೂತವಾದಿ ಶಕ್ತಿಗಳು ಸಕ್ರಿಯವಾಗಿರುವ ಸಮಯದಲ್ಲಿ, ಬಾಂಗ್ಲಾದೇಶದ ಅಧಿಕಾರಿಗಳು ಕೋಮು ದಾಳಿಗಳನ್ನು ತಡೆಯಲು ಇನ್ನೂ ದೃಢವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಶಾಂತಿ ಮತ್ತು ಸೌಹಾರ್ದತೆಗಾಗಿ ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ವಿಳಂಬವಿಲ್ಲದೆ ಕಾರ್ಯನಿರ್ವಹಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಸಂಬಂಧ ಭಾರತದೊಳಗೆ, ಹಿಂದುತ್ವ ಶಕ್ತಿಗಳು ಸಂಯಮಹೀನ ಮತ್ತು ಉದ್ರೇಕಕಾರಿ ಪ್ರಚಾರದಲ್ಲಿ ತೊಡಗಿವೆ. ಇದರಲ್ಲಿ ಅವರ ಉದ್ದೇಶವು ಸಂದೇಹಾಸ್ಪದವಾಗಿದೆ, ಏಕೆಂದರೆ, ಮುಸ್ಲಿಮರನ್ನು ಜರೆಯುವುದಕ್ಕೆ ಮತ್ತು ಇಲ್ಲಿ ಅಲ್ಪಸಂಖ್ಯಾತರ ಮೇಲೆ ಉದ್ದೇಶಿತ ದಾಳಿಗಳಿಗೆ ಈ ಶಕ್ತಿಗಳೇ ಕಾರಣವಾಗಿವೆ. ಮತೀಯ ಕೋಮುವಾದದ ಆಧಾರದ ಮೇಲಿನ ವಿಭಜಕ ರಾಜಕೀಯವು ಬಾಂಗ್ಲಾ ದೇಶಕ್ಕೂ ಮತ್ತು ಭಾರತಕ್ಕೂ ಹಾನಿಕಾರಕವಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

"ಅದಾನಿ ಆಧುನಿಕ ಈಸ್ಟ್ ಇಂಡಿಯಾ ಕಂಪನಿ ಎಂಬ ರೈತ–ಕಾರ್ಮಿಕರ ಅನುಮಾನ ಅತಿಶಯೋಕ್ತಿ ಅಲ್ಲ"

ಅದಾನಿ ಸಮೂಹದ ಎಲ್ಲ ವಹಿವಾಟುಗಳ ಬಗ್ಗೆ ತನಿಖೆ ನಡೆಯಲಿ–ಎಐಕೆಎಸ್ ಆಗ್ರಹ

ಗೌತಮ್ ಅದಾನಿಯವರ ಎಲ್ಲಾ ವಹಿವಾಟುಗಳ ಬಗ್ಗೆ ವಿಶೇಷವಾಗಿ ಅವರಿಗೆ ವಿಮಾನ ನಿಲ್ದಾಣಗಳು, ಬಂದರುಗಳು, ರೈಲ್ವೆಗಳು, ಧಾನ್ಯ ಹಗೇವುಗಳು ಇತ್ಯಾದಿಗಳ ಸರ್ಕಾರಿ ಗುತ್ತಿಗೆಗಳ ಬಗ್ಗೆ ಭಾರತ ಸರ್ಕಾರವು ತನಿಖೆಯನ್ನು ಪ್ರಾರಂಭಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಒತ್ತಾಯಿಸಿದೆ. ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಮತ್ತು ಅಜೂರೆ ಪವರ್ ಗ್ಲೋಬಲ್ ಲಿಮಿಟೆಡ್‌ನ ಕಾರ್ಯನಿರ್ವಾಹಕರು ಮತ್ತು ಎರಡೂ ಕಂಪನಿಗಳಿಗೆ ಸಂಬಂಧಪಟ್ಟ ಕೆಲವು ಹಿರಿಯ ಬಿಸಿನೆಸ್ ಅಧಿಕಾರಿಗಳು ಅಮೆರಿಕ ಸಂಯುಕ್ತ ಸಂಸ್ಥಾನಗಳ(ಯುಎಸ್) ಸೆಕ್ಯುರಿಟೀಸ್ ಕಾನೂನುಗಳ ವಂಚನೆ–ವಿರೋಧಿ ನಿಬಂಧನೆಗಳನ್ನು ಉಲ್ಲಂಘಿಸಿದ್ದಕ್ಕಾಗಿ ನ್ಯಾಯ ವಿಚಾರಣೆ ಎದುರಿಸುತ್ತಿದ್ದಾರೆ ಎಂಬ ಸುದ್ದಿಗೆ ಪ್ರತಿಕಿಯಿಸುತ್ತ ಎಐಕೆಎಸ್ ಈ ಆಗ್ರಹ ಮಾಡಿದೆ.

ಹೊಲಸು ಬಹಳ ಆಳದ ವರೆಗೆ ಹರಡಿದೆ, ಅದಾನಿ ಆಧುನಿಕ ಈಸ್ಟ್ ಇಂಡಿಯಾ ಕಂಪನಿಯಾಗುತ್ತಿದ್ದಾರೆ ಎಂಬ ರೈತರು ಮತ್ತು ಕಾರ್ಮಿಕರ ಅನುಮಾನಗಳು ಖಂಡಿತಾ ಅತಿಶಯೋಕ್ತಿಯಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಎಐಕೆಎಸ್ ಹೇಳಿದೆ.

ಅಮೆರಿಕಾದ ಕೋರ್ಟಿನ ದೋಷಾರೋಪಣೆಯಲ್ಲಿ ಹೇಳಿರುವ ಪ್ರಕಾರ, ಸರಿಸುಮಾರು 2020 ಮತ್ತು 2024ರ ನಡುವೆ, ಭಾರತ ಸರ್ಕಾರದಿಂದ ಲಾಭದಾಯಕ ಸೌರಶಕ್ತಿ ಪೂರೈಕೆ ಒಪ್ಪಂದಗಳನ್ನು ಪಡೆಯಲು ಇಲ್ಲಿನ ಸರ್ಕಾರಿ ಅಧಿಕಾರಿಗಳಿಗೆ 250 ಮಿಲಿಯ ಡಾಲರ್‌ಗಳಿಗಿಂತಲೂ ಹೆಚ್ಚು ಲಂಚವನ್ನು ನೀಡಲು ಆರೋಪಿಗಳು ಒಪ್ಪಿಕೊಂಡರು, ಇವು ಮುಂದಿನ 20 ವರ್ಷಗಳಲ್ಲಿ 2 ಶತಕೋಟಿ ಡಾಲರಿಗಿಂತಲೂ ಹೆಚ್ಚು ತೆರಿಗೆ ನಂತರದ ಆದಾಯವನ್ನು ನೀಡುವ ಒಪ್ಪಂದಗಳು. ಗೌತಮ್ ಅದಾನಿ ಮತ್ತು ಅವರ ಸಹಚರರು ತಮ್ಮ ಕಂಪನಿಯ ಲಂಚ ಮತ್ತು ಭ್ರಷ್ಟಾಚಾರದ ಅಭ್ಯಾಸಗಳನ್ನು ತಪ್ಪಾಗಿ ನಿರೂಪಿಸಲು ಮತ್ತು ಲಂಚದ ಮೂಲಕ ಸಂಗ್ರಹಿಸಲಾದ ಸೌರಶಕ್ತಿ ಪೂರೈಕೆ ಒಪ್ಪಂದಗಳಿಗೆ ಹಣ ನೀಡುವುದು ಸೇರಿದಂತೆ ಹಣಕಾಸು ಪಡೆಯಲು ಯುಎಸ್ ಹೂಡಿಕೆದಾರರು ಮತ್ತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ 'ಲಂಚದ ಯೋಜನೆಯನ್ನು' ಮರೆಮಾಚಲು ಪಿತೂರಿ ನಡೆಸಿದ್ದಾರೆ. ಕೆಲವು ಆರೋಪಿಗಳು 'ಲಂಚ ಯೋಜನೆ'ಗೆ ಸಂಬಂಧಿಸಿದಂತೆ ಯುಎಸ್ ಅಧಿಕಾರಿಗಳ ತನಿಖೆಗೆ ಅಡ್ಡಿಪಡಿಸಲು ಸಂಚು ರೂಪಿಸಿದ ಆರೋಪವನ್ನೂ ಹೊರಿಸಲಾಗಿದೆ. ಇತರ ವಿಷಯಗಳ ಜೊತೆಗೆ, ನಾಲ್ವರು ಆರೋಪಿಗಳು ಇಮೇಲ್‌ಗಳು ಮತ್ತು ಎಲೆಕ್ಟ್ರಾನಿಕ್ ಸಂದೇಶಗಳನ್ನು ಒಳಗೊಂಡಂತೆ 'ಲಂಚ ಯೋಜನೆ'ಗೆ ಸಂಬಂಧಿಸಿದ ಎಲೆಕ್ಟ್ರಾನಿಕ್ ವಸ್ತುಗಳನ್ನು ಅಳಿಸಲು ಸಂಚು ರೂಪಿಸಿದ್ದರು ಎಂದೂ ಹೇಳಲಾಗಿದೆ.

ಗೌತಮ್ ಅದಾನಿ ಅವರ ಸಮೂಹ ಕಂಪನಿಗಳಿಗೆ ಲಾಬಿ ನಡೆಸುವ, ಭ್ರಷ್ಟಾಚಾರ ಮತ್ತು ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ತೊಡಗುವ ಆರೋಪಗಳೂ ಹೊಸದೇನಲ್ಲ ಎಂದು ಎಐಕೆಎಸ್ ನೆನಪಿಸಿದೆ. ಮೂರು ಕಾರ್ಪೊರೇಟ್ ಪರ ಕೃಷಿ ಕಾನೂನುಗಳನ್ನು ತರಲು ನೀತಿ ಆಯೋಗ ಮತ್ತು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರುವಲ್ಲಿ ಅದಾನಿಯವರ ಪಾತ್ರವನ್ನು ಅಥವಾ ಅವರು 'ವಿಶ್ವದ ಅತಿದೊಡ್ಡ ಕಾರ್ಪೊರೇಟ್ ಮೋಸ' ರೂಪಿಸಿಕೊಂಡಿದ್ದರು ಎಂದು ಹಿಂಡೆನ್‌ಬರ್ಗ್ ತನಿಖೆಗಳಲ್ಲಿ ಹೇಳಿರುವುದನ್ನು ನೋಡಿದ್ದೇವೆ. ಪ್ರಧಾನಿ ನರೇಂದ್ರ ಮೋದಿಯವರ ಒಂದು ದಶಕದ ಅಧಿಕಾರದಲ್ಲಿ ಅವರಿಗೆ ದೊರೆತ ಸಂಪೂರ್ಣ ರಕ್ಷಣೆಯಿಂದಾಗಿ ದಶಕದಿಂದ ವಿವಿಧ ಕ್ಷೇತ್ರಗಳಲ್ಲಿ ಅದಾನಿ ಸಮೂಹದ ಬಿಗಿ ಹತೋಟಿ ಹೆಚ್ಚಾದುದನ್ನೂ ನೋಡಿದ್ದೇವೆ ಎಂದು ಎಐಕೆಎಸ್ ಹೇಳಿದೆ. ❑

ಅದಾನಿ ಲಂಚ ಪ್ರಕರಣವೂ–ದುಬಾರಿ ವಿದ್ಯುತ್ ದರವೂ... ಪುಟ 9 ರಿಂದ

ತುಂಬಿಕೊಳ್ಳಲು ನಮ್ಮ ವಿದ್ಯುತ್ ಸರಬರಾಜು ಸಂಸ್ಥೆಗಳು "ನಿಗದಿತ ಶುಲ್ಕ ಹೆಚ್ಚಳ, ಹೆವಿ ಲೋಡ್ ದಂಡ, ಇಂದನ ಹೊಂದಾಣಿಕೆ ಶುಲ್ಕ, ಹೆಚ್ಚುವರಿ ಭದ್ರತಾ ಠೇವಣಿ (ASD) ಇತ್ಯಾದಿ ಹೆಸರಿನಲ್ಲಿ ಗ್ರಾಹಕರಿಂದ ವಸೂಲಿಗೆ ಇಳಿದಿವೆ. ವಿದ್ಯುತ್ ಖರೀದಿ ದರವನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ಈ ಖಾಸಗೀ ಕಂಪನಿಗಳು ಎಸ್ಕಾಮ್ ಮೇಲೆ ಒತ್ತಡ ತರುತ್ತಿವೆ.

ಖಾಸಗಿಯವರ ವಿದ್ಯುತ್ ಅನ್ನು ಸರ್ಕಾರ ಖರೀದಿಸಲೇ ಬೇಕು

ಅಷ್ಟೊಂದು ದುಬಾರಿ ದರ ಕೊಟ್ಟು ಸರ್ಕಾರ ಖಾಸಗಿಯವರಿಂದ ವಿದ್ಯುತ್ ಖರೀದಿ ಮಾಡುವುದೇಕೆ? ಈ ಪ್ರಶ್ನೆ ಮೂಡುತ್ತದಲ್ಲವೇ? ಇದಕ್ಕೆ ಉತ್ತರ: ಆಳುವ ಸರ್ಕಾರದ ಖಾಸಗಿಕರಣ ನೀತಿಗಳೇ ಕಾರಣ. ವಿದ್ಯುತ್ ಉತ್ಪಾದನೆ, ಸಾಗಣೆ, ವಿತರಣೆ ಸೇರಿದಂತೆ ಸಂಪೂರ್ಣವಾಗಿ ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕು ಎಂಬುದು ಕೇಂದ್ರ ಸರ್ಕಾರದ ಗುರಿ. ಕೇಂದ್ರ ಸರ್ಕಾರ "ವಿದ್ಯುತ್ ತಿದ್ದುಪಡಿ ಮಸೂದೆ–2022" ತಂದಿದೆ. ವಿದ್ಯುತ್ ಉತ್ಪಾದನೆಯಲ್ಲಿ ನವೀಕರಿಸಬಹುದಾದಂತಹ ಇಂಧನದ ಉತ್ಪನ್ನದ ಕುರಿತು ಈ ಮಸೂದೆಯಲ್ಲಿ ಹೇಳಲಾಗಿದೆ. ಈ ಮಸೂದೆಯಲ್ಲಿ ಖಾಸಗಿಯವರು ಉತ್ಪಾಧಿಸಿದ ವಿದ್ಯುತ್ ಅನ್ನು ಸರ್ಕಾರ ಕೊಂಡುಕೊಳ್ಳಲೇ ಬೇಕು ಎಂಬ ಷರತ್ತು ವಿಧಿಸಲಾಗಿದೆ. ಜೊತೆಗೆ ಅವರಿಂದ ಕೊಂಡುಕೊಳ್ಳದಿದ್ದಲ್ಲಿ ಖಾಸಗಿ ಕಂಪನಿಗಳಿಗೆ ಸರ್ಕಾರವೇ ದಂಡ ಕೊಡಬೇಕು ಎಂಬ ಪ್ರಸ್ತಾಪವನ್ನು ಕೂಡ ಮಾಡಲಾಗಿದೆ. ಸರ್ಕಾರ ಉತ್ಪಾದಿಸುವ ಕಡಿಮೆ ಬೆಲೆಯ ವಿದ್ಯುತ್ ಅನ್ನು ಬಿಟ್ಟು ಖಾಸಗಿಯವರಿಂದ ದುಬಾರಿ ಬೆಲೆಯ ವಿದ್ಯುತ್ ಖರೀದಿಸಲೇಬೇಕು ಎಂಬ ಈ ಷರತ್ತುಗಳಿಂದಾಗಿ ವಿದ್ಯುತ್ ಬಳಸುವ ರೈತರು ಮತ್ತು ಇತರ ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ. ಕೇಂದ್ರ ತಂದಿರುವ ಈ ತಿದ್ದುಪಡಿ ಮಸೂದೆಯುವ ವಿದ್ಯುತ್ ಕ್ಷೇತ್ರದ ಮೇಲಿನ ರಾಜ್ಯಗಳ ಹಕ್ಕುಗಳನ್ನು ಕೂಡಾ ಕಸಿದುಕೊಳ್ಳುತ್ತದೆ.

ಪರ್ಯಾಯ ಮಾರ್ಗ ಏನಿದೆ?

ಖಾಸಗಿ ವಿದ್ಯುತ್ ಕಂಪನಿಗಳ ಜೊತೆಗೆ ಮಾಡಿಕೊಂಡಿರುವ ದುಬಾರಿ ಒಪ್ಪಂದಗಳನ್ನು ಕೈಬಿಟ್ಟು ಸರ್ಕಾರವೇ ಕಡಿಮೆ ವೆಚ್ಚದ ಜಲವಿದ್ಯುತ್ ಮತ್ತು ಉಷ್ಣವಿದ್ಯುತ್ ಉತ್ಪಾದಿಸಬೇಕು. ಸೌರ ವಿದ್ಯುತ್ ಉತ್ಪಾದನೆಗೆ ಸರ್ಕಾರವೇ ಮುಂದಾಗಬೇಕು. ಇದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗಿ, ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ ವಿದ್ಯುತ್ ಪೂರೈಕೆ ಮಾಡಬಹುದು. ಇದಕ್ಕಾಗಿ ಮತ್ತು ಜನಸಾಮಾನ್ಯರನ್ನು ಸುಲಿಗೆ ಮಾಡಲು ಅವಕಾಶ ಕೊಡುವ ಖಾಸಗೀಕರಣ ನೀತಿಗಳ ವಿರುದ್ದ ಜನತೆ ದ್ವನಿ ಎತ್ತಿ ಹೋರಾಡಬೇಕಿದೆ. ❑

26 ನವೆಂಬರ್: ದೇಶಾದ್ಯಂತ ಕಾರ್ಮಿಕರು ಮತ್ತು ರೈತರಿಂದ ಭಾರೀ ಪ್ರತಿಭಟನಾ ಪ್ರದರ್ಶನಗಳು: ಹೋರಾಟವನ್ನು ತೀವ್ರಗೊಳಿಸಲು ಪಣ

ಸಂಯುಕ್ತ ಕಿಸಾನ್ ಮೋರ್ಚ(ಎಸ್‌ಕೆಎಂ) ನೇತೃತ್ವದಲ್ಲಿ ಮೂರು ಕರಾಳ ಕೃಷಿ ಕಾಯ್ದೆಗಳ ವಿರುದ್ಧ ಐತಿಹಾಸಿಕ 'ದಿಲ್ಲಿ ಚಲೋ'ದ ಆರಂಭ ಮತ್ತು ಆ ಸಂದರ್ಭದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ 4ನೇ ವಾರ್ಷಿಕೋತ್ಸವ ಆಚರಣೆ 26 ನವೆಂಬರ್ 2024ರಂದು ದೇಶಾದ್ಯಂತ ನಡೆದಿದೆ, ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆ ಕರೆ ನೀಡಲಾದ ರಾಷ್ಟ್ರವ್ಯಾಪಿ ಮತಪ್ರದರ್ಶನಗಳಲ್ಲಿ ಸುಮಾರು ಹತ್ತು ಲಕ್ಷ ಮಂದಿ ಭಾಗವಹಿಸಿದ್ದಾರೆ ಎಂದು ಈ ಎರಡು ಸಂಘಟನೆಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಬಹುತೇಕ ರಾಜ್ಯಗಳ ಜಿಲ್ಲಾ ಕೇಂದ್ರಗಳು ಸೇರಿದಂತೆ ಸುಮಾರು ಐನೂರು ಸ್ಥಳಗಳಲ್ಲಿ ಕಾರ್ಯಕ್ರಮಗಳು ನಡೆದವು. ಬೃಹತ್ ಪ್ರತಿಭಟನೆಗಳು ಭಾರತದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅನೇಕ ರಾಜ್ಯಗಳಲ್ಲಿ ಕೈಗಾರಿಕಾ ಪ್ರದೇಶಗಳಲ್ಲಿಯೂ ನಡೆದವು. ಹಲವು ಕಚೇರಿಗಳಲ್ಲಿ ಮಧ್ಯಾಹ್ನದ ಊಟದ ವೇಳೆ ಮತಪ್ರದರ್ಶನ ನಡೆಸಲಾಯಿತು.

ಹಲವೆಡೆ ಪೊಲೀಸರು ಲಾಠಿ ಪ್ರಹಾರ ನಡೆಸಿ ಬಲಪ್ರಯೋಗ ಮಾಡಿದರು. ಬಿಹಾರದ ಭಾಗಲ್ಪುರದಲ್ಲಿ ಡಿಎಂ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದ ಕಾರ್ಮಿಕರು ಮತ್ತು ರೈತರ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ. ಆರು ಮಂದಿ ಗಾಯಗೊಂಡಿದ್ದಾರೆ. ಪೊಲೀಸರು ಮೂವರು ಮುಖಂಡರನ್ನು ಬಂಧಿಸಿದ್ದಾರೆ ಎಂದು ಜಂಟಿ ಹೇಳಿಕೆ ತಿಳಿಸಿದೆ.

ಇತ್ತೀಚೆಗೆ ಅಗತ್ಯ ಆಹಾರ ಪದಾರ್ಥಗಳ ಬೆಲೆಯಲ್ಲಿ ಅಭೂತಪೂರ್ವ ಏರಿಕೆಯಿಂದ ಕ್ರೋಧಗೊಂಡ ಜನಗಳು ಮೂಲಭೂತ ಹಕ್ಕುಗಳಿಗಾಗಿ ಜಂಟಿ ಹೋರಾಟಗಳನ್ನು ತೀವ್ರಗೊಳಿಸಲು ನಿರ್ಧರಿಸಿದರು. ಅನೇಕ ಕಡೆ ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಶಿಕ್ಷಕರು, ಇತರ ವೃತ್ತಿಪರರು ಮತ್ತು ಕಲೆ, ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರದ ಸಾಮೂಹಿಕ ಸಂಘಟನೆಗಳು ತಮ್ಮ ಬೇಡಿಕೆಗಳೊಂದಿಗೆ ಮತ್ತು ಕಾರ್ಮಿಕ ಸಂಘಟನೆಗಳು ಮತ್ತು ರೈತ ಸಂಘಟನೆಗಳ ಬೇಡಿಕೆಗಳಿಗೆ ಸೌಹಾರ್ದ ವ್ಯಕ್ತಗೊಂಡಿತು. ಜಿಲ್ಲಾಧಿಕಾರಿ ಕಚೇರಿಗಳ ಎದುರು ನಡೆದ ಧರಣಗಳಲ್ಲಿ ಹಲವು ಸ್ಥಳೀಯ ಬೇಡಿಕೆಗಳನ್ನು ವೇದಿಕೆಗಳ ಮೂಲಕ ಪ್ರಸ್ತಾಪಿಸಲಾಯಿತು.

ಕಾರ್ಮಿಕರು, ರೈತರು, ಜನರ ಪ್ರಶ್ನೆಗಳಲ್ಲಿ ರಾಷ್ಟ್ರೀಯ ಹಿತದೃಷ್ಟಿಯಿಂದ್ಲ ಮಧ್ಯಪ್ರವೇಶಿಸುವಂತೆ ಭಾರತದ ರಾಷ್ಟ್ರಪತಿಗಳಿಗೆ ಮನವಿಗಳನ್ನು ಸಲ್ಲಿಸಲಾಯಿತು.

ಕಾರ್ಮಿಕ ಸಂಘಗಳ ಜಂಟಿ ವೇದಿಕೆ ಮತ್ತು ಎಸ್‌ಕೆಎಂ ಶೀಘ್ರದಲ್ಲೇ ಭೇಟಿಯಾಗಲಿದ್ದು, ತಮ್ಮ ಚಟುವಟಿಕೆಗಳ ಪರಿಶೀಲನೆ ನಡೆಸಿ, ಪ್ರಸ್ತುತ ಸರ್ಕಾರದ ಕಾರ್ಪೊರೇಟ್ ಪರ ನೀತಿಗಳಲ್ಲಿ ಬದಲಾವಣೆಗಳ ತಮ್ಮ ಬೇಡಿಕೆಗಳನ್ನು ಸಾಧಿಸಲು ಅಭಿಯಾನಗಳನ್ನು ಮತ್ತು ಹೋರಾಟಗಳನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಹೇಳಿವೆ. ❑

ಭಾರತೀಯ ಸಂಸ್ಕೃತಿ ಉತ್ಸವ ಎಂಬ ಧತ್ತೂರಿ ಮರ

ಡಾ. ಮೀನಾಕ್ಷಿ ಬಾಳಿ, ಕಲಬುರಗಿ

ಬಸವ ಕಲ್ಯಾಣದ ಹೆಬ್ಬಾಗಿಲು ಎನಿಸಿಕೊಂಡಿರುವ ಕಲಬುರಗಿ ಶರಣ, ಸಂತ, ಸೂಫಿಗಳ ಆಡಂಬೊಲವಾಗಿದೆ. ಶತ ಸಹಸ್ರಮಾನಗಳಿಂದಲೂ ಇಲ್ಲಿಯ ಜನರು ಪರಸ್ಪರ ಸಹಬಾಳ್ವೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ರಾಜಕೀಯವಾಗಿ ಹಲವಾರು ಏಳು ಬೀಳುಗಳನ್ನು ಕಂಡರೂ ಜನತೆ ಮಾತ್ರ ಜಾತಿ, ಮತ, ಪಂಥಗಳಾಚೆ ಪರಸ್ಪರ ಕರುಳು ಬಳ್ಳಿಯಲ್ಲಿ ಬೆಸೆದುಕೊಂಡು ಬದುಕಿದ್ದಾರೆ. ಪರಧರ್ಮ ಮತ್ತು ಪರವಿಚಾರಗಳನ್ನು ಸೈರಿಸಿಕೊಂಡು ಮನುಷ್ಯ ಬಂಧದಲ್ಲಿ ಬಾಳುವುದೇ ನಿಜವಾದ ಬಂಗಾರ ಎಂದು ವಿಶ್ವಕ್ಕೆ ಅಪರೂಪದ ಭದ್ರ ಸಂದೇಶವನ್ನು ಸಾರಿದ ಕವಿರಾಜಮಾರ್ಗ ಹುಟ್ಟಿದ ನೆಲದಲ್ಲಿಯೇ ಕೋಮುದ್ವೇಷದ ಧತ್ತೂರಿ ಬೀಜ ಬಿತ್ತಿ ಫಸಲು ತೆಗೆಯುತ್ತಿರುವುದು ವರ್ತಮಾನದ ಬಹು ದೊಡ್ಡ ದುರಂತವಾಗಿದೆ.

ಮಾನ್ಯಖೇಟದಂಥ ಸೌಹಾರ್ದ ನೆಲದಲ್ಲಿ ಬಸವರಾಜ ಪಾಟೀಲ ಎಂಬ ಸಂಘ ಪರಿವಾರಿ ಕಾಣಿಸಿಕೊಂಡದ್ದು ಈ ನೆಲಕ್ಕೆ ಏಡ್ಸ್ ಆಗಿ ಪರಿಣಮಿಸಿದೆ.. ಜಗತ್ತಿಗೆ ಸಮಾನತೆಯ ತತ್ವ ಬೋಧಿಸಿದ ಬಸವಾದಿ ಶರಣರು ನಡೆದಾಡಿದ ನೆಲದಲ್ಲಿ ಅವರ ಹೆಸರೇ ಇಟ್ಟುಕೊಂಡಿರುವ ಲಿಂಗವಂತ ಸಮುದಾಯದವರನೇಕರು ಬಸವದ್ರೋಹಿಗಳಾಗಿ ಹೊರಹೊಮ್ಮಿದ್ದು ಕೂಡ ದೊಡ್ಡ ಕಳಂಕವಾಗಿದೆ. ಬಸವಣ್ಣನವರ ಬಗೆಗೆ ಅಸಂಬದ್ಧವಾಗಿ ಮಾತನಾಡುವ ಯತ್ನಾಳ, ಅಧಿಕಾರ ದಾಹಕ್ಕಾಗಿ ತಂದೆಯ ಸಮಾಜವಾದಿ ಸಿದ್ಧಾಂತವನ್ನೆ ಮಣ್ಣು ಮುಕ್ಕಿಸುತ್ತಿರುವ ಬೊಮ್ಮಾಯಿ, ಶಿಕ್ಷಣ ಸಂಸ್ಥೆಗಳ ಮೂಲಕ ಸೇವೆ ಮಾಡುತ್ತೇನೆ ಎಂದು ಫೋಜು ಕೊಡುತ್ತಿರುವ ಪಾಟೀಲ ಇವರೆಲ್ಲರ ಹೆಸರ ಬಸವರಾಜ ಎಂದಿರುವುದು ಅದೆಷ್ಟು ದುರಂತ ಅಲ್ಲವೆ?

ಸೇಡಂ ನಿವಾಸಿ ಬಸವರಾಜ ಪಾಟೀಲ ಎಂಬ ಸಂಘದ ಕಟ್ಟಾಳು ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸುವ ಮೂಲಕ ಇಲ್ಲಿ ಧರ್ಮದ್ವೇಷದ ದತ್ತೂರಿ ಬೀಜವನ್ನು ಊರಿದ್ದಾರೆ. ಅದು ಈಗ ಕೋಮು ದಳ್ಳುರಿಯ ಹೆಮ್ಮರವಾಗಿ ಬೆಳೆದು ನಮ್ಮ ನಾಡನ್ನು ಕಬಳಿಸುತ್ತಿದೆ. ಪಾಟೀಲಜೀ ಎಂದು ಕರೆಸಿಕೊಳ್ಳುತ್ತಿರುವ ಇವರು ನಡೆ-ನುಡಿಗಳಲ್ಲಿ ಪ್ರಾಮಾಣಿಕರೆಂಬಂತೆ ಬಿಂಬಿಸಿಕೊಂಡು ಸ್ಥಳೀಯರ ಮೇಲೆ ಮಂಕು ಬೂದಿ ಎರಚಿದ್ದಾರೆ. ಅದೂ ಶರಣ ಪರಂಪರೆಯ ಮಠವೊಂದರ ಹೆಸರಿನಲ್ಲಿಯೇ ಸಂಸ್ಥೆಯನ್ನು ಹುಟ್ಟು ಹಾಕಿ ಹತ್ತಾರು ಶಾಲಾ-ಕಾಲೇಜುಗಳನ್ನು ತೆರೆದು ಅಲ್ಲಿ ಅಕ್ಷರ ಕಲಿಸುವ ನೆಪದಲ್ಲಿ ಮಕ್ಕಳ ಮನಸಲ್ಲಿ ಕೋಮು ವಿಷವನ್ನು ಬಿತ್ತುತ್ತಿದ್ದಾರೆ. ಬಿಜೆಪಿ ಪಕ್ಷದಿಂದ ಸಂಸದರಾಗಿದ್ದ ಇವರು ಕಳೆದ ಸಲ ಬಿಜೆಪಿ ಅಧಿಕಾರದಲ್ಲಿದ್ದಾಗ ಆಯಕಟ್ಟಿನ ಜಾಗ ಪಡೆದುಕೊಂಡು ಸಂಸ್ಕೃತಿ ಹೆಸರಿನಲ್ಲಿ ಸಾವಿರಾರು ಕೋಟಿ ಹಣವನ್ನು ಅನುದಾನವಾಗಿ ಪಡೆದುಕೊಂಡು ತನ್ಮೂಲಕ ಸಂಘ ಪರಿವಾರದ ಕುಟಿಲ ಕುತಂತ್ರವನ್ನು ಮುನ್ನೆಲೆಗೆ ತಂದಿದ್ದಾರೆ.

ಈಗಾಗಲೇ ಅವರು ಕಲಬುರಗಿ ಕಂಪು ಎಂಬೊಂದು ರಾಷ್ಟ್ರಮಟ್ಟದ ಆರ್.ಎಸ್.ಎಸ್. ಕಾರ್ಯಕ್ರಮ ನಡೆಸಿ ಇಡೀ ಕಲ್ಯಾಣ ಕರ್ನಾಟಕ ನಾಡನ್ನು ಗಬ್ಬೆಬ್ಬಿಸಿದ್ದಲ್ಲದೆ ಈಗ ಮತ್ತೆ ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆಯ ಸ್ವರ್ಣ ಜಯಂತಿ ನಿಮಿತ್ಯ ಭಾರತೀಯ ಸಂಸ್ಕೃತಿ ಉತ್ಸವ ಎಂಬ ಬೃಹತ್ ಸಮಾರಂಭವನ್ನು ಒಂಬತ್ತು ದಿನಗಳ ಕಾಲ ಹಮ್ಮಿಕೊಂಡಿದ್ದಾರೆ. ಸದರಿ ಕಾರ್ಯಕ್ರಮಕ್ಕೆ ದೇಶದ ಮೂಲೆ ಮೂಲೆಯಲ್ಲಿರುವ ಸಂಘದ ಕಟ್ಟಾಳುಗಳನ್ನು ಆಮಂತ್ರಿಸಿ ಅವರ ಮೂಲಕ ನಮ್ಮ ನಾಡಿನ ಸಾಮರಸ್ಯವನ್ನು ಹಾಳುಗೆಡುವ ಸಂಚು ಹೂಡಿದ್ದಾರೆ.

ಇದಕ್ಕಾಗಿ ಸಾವಿರಾರು ಕೋಟಿ ಹಣ ವಿನಿಯೋಗಿಸಲಾಗುತ್ತಿದೆ. ಅದರಲ್ಲಿ ಅರ್ದದಷ್ಟು ಹಣ ಕಳೆದ ಸರಕಾರದಲ್ಲಿ “ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಮತ್ತು ಸಾಂಸ್ಕೃತಿಕ ಸಂಘ” ಎಂಬ ಸಂಸ್ಥೆಯೊಂದನ್ನು ನಿರ್ಮಿಸಿಕೊಂಡು ಅದಕ್ಕೆ ಸಂಪುಟ ದರ್ಜೆ ಸಚಿವರಷ್ಟು ಅಧಿಕಾರ, ಸೌಲತ್ತು ಗಿಟ್ಟಿಸಿಕೊಂಡು ಅನುದಾನದ ಹೆಸರಲ್ಲಿ ಲೂಟಿ ಮಾಡಿದ್ದೇ ಆಗಿದೆ. ಇನ್ನು ಉಳಿದದ್ದನ್ನು ಸ್ಥಳೀಯ ಉದ್ದಿಮೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಜನಸಾಮಾನ್ಯರಿಂದ ಸೆಳೆದುಕೊಂಡು ವರ್ಣಾಶ್ರಮ ಧರ್ಮವನ್ನು ಅಭಿವೃದ್ಧಿ ಪಡಿಸಲು ಮುಂದಾಗಿದ್ದಾರೆ. 50 ಪುಟಗಳ 18 ಕ್ವಿಂಟಲ್ ಆಮಂತ್ರಣ ಪತ್ರಗಳನ್ನು ಕನ್ನಡ, ಹಿಂದಿ, ಇಂಗ್ಲೀಷ ಭಾಷೆಯಲ್ಲಿ ಪ್ರಕಟಿಸಿದ್ದಾರೆ. ಭಾರತ ವಿಕಾಸ



ಸಂಗಮ ಎಂಬ ಸಂಸ್ಥೆಯಡಿಯಲ್ಲಿ ಮಾತ್ರ, ಶೈಕ್ಷಣಿಕ, ಯುವ, ಗ್ರಾಮ ಕೃಷಿ, ಆಹಾರ-ಆರೋಗ್ಯ, ಸ್ವಯಂ ಉದ್ಯೋಗ, ಪ್ರಕೃತಿ ಮತ್ತು ನಾವು, ಸೇವಾ ಶಕ್ತಿ, ದೇಶ-ಧರ್ಮ-ಸಂಸ್ಕೃತಿ ಮುಂತಾಗಿ ದಿನಕ್ಕೊಂದು ಆಕರ್ಷಕ ಘೋಷಣೆಯಡಿಯಲ್ಲಿ ಸಮಾವೇಶಗಳನ್ನು ಹಮ್ಮಿಕೊಂಡಿದ್ದಾರೆ. 240 ಎಕರೆ ಬೆಳೆಯುವ ಭೂಮಿಯಿಂದ ರೈತರನ್ನು ತಾತ್ಪೂರ್ತಿಕವಾಗಿ ಒಕ್ಕಲೆಬ್ಬಿಸಿ ವಾತಾವರಣವನ್ನು ಕಲುಷಿತಗೊಳಿಸಿ ಇನ್ನೊಂದೆಡೆ ತಮ್ಮ ಕೋಮುವಾದಿ ವಿಷವುಣಿಸಿ ಮುಗ್ಧರ ಮನೋಸ್ವಾಸ್ಥ್ಯವನ್ನು ಹಾಳುಗೆಡಹುತ್ತಿದ್ದಾರೆ. ಈಗಾಗಲೆ ನೂರಾರು ಶೂದ್ರರು ಬರಲಿರುವ ಸನಾತನಿಗಳ ಸೇವೆ ಮಾಡಲು ತಮ್ಮ ಶ್ರಮ, ಧನ, ಮನಗಳನ್ನು ಮೀಸಲಿಟ್ಟು ದುಡಿಯುತ್ತಿದ್ದಾರೆ. ದುಡಿಯುವವರೆಲ್ಲ ಶೂದ್ರರು. ಅಲ್ಲಿ ಗೌರವಗೊಳ್ಳಲಿರುವವರೆಲ್ಲ ಗೋವಿಂದಾಚಾರ್ಯರಾದಿಯಾಗಿ ಬಹುತೇಕ ವೈದಿಕರು. ಈ ಕಾರ್ಯಕ್ರಮಗಳಿಗೆ ಸರಕಾರದ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಬ್ಬಂದಿಯನ್ನು ರಾಜಾರೋಷವಾಗಿ ತೊಡಗಿಸಿಕೊಂಡಿದ್ದಾರೆ. ಹಿಂದಿನ ವರ್ಷದಿಂದಲೆ ತಮ್ಮ ಈ ಕೋಮು ಧೃವೀಕರಣದ ಮಿಷನ್ ಅಡಿಯಲ್ಲಿ ವಿವಿಧ ಸ್ಪರ್ಧೆಗಳು ಹಮ್ಮಿಕೊಂಡು ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ವ್ಯಾಪಕವಾಗಿ ಬೇರು ಬಿಟ್ಟಿರುವ ಸಂಘಿ ಅಧಿಕಾರಿಗಳು ಸರಕಾರಿ ಯಂತ್ರವನ್ನು ಯಾವ ಎಗ್ಗಿಲ್ಲದೆ ಪಾಟೀಲಜೀ ಪದತಲಕ್ಕೆ ಸಮರ್ಪಿಸಿದ್ದಾರೆ.. ಗ್ರಾಮೀಣ ಪ್ರದೇಶದಲ್ಲಿನ ಬಡತನವನ್ನು ಬಂಡವಾಳ ಮಾಡಿಕೊಂಡು ಕೌಶಲ್ಯಾಭಿವೃದ್ಧಿ ನೆಪದಲ್ಲಿ ಅಷ್ಟಿಷ್ಟು ಹೊಲಿಗೆ ಯಂತ್ರ, ಶಾವಿಗೆ ತಯಾರಿಸುವ ಯಂತ್ರ, ತೊಗರಿ ಬ್ಯಾಳಿ ತಯಾರಿಸುವ ಯಂತ್ರ, ರೊಟ್ಟಿ ಯಂತ್ರ ಅಲ್ಲದೆ ಒಕ್ಕಲುತನ ಸಲಕರಣೆ, ಪಶು ಖರೀದಿಗೆ ಹಣ ಹೀಗೆ ಕಿರಕುಳ ಸಹಾಯ ಮಾಡುವ ಮೂಲಕ ಸುತ್ತಲಿನ ಗ್ರಾಮಸ್ಥರ ಅನುಕಂಪ ಗಿಟ್ಟಿಸಿ ಅವರನ್ನೆಲ್ಲ ತಮ್ಮ ಕಾಲಾಳುಗಳಾನ್ನಾಗಿಸಿ ಕೊಂಡಿದ್ದಾರೆ. ಜನರಲ್ಲಿ ಬಡತನ ನೆಲೆಯೂರುವಂತೆ ಮಾಡುವುದು ಮತ್ತು ಆ ಬಡತನವನ್ನೆ ಬಂಡವಾಳ ಮಾಡಿಕೊಳ್ಳುವುದನ್ನು ಯಾರಾದರೂ ಸಂಘ ಪರಿವಾರಿಗಳಿಂದ ಕಲಿಯಬೇಕು. ಸರಕಾರ ನೀಡಿದ ಅನುದಾನದಿಂದ ಸಹಾಯ ಮಾಡಿ ಹೆಸರು ಮಾತ್ರ ಸಂಘ ಪರಿವಾರದ್ದು. ಕಳೆದ ಬಿಜೆಪಿ ಸರಕಾರ ಲಿಂಗಾಯತ, ದಲಿತ, ಹಿಂದುಳಿದ ನಾಯಕರನ್ನು ಬಳಸಿಕೊಂಡು ಜನರ ತೆರಿಗೆ ಹಣ ಲೂಟಿ ಮಾಡಿ ಸಂಘದ ಹೆಸರನ್ನು ಮುನ್ನೆಲೆಗೆ ತಂದಿದೆ. 2014 ರ ಸಾಲಿನಿಂದ ಆರ್.ಎಸ್.ಎಸ್. ದೇಶಾದ್ಯಂತ ಮಾಡಿದ ಆಸ್ತಿ=ಪಾಸ್ತಿಗಳಿಗೆ ಲೆಕ್ಕವೆ ಇಲ್ಲ. ಸಂಘದ ನಾಜೂಕಿನ ಮುಖವಾಡವಾಗಿರುವ ಬಸವರಾಜ ಪಾಟೀಲ ಸೇಡಂನಂಥ ಆಷಾಢಭೂತಿಗಳು ಕಲ್ಯಾಣ ಕರ್ನಾಟಕ ಭಾಗದ ಜನರ ಬಡತನ ಮತ್ತು ಮುಗ್ಧತೆ ಎರಡನ್ನು ದುರ್ಬಳಕೆ ಮಾಡಿಕೊಂಡು ಇಲ್ಲಿನ ಯುವಕರು ಕೋಮು ದಳ್ಳುರಿಯ ಬೆಂಕಿಯಲ್ಲಿ ಸರ್ವನಾಶವಾಗುವಂತೆ ಮಾಡುತ್ತಿದ್ದಾರೆ.

ಒಂದೆಡೆ ಬಸವಣ್ಣ, ಅನುಭವ ಮಂಟಪ ಅಭಿವೃದ್ಧಿ ಎಂದು ಜಪಿಸುತ್ತಲೆ ವಚನ ತತ್ವದ ಜೀವಧ್ವನಿಯಾಗಿರುವ ವೈದಿಕ ವಿರೋಧಿ ಸಿದ್ಧಾಂತವನ್ನು ಮಣ್ಣು ಮುಕ್ಕಿಸುವ ಷಡ್ಯಂತ್ರದ ಭಾಗವಾಗಿ ಭಾರತೀಯ ಸಂಸ್ಕೃತಿ ಉತ್ಸವ ನಡೆಸಲಾಗುತ್ತಿದೆ. ಆಮಂತ್ರಣ ಪತ್ರದಲ್ಲಿ ವಚನದ ಒಂದು ಸಾಲು ಇಲ್ಲ. ಅಷ್ಟಕ್ಕೂ ಈ ಮನುಷ್ಯ ಬಸವನುದಿಸಿದ ಹಾಗೂ ಶರಣಬಸವನುದಿಸಿದ ಈ ನಾಡನ್ನು ಹನುಮನುದಿಸಿದ ನಾಡೆಂದೆ ಬಿಂಬಿಸುತ್ತ ಬರುತ್ತಿದ್ದಾರೆ. ತನ್ನ ಕೊಳಕು ಸಂಸ್ಕೃತಿಯನ್ನು ಮೆರೆಯಲು ಕಲಬುರಗಿ ನೆಲದ ಎಲ್ಲ ಶರಣ ಪರಂಪರೆಯ ಅನುಯಾಯಿಗಳನ್ನು ಬಳಸಿಕೊಳ್ಳುತ್ತಿದ್ದಾನೆ. ಅಷ್ಟೇ ಏಕೆ ಕರ್ನಾಟಕದ ಮುಖ್ಯ ಮಂತ್ರಿ ಮಾನ್ಯ ಸಿದ್ಧರಾಮಯ್ಯನವರು, ಉಸ್ತುವಾರಿ ಸಚಿವರಾಗಿರುವ ಮಾನ್ಯ ಪ್ರಿಯಾಂಕ ಖರ್ಗೆಯವರು, ವೈದ್ಯಕೀಯ ಸಚಿವರಾಗಿರುವ ಮಾನ್ಯ ಶರಣಪ್ರಕಾಶ ಪಾಟೀಲ, ಸಣ್ಣ ಕೈಗಾರಿಕೆ ಸಚಿವ ಮಾನ್ಯ ಶರಣಬಸಪ್ಪ ದರ್ಶನಾಪೂರ, ಸಂಸದ ರಾಧಾಕೃಷ್ಣ ದೊಡ್ಡಮನಿ ಮುಂತಾದವರ ಹೆಸರನ್ನು ಬಳಸಿಕೊಂಡಿದ್ದಾರೆ.

ಇದರಲ್ಲಿ ಹಲವರಿಗೆ ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆಯ ಹಿನ್ನೆಲೆ ಮುನ್ನೆಲೆಯೇ ತಿಳಿದಿಲ್ಲ. ಕೆಲವೊಮ್ಮೆ ತಮ್ಮ ಐಡೆಂಟಿಟಿಯನ್ನು ಮರೆಮಾಚಿ ಉದಾತ್ತ ವಿಚಾರಗಳ ಮುಖವಾಡದಿಂದ ಸ್ಥಳೀಯರನ್ನು ಯಾಮಾರಿಸಿ ತಮ್ಮ ಉದ್ದೇಶಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಈಗಾಗಲೇ ಮುಖ್ಯ ಮಂತ್ರಿಗಳಾದಿಯಾಗಿ ಹಲವು ನಾಯಕರು ಸಂಘಿಗಳ ಮರೆ ಮೋಸವನ್ನು ಬಯಲು ಮಾಡಿದ್ದಾರೆ. ಇಲ್ಲಿನ ಜನಸಾಮಾನ್ಯರು ಈಗ ಎಚ್ಚೆತ್ತುಕೊಳ್ಳಬೇಕಿದೆ. ಬಸವರಾಜ ಪಾಟೀಲ ಸೇಡಂ ಜನವರಿ ಕೊನೆಯ ವಾರದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮ ಭಾರತೀಯ ಸಂಸ್ಕೃತಿ ಉತ್ಸವವಲ್ಲ ಅದು ಸನಾತನ ಸಂಸ್ಕೃತಿ ಮೆರೆಸುವ ಉತ್ಸವವಾಗಿದೆ. ಭಾರತ ವಿಕಾಸ ಅಲ್ಲ ಭಾರತ ವಿನಾಶ ಸಂಗಮ ಆಗಿದೆ. ಅದೇನಿದ್ದರೂ ಸನಾತನಿಗಳ ವಿಕಾಸ, ಬ್ರಾಹ್ಮಣಶಾಹಿಗಳ ಅಭಿವೃದ್ಧಿ ಆಗಿದೆ. ಇನ್ನೊಂದು ಅರ್ಥದಲ್ಲಿ ಅದು ನಮ್ಮ ನಾಡಿನ ಬಸವ ಸಂಸ್ಕೃತಿ, ಸೌಹಾರ್ದ ಪರಂಪರೆ, ಸಹಬಾಳ್ವೆಯನ್ನು ನಾಶ ಮಾಡುವ ಕಾರ್ಯಕ್ರಮವಾಗಿದೆ. ನಾವೀಗ ಸುಮ್ಮನೆ ಕೂಡಲಾಗದು. ಪಾಟೀಲಜೀ ಎಂಬ ಸಂಘಿಯ ದುಷ್ಟ ಕಾರ್ಯತಂತ್ರವನ್ನು ನಿಷ್ಫಲಗೊಳಿಸಬೇಕಿದೆ. ಕೋಮುದ್ವೇಷದ ಧತ್ತೂರಿ ಮರವನ್ನು ಸಮೂಲವಾಗಿ ಕಡಿದು ಹಾಕಬೇಕಿದೆ. ಇಲ್ಲವಾದರೆ ನಮ್ಮಗಳ ಮಾರಣಹೋಮ ನಿಲ್ಲದು. ❑

ಮಹಾಯುತಿಯ ‘ಮಹಾ’ ವಿಜಯ ಹೇಗಾಯಿತು..... ಪುಟ 6 ರಿಂದ

ಮಾಡಿದಂತೆ ಕಾಣುತ್ತದೆ. ಮಹಿಳೆಯರ ಮತದಾನ (59.2% –> 65.1% 5.3 %) ರಷ್ಟು ಏರಿಕೆಯಾಗಿತ್ತು ಮತ್ತು ಮಹಿಳೆಯರು ಪುರುಷರಿಗಿಂತ 5.52 ಲಕ್ಷ ಹೆಚ್ಚು ಮತದಾನದಲ್ಲಿ ಭಾಗವಹಿಸಿದ್ದರು ಎಂಬುದು ಪರೋಕ್ಷವಾಗಿಯಾದರೂ ಇದನ್ನು ಸೂಚಿಸುತ್ತದೆ. ಲೋಕನೀತಿ-ಸಿಎಸ್‌ಡಿಎಸ್ ಮಾಡಿದ ಚುನಾವಣೋತ್ತರ ಸಮೀಕ್ಷೆ ಪ್ರಕಾರ ಮಹಿಳೆಯರಲ್ಲಿ ಪುರುಷರಿಗಿಂತ 3% ಹೆಚ್ಚು ಮಹಿಳೆಯರು ಮತ್ತು ಸರಾಸರಿ ಮಹಿಳೆಯರಿಗಿಂತ ಈ ಯೋಜನೆಗೆ ಅರ್ಜಿ ಹಾಕಿದ ಮಹಿಳೆಯರಲ್ಲಿ 4% ಹೆಚ್ಚು ಜನ ಮಹಾಯುತಿಗೆ ಮತ ನೀಡಿದ್ದಾರೆ. ಸಮೀಕ್ಷೆ ಮಾಡಿದವರಲ್ಲಿ 91% ಗ್ರಾಮೀಣ ಮತ್ತು 73% ನಗರ ಮಹಿಳೆಯರು ಈ ಯೋಜನೆಗೆ ಅರ್ಜಿ ಹಾಕಿದ್ದರು ಎಂದೂ ಸಮೀಕ್ಷೆ ಹೇಳಿದೆ.

ಈಗ ಚುನಾವಣೆಯ ಹೊತ್ತಿಗೆ ಅಧಿಕಾರದಲ್ಲಿರುವ ಮತ್ತು ವಿರೋಧ ಪಕ್ಷಗಳೆರಡೂ ನೇರ ನಗದು ವರ್ಗಾವಣೆಯ ‘ಗ್ಯಾರಂಟಿ’ ಯ ರಾಜಕೀಯದಲ್ಲಿ ತೊಡಗಿವೆ. ಇವೆಲ್ಲವೂ ಕೆಲಸ ಮಾಡಲಿಲ್ಲ. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಆಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್‌ಗೆ ಗ್ಯಾರಂಟಿಗಳು ಕೈ ಹಿಡಿದವು. ರಾಜಸ್ಥಾನದಲ್ಲಿ ಕಾಂಗ್ರೆಸ್ ಮತ್ತು ತೆಲಂಗಾಣದಲ್ಲಿ ಟಿಆರ್‌ಎಸ್ ಆಳುವ ಪಕ್ಷವಾಗಿದ್ದಾಗ ಜಾರಿ ಮಾಡಿದ್ದ ಇಂತಹ ಗ್ಯಾರಂಟಿಗಳು ಕೈ ಹಿಡಿಯಲಿಲ್ಲ. ಗ್ಯಾರಂಟಿ ರಾಜಕೀಯವಾಗಿ ಸಾಮಾನ್ಯವಾಗುತ್ತಿದ್ದಂತೆ ಅದು ಪರಿಣಾಮಕಾರಿತನ ಕಳೆದುಕೊಳ್ಳುತ್ತಿದ್ದು, ‘ಗ್ಯಾರಂಟಿ’ಗಳನ್ನು ಗೇಲಿ ಮಾಡುತ್ತಿದ್ದ ಬಿಜೆಪಿ ಮಧ್ಯಪ್ರದೇಶದಲ್ಲಿ ‘ಗ್ಯಾರಂಟಿ’ಯ ಯಶಸ್ಸಿಗೆ ಫಾರ್ಮುಲಾ ಹುಡುಕಿದಂತಿದೆ. ಆಳುವ ಪಕ್ಷ ಚುನಾವಣೆಗೆ ಕೆಲವು ತಿಂಗಳುಗಳ ಮೊದಲು ಕಲ್ಯಾಣ ಯೋಜನೆ, ಗ್ಯಾರಂಟಿಗಳನ್ನು ಘೋಷಿಸಿ ಅದನ್ನು ತ್ವರಿತವಾಗಿ ಜಾರಿಮಾಡಿ ತೋರಿಸಬೇಕು. ಬಿಜೆಪಿ ಈ ಫಾರ್ಮುಲಾವನ್ನು ಆಗ ಮಧ್ಯಪ್ರದೇಶದಲ್ಲಿ, ಈಗ ಮಹಾರಾಷ್ಟ್ರದಲ್ಲಿ ಯಶಸ್ವಿಯಾಗಿ ಬಳಸಿದೆ. ಹಿಂದೆ ಲೋಕಸಭಾ ಚುನಾವಣೆಯ ಕೆಲವು ತಿಂಗಳ ಮೊದಲು ಕಿಸಾನ್ ಸಮ್ಮಾನ ಯೋಜನಾ ಜಾರಿಗೊಳಿಸಿತ್ತು. ಈಗ ರಾಜ್ಯಗಳಲ್ಲಿ ಅದನ್ನು ಪ್ರಯೋಗಿಸುತ್ತಿದೆ. ಮಹಾ ವಿಕಾಸ ಅಘಾಢಿಯ ಹೆಚ್ಚು ಸಮಗ್ರವಾದ ಪಂಚ ಗ್ಯಾರಂಟಿಗಳು ಜನರನ್ನು ಆಕರ್ಷಿಸಲಿಲ್ಲ ಎಂಬುದನ್ನು ಗಮನಿಸಬೇಕು.

.......ಮುಂದುವರೆಯುವುದು

ಭಾರತದಲ್ಲಿ 5.8 ಕೋಟಿ ಪಡಿತರ ಚೀಟಿಗಳ ರದ್ದು.... ಪುಟ 5 ರಿಂದ

ಸುಲಭಗೊಳಿಸಲು ಮತ್ತು ಆರ್ಥಿಕ ಸೇರ್ಪಡೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ ಎಂದು ಆ ಪ್ರಕಟಣೆ ತಿಳಿಸಿದೆ.

ಇದರ ಭಾಗವಾಗಿ ಪಾಂಡಿಚೇರಿ, ಲಕ್ಷ ದ್ವೀಪ ಸೇರಿದಂತೆ ಕೇಂದ್ರಾಡಳಿತ ಪ್ರದೇಶಗಳಲ್ಲಿ ಧಾನ್ಯಗಳ ಬದಲು ನೇರ ನಗದು ಯೋಜನೆ ಪ್ರಾರಂಭವಾಗಿದೆ. 2016ರಲ್ಲಿ ಅಕ್ಕಿಗೆ ಬದಲಾಗಿ ಹಣವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗುವುದು ಎಂದು ಪುದುಚೇರಿ ಸರ್ಕಾರ ಘೋಷಿಸಿತು. ಅಂದಿನ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ಅವರು ಪಡಿತರದಲ್ಲಿ ನೀಡುತ್ತಿರುವ ಅಕ್ಕಿಯ ಗುಣಮಟ್ಟ ಉತ್ತಮವಾಗಿಲ್ಲ ಎಂದು ಹೇಳಿ, ಗುಣಮಟ್ಟದ ಅಕ್ಕಿ ನೀಡುವ ಬದಲು ಪಡಿತರ ಅಂಗಡಿಗಳನ್ನು ಮುಚ್ಚುವಂತೆ ಆದೇಶಿಸಿದ್ದರು. ಈ ರಾಜ್ಯಗಳಲ್ಲಿ ಬಹುತೇಕ ಪಡಿತರ ಅಂಗಡಿಗಳು ಬಾಗಿಲು ಮುಚ್ಚಿವೆ. ನಮಗೆ ನಗದು ಬೇಡ, ಪಡಿತರ ಅಂಗಡಿಗಳ ಬಾಗಿಲು ತೆರೆದು ಧಾನ್ಯಗಳ ವಿತರಣೆ ಮಾಡಿ ಎಂದು ಪಾಂಡಿಚೇರಿಯ ಜನರು ಹೋರಾಟ ನಡೆಸುತ್ತಿದ್ದಾರೆ.

ಇಕೆವೈಸಿ ವ್ಯವಸ್ಥೆಯಿಂದ ಕಡು ಬಡವರು ವಂಚಿತರಾಗುತ್ತಾರೆ

ಕೇಂದ್ರ ಸರ್ಕಾರ ಪಡಿತರ ಕಾರ್ಡ್‌ಗಳ ರದ್ದತಿಗೆ ವಿಶೇಷ ಒತ್ತು ನೀಡುತ್ತಿದೆ. ಡಿಜಿಟಲೀಕರಣ, ಆಧಾರ್ ನೊಂದಿಗೆ ಸೀಡ್, ಇಕೆವೈಸಿ ಇವುಗಳ ಮೂಲಕ, ನಕಲಿ ಪಡಿತರ ಕಾರ್ಡ್‌ಗಳು ಅಥವಾ ಅನರ್ಹ ಕುಟುಂಬಗಳು ಎಂಬ ಹೆಸರಿನಲ್ಲಿ ಪಡಿತರ ಕಾರ್ಡ್‌ಗಳನ್ನು ರದ್ದುಗೊಳಿಸತೊಡಗಿದ್ದಾರೆ. ಇದು ಕಡು ಬಡವರು, ಅದರಲ್ಲೂ ಇಂಟರ್‌ನೆಟ್ ಸೌಲಭ್ಯವಿಲ್ಲದ ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶದ ಬಡ ಕುಟುಂಬಗಳು ಪಡಿತರ ಪಡೆಯುವುದರಿಂದ ವಂಚಿತರಾಗಿದ್ದಾರೆ. ಈಗ ಕರ್ನಾಟಕದಲ್ಲಿ ಬಿಪಿಎಲ್ ಚೀಟಿ ಕಳೆದುಕೊಳ್ಳುತ್ತಿರುವ ಕಡು ಬಡವರಲ್ಲಿ ಇಂತಹ ಕುಟುಂಬಗಳೂ ಇವೆ.

ಉತ್ತರ ಪ್ರದೇಶದಲ್ಲಿ

ಉತ್ತರ ಪ್ರದೇಶದಲ್ಲಿ 2014ರಿಂದ 2021ರವರೆಗೆ 1.74 ಕೋಟಿ ಪಡಿತರ ಚಿಟಿಗಳನ್ನು ರದ್ದುಗೊಳಿಸಲಾಗಿದೆ. ಫಲಾನುಭವಿಗಳಲ್ಲಿ ಯಾರಾದರೂ ಆದಾಯ ತೆರಿಗೆ ಪಾವತಿಸುವವರಾಗಿದ್ದರೆ ಅಥವಾ ನಾಲ್ಕು ಚಕ್ರದ ವಾಹನ/ಟ್ರಾಕ್ಟರ್/ಹಾರ್ವೆಸ್ಟರ್ ಹೊಂದಿದ್ದರೆ ಅಥವಾ ಯಾವುದೇ ಕುಟುಂಬದ ಸದಸ್ಯರ ಸ್ವಾಧೀನದಲ್ಲಿ ಐದು ಎಕರೆಗಿಂತ ಹೆಚ್ಚು ನೀರಾವರಿ ಜಮೀನು ಹೊಂದಿದ್ದರೆ ಅಥವಾ 5 ಕೆವಿ ಜನರೇಟರ್ ಹೊಂದಿದ್ದರೆ. ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಸಶಸ್ತ್ರ ಲೈಸೆನ್ಸ್ ಹೊಂದಿರುವವರು ಕೂಡ ಪಡಿತರ ಚೀಟಿ ಹೊಂದಲು ಅನರ್ಹರಾಗಿದ್ದಾರೆ.

"ಅನರ್ಹ ಪಡಿತರ ಚೀಟಿ ಹೊಂದಿರುವವರು ಈ ಕಾರ್ಡ್‌ಗಳನ್ನು ಒಪ್ಪಿಸುವಂತೆ ರಾಜ್ಯ ಸರ್ಕಾರವು ಎಚ್ಚರಿಕೆ ನೀಡಿದ್ದು, ಪಡಿತರ ಅಂಗಡಿಗಳಿಂದ ಪಡೆದ ಮೊತ್ತಕ್ಕೆ ಕೆಜಿ ಗೋಧಿಗೆ ರೂ 24 ಮತ್ತು ಕೆಜಿ ಅಕ್ಕಿಗೆ 32 ರೂ.ನಂತೆ ಮರುಪಡೆಯುವಿಕೆ ಪ್ರಾರಂಭಿಸಲಾಗುವುದು" ಎಂದು ಉತ್ತರ ಪ್ರದೇಶದ ಅಧಿಕಾರಿ ಹೇಳಿದ್ದಾರೆ ಎಂದು ಬಿಸಿನೆಸ್ ಲೈನ್, ಆಗಸ್ಟ್ 29, 2024ರ ವರದಿಯಲ್ಲಿ ಹೇಳಿದೆ.

ತೆರಿಗೆ ಪಾವತಿದಾರರು!!

'ತೆರಿಗೆ ಪಾವತಿದಾರರು' ಎಂಬ ಕಾರಣಕ್ಕೆ ರಾಜ್ಯದಲ್ಲಿ ಹಲವು ಬಿಪಿಎಲ್ ಕಾರ್ಡುಗಳನ್ನು ರದ್ದುಗೊಳಿಸಲಾಗಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಬಿಪಿಎಲ್ ಕಾರ್ಡ್ ಕಳೆದುಕೊಂಡ ಅರ್ಹ ಬಡ ಕುಟುಂಬಗಳೂ ಈ ರೀತಿ ಅಳಲು ತೋಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ: ಬಳ್ಳಾರಿ ನಗರದ ಟೀಚರ್ಸ್ ಕಾಲೋನಿಯಲ್ಲಿ ವಾಸವಿರುವ ವರಲಕ್ಷ್ಮಿ ಎಂಬುವವರ ಬಿಪಿಎಲ್ ಕಾರ್ಡ್ ಅನ್ನು 'ತೆರಿಗೆ ಪಾವತಿದಾರರು' ಎಂಬ ಕಾರಣ ನೀಡಿ ರದ್ದುಗೊಳಿಸಿಸಲಾಗಿದೆ ಎನ್ನುತ್ತಿದ್ದಾರೆ. ಆಕೆಗೆ ಬ್ರೈನ್ ಟ್ಯೂಮರ್, ಆಕೆಯ ಪತಿ ವೆಂಕಟೇಶ ಚಾಲಕ ವೃತ್ತಿ ಮಾಡಿಕೊಂಡಿದ್ದಾರೆ. ಬಹಳಷ್ಟು ಬಡ ಕುಟುಂಬಗಳು ಇದೇ ರೀತಿ ಅಳಲು ತೋಡಿಕೊಂಡಿದ್ದಾರೆ. ಬಡ ಕುಟುಂಬಗಳನ್ನೂ ತೆರಿಗೆ ಪಾವತಿದಾರರು ಎನ್ನುತ್ತಿದ್ದಾರೆ ಎಂಬ ಆರೋಪದಲ್ಲಿ ಸತ್ಯವಿದೆಯೋ ಇಲ್ಲವೋ ಗೊತ್ತಿಲ್ಲ. ಹಣಕಾಸಿನ ಎಲ್ಲ ವ್ಯವಹಾರವೂ ಬಹುತೇಕ ನಗದು ರಹಿತ ವ್ಯವಹಾರ ಆಗಿರುವಾಗ, ಮೊಬೈಲ್ ಹಣ ವರ್ಗಾವಣೆಗಳನ್ನೂ 'ಆ ಕುಟುಂಬದ ಆದಾಯ' ಎಂದು ಲೆಕ್ಕ ಹಾಕಿ ಆದಾಯ ಇಲಾಖೆಯು ತೆರಿಗೆ ಪಾವತಿದಾರರು ಎನ್ನುತ್ತದೆಯೆ? ಇದರ ಬಗ್ಗೆ ತೆರಿಗೆ ಇಲಾಖೆಯು ಜನರಿಗೆ ಸ್ಪಷ್ಟನೆ ನೀಡಬೇಕಾಗಿದೆ. ತೆರಿಗೆ ಪಾವತಿ ಕಾರಣದಿಂದ ಬಿಪಿಎಲ್ ಕಾರ್ಡ್ ರದ್ದಾಗಿದೆಯೋ ಅಥವಾ ಬೇರೆ ಕಾರಣದಿಂದಲೋ ಎಂಬುದನ್ನು ಸಂಬಂಧಪಟ್ಟ ಆಹಾರ ಸರಬರಾಜು ಇಲಾಖೆ ಸ್ಪಸ್ಟಪಡಿಸಬೇಕಿದೆ.

ಬಿಪಿಎಲ್ ಮಾನದಂಡ ಬದಲಾಗಬೇಕು

ಕೇಂದ್ರ ಸರಕಾರ ನಿಗದಿಪಡಿಸಿರುವ ಮಾನದಂಡದಂತೆ ಬಿಪಿಎಲ್ ಕಾರ್ಡ್ ಕೊಡುತ್ತೇವೆ ಎನ್ನುತ್ತದೆ ರಾಜ್ಯ ಸರಕಾರ. ಬಡತನ ರೇಖೆ ನಿಗಧಿಗೆ ಇರುವ ಮಾನದಂಡವೇನು? ಅಂದು ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 26 ರೂ.ಗಿಂತ ಹೆಚ್ಚು ಆದಾಯ ಇರುವ ವ್ಯಕ್ತಿ ಬಡವನಲ್ಲ ಎಂಬ ತೆಂಡೂಲ್ಕರ್ ಸಮಿತಿ 2009ರಲ್ಲಿ ನಿಗದಿಪಡಿಸಿದ ಮಾನದಂಡವೇ? ಬಿಪಿಎಲ್ ಕಾರ್ಡ್ ಪಡೆಯಲು ಇಂದು ರಾಜ್ಯ ಸರ್ಕಾರ ನಿಗದಿಪಡಿಸಿರುವ ಮಾನದಂಡವೆಂದರೆ, ಗ್ರಾಮೀಣ ಪ್ರದೇಶದ ಕುಟುಂಬದ ವಾರ್ಷಿಕ ಆದಾಯ 1,20,000 ರೂಪಾಯಿ. ಅಂದರೆ, ಒಬ್ಬ ವ್ಯಕ್ತಿ ದಿನಕ್ಕೆ ರೂ.66, ತಿಂಗಳಿಗೆ ರೂ.2000 ಕ್ಕಿಂತ ಕಡಿಮೆ ಆದಾಯ ಇರಬೇಕು. ಐವರು ಸದಸ್ಯರ ಕುಟುಂಬದ ತಿಂಗಳ ಆದಾಯ 10,000 ರೂಪಾಯಿ. ನಗರ ಪ್ರದೇಶದಲ್ಲಿ 1,50,000 ರೂಪಾಯಿಗಿಂತ ಹೆಚ್ಚಿನ ವಾರ್ಷಿಕ ಆದಾಯ ಇರುವ ಕುಟುಂಬದವರು ಬಡವರಲ್ಲ! ಹೀಗಾಗಿ ಇಂತಹ ಕುಟುಂಬಗಳು ಬಿಪಿಎಲ್ ಕಾರ್ಡ್ ಪಡೆಯಲು ಅರ್ಹರಲ್ಲ!! ಇಷ್ಟು ಕನಿಷ್ಟ ಆದಾಯದಲ್ಲಿ ಕುಟುಂಬವೊಂದು ಬದುಕು ಸಾಗಿಸಲು ಸಾಧ್ಯವೇ? (ಈ ಕುರಿತು 2024ರ ಸಂಚಿಕೆ 41ರಲ್ಲಿ ಪ್ರಕಟವಾಗಿರುವ ಲೇಖನವನ್ನು ನೋಡಿ)

ಇಂದು ಬಿಪಿಎಲ್ ಕಾರ್ಡ್ ಕಳೆದುಕೊಂಡವರಿಗಾಗಿ ಮೊಸಳೆ ಕಣ್ಣೀರು ಸುರಿಸುತ್ತಿರುವ ರಾಜ್ಯ ಬಿಜೆಪಿ ನಾಯಕರು ಮತ್ತು ಅರ್ಹ ಕುಟುಂಬಗಳು ಪಡಿತರದಿಂದ ವಂಚಿತರಾಗದಂತೆ ನೋಡಿಕೊಳ್ಳುವುದಾಗಿ ಹೇಳುತ್ತಿರುವ ಕಾಂಗ್ರೆಸ್ ನಾಯಕರು, ಬಡತನ ರೇಖೆಯನ್ನು ಅಳೆಯುವ ಈಗಿನ ಮಾನದಂದ ಬದಲಾಗಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬಹುದಲ್ಲವೆ? ಇವರು ಹಾಗೆ ಮಾಡಲಾರರು. ಹೀಗೆ ಮಾಡುವಂತೆ ಜನರು ಇವರ ಮೇಲೆ ಒತ್ತಡ ತರಬೇಕು. ಮಾತ್ರವಲ್ಲ, ದೇಶದ ಆಹಾರ ಭದ್ರತೆಯ ಮೇಲೆ ಕೆಟ್ಟ ಪರಿಣಾಮ ಬೀರುವ ವಿಶ್ವ ವಾಣಿಜ್ಯ ಸಂಸ್ಥೆಯ ಷರತ್ತುಗಳಿಂದ ಹಿಂದೆ ಸರಿಯುವಂತೆ ಜನತೆ ಹೋರಾಟ ನಡೆಸಬೇಕಿದೆ. ಭಾರತ ಸರ್ಕಾರ ಒಪ್ಪಿ ಅನುಸರಿಸುತ್ತಿರುವ ಮುಕ್ತ ಆರ್ಥಿಕ ನೀತಿಗಳ ವಿರುದ್ದ ಒಗ್ಗಟ್ಟಿನ ಹೋರಾಟ ನಡೆಸಬೇಕಿದೆ. ಆಗ ಮಾತ್ರ ಇದಕ್ಕೆಲ್ಲಾ ಪರಿಹಾರ ಸಾಧ್ಯ.

ತಿಂಗಳಿಗೆ ಒಂದು ದಿನದ ಮುಟ್ಟಿನ ರಜೆ... ಪುಟ 4 ರಿಂದ

ಎಂದು ವ್ಯಾಖ್ಯಾನಿಸಲಾಗಿದೆ. ಅನಾರೋಗ್ಯದ ಕಾರಣದಿಂದ ಕೆಲಸದಿಂದ ಗೈರುಹಾಜರಾಗುವುದು ಅಥವಾ ಅನಾರೋಗ್ಯದ ಹೊರತಾಗಿಯೂ ಕೆಲಸಕ್ಕೆ ಹಾಜರಾಗುವುದು ಕೆಲಸಗಾರರ ಆಯ್ಕೆ ಐಚ್ಛಿಕವಾಗಿದೆ. ಎರಡೂ ವಿದಾನದಲ್ಲಿ, ಸಂಸ್ಥೆಯ ಉತ್ಪಾದಕತೆಗೆ ಪರಿಮಾಣಾತ್ಮಕ ನಷ್ಟವಿದೆ. ಗೈರುಹಾಜರಾಗುವ ಅಥವಾ ಪ್ರಸ್ತುತಪಡಿಸುವ ನಿರ್ಧಾರವು ಕಾರ್ಮಿಕರೊಂದಿಗೆ ಅನಾರೋಗ್ಯ ರಜೆ ಲಭ್ಯತೆ, ಸ್ವತಃ ಗೈರುಹಾಜರಾಗಲು ದಂಡ ಮತ್ತು ಅಂತಹ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ವಿನಂತಿಯ ಆಧಾರದ ಮೇಲೆ ಮುಟ್ಟಿನ ರಜೆಯನ್ನು ಒದಗಿಸುವ ಪರವಾದ ವಾದವು ನಿರ್ದಿಷ್ಟ ಪ್ರೆಸೆಂಟೀಸಮ್(ಹಾಜರಾತಿ) ಖಚಿತಪಡಿಸುತ್ತದೆ.

ಮಹಿಳೆಯರಿಗೆ ಮುಟ್ಟಿನ ರಜೆಯ ಅನುಷ್ಠಾನದ ವಿರುದ್ಧದ ಪ್ರಮುಖ ವಾದವೆಂದರೆ, ಮುಟ್ಟಿನ ರಜೆಗಳ ಮೇಲೆ ವಿಧಿಸಲಾದ ಹೆಚ್ಚುವರಿ ವೆಚ್ಚದಿಂದಾಗಿ ಉದ್ಯೋಗದಾತರು ಹೆಚ್ಚಿನ ಮಹಿಳೆಯರನ್ನು ನೇಮಿಸಿಕೊಳ್ಳುವುದನ್ನು ವಿರೋಧಿಸುತ್ತಾರೆ ಎಂಬುದು. ಇದು ಮಾನ್ಯವಾದ ದೃಷ್ಟಿಕೋನವಾಗಿದ್ದರೂ, ಪ್ರಪಂಚದಾದ್ಯಂತ ಮಾತೃತ್ವ ರಜೆಯ ವಿರುದ್ಧ ಅದೇ ವಾದಗಳನ್ನು ಪ್ರತಿಪಾದಿಸಲಾಗಿತ್ತು ಎಂದು ನಾವು ಅರ್ಥಮಾಡಿಕೊಳ್ಳಬೇಕು. ಮಹಿಳಾ ಮೀಸಲಾತಿಯ ವಿರುದ್ಧದ ಚರ್ಚೆಗಳು ಮತ್ತು ವಾದಗಳು ನಮ್ಮ ಸಮಾಜದಲ್ಲಿಯೂ ಇದೆ. ಮುಖ್ಯ ಅಂಶವೆಂದರೆ ನಾವು ವೈಯಕ್ತಿಕ ಸಂಸ್ಥೆಗಳು ತೆಗೆದುಕೊಳ್ಳಬಹುದಾದ ಸೂಕ್ಷ್ಮ-ಆರ್ಥಿಕ ನಿರ್ಧಾರಗಳಿಗಿಂತ ಹೆಚ್ಚಾಗಿ ಕಾರ್ಮಿಕ ಬಲದಲ್ಲಿ ಹೆಚ್ಚಿನ ಮಹಿಳಾ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಮೂಲಕ ಸ್ಥೂಲ-ಆರ್ಥಿಕ ಪ್ರಯೋಜನಗಳ ಮೇಲೆ ಹೆಚ್ಚು ಗಮನಹರಿಸಬೇಕಾಗಿದೆ. ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ಕಾರ್ಮಿಕ ಬಲದಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಸ್ಥೂಲ-ಆರ್ಥಿಕ ಪ್ರಯೋಜನಗಳು ಮಹಿಳೆಯರ ನೇಮಕಾತಿಯನ್ನು ನಿರುತ್ಸಾಹಗೊಳಿಸುವ ಸಂಸ್ಥೆಗಳ ಸೂಕ್ಷ್ಮ ಆರ್ಥಿಕ ಸಾಧ್ಯತೆಗಳನ್ನು ಮೀರಿಸುತ್ತದೆ. ಇದಲ್ಲದೆ ನಾವು ಮಹಿಳಾ ಕಾರ್ಮಿಕರ ಪರವಾಗಿ ಅಮೆರಿಕಾ ಮಾದರಿಯ "ಗರ್ಭಧಾರಣೆ ತಾರತಮ್ಯ ಕಾಯಿದೆ" ಯಂತಹ ಕಾನೂನುಗಳ ಪ್ರಕಾರ ತಾರತಮ್ಯದ ನೇಮಕಾತಿ ತಡೆಗಟ್ಟುವ ಸಂರಕ್ಷಣೆ ಖಚಿತಪಡಿಸಿಕೊಳ್ಳಲು ಸರ್ಕಾರಕ್ಕೆ ಬೇಡಿಕೆಯನ್ನು ಇಡಬೇಕಾಗಿದೆ.

ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಅನುಭವಗಳು

ಮುಟ್ಟಿನ ರಜೆಯ ಪರಿಕಲ್ಪನೆಯು ಮೊದಲು 1920ರ ದಶಕದಲ್ಲಿ ಕ್ರಾಂತಿಕಾರಿ ಸೋವಿಯತ್ ರಷ್ಯಾದಲ್ಲಿ ಪರಿಚಯಿಸಲಾಯಿತು. ಮೊದಲನೇ ವಿಶ್ವಯುದ್ಧದ ಸಮಯದಲ್ಲಿ ಮತ್ತು ನಂತರ ಫಿನ್ಲ್ಯಾಂಡ್‌ನಲ್ಲಿ ಪ್ರತಿ-ಕ್ರಾಂತಿಕಾರಿಗಳ ವಿರುದ್ಧ ಕೆಂಪು ಸೈನ್ಯದ ಸಜ್ಜುಗೊಳಿಸುವಿಕೆಯಲ್ಲಿ ಸೈನ್ಯದಲ್ಲಿ ಹೆಚ್ಚಿನ ಸಂಖ್ಯೆಯ ಪುರುಷರು ಇದ್ದ ಕಾರಣ, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ (ಆರ್ಥಿಕ ಅಗತ್ಯವಾಗಿ) ಉದ್ಯೋಗಕ್ಕಾಗಿ ಮುಖ ಮಾಡಿದ ಹಿನ್ನೆಲೆಯಲ್ಲಿ ಇದು ಸಂಭವಿಸಿತು. ಈ ಸೌಲಭ್ಯವನ್ನು ನಂತರ 1927ರಲ್ಲಿ ಹಿಂತೆಗೆದುಕೊಳ್ಳಲಾಯಿತು. ಜಪಾನಿನಲ್ಲಿ 1947ರಲ್ಲಿ ಮುಟ್ಟಿನ ರಜೆಯನ್ನು ಪರಿಚಯಿಸಲಾಯಿತು (ಎರಡನೇ ಮಹಾಯುದ್ಧದ ಹಿನ್ನೆಲೆಯಲ್ಲಿ) ಮತ್ತು ಅದು ಇಂದಿಗೂ ಜಾರಿಯಲ್ಲಿದೆ. ಇಂಡೋನೇಷಿಯ ಕೋರಿಕೆಯ ಮೇರೆಗೆ ತಿಂಗಳಿಗೆ 2 ದಿನಗಳ ವೇತನ ಸಹಿತ ಮುಟ್ಟಿನ ರಜೆ ಅಥವಾ 1948ರಿಂದ ಋತುಚಕ್ರದ ಎರಡು ದಿನಗಳಲ್ಲಿ ಕೆಲಸಕ್ಕೆ ಹೆಚ್ಚುವರಿ ವೇತನ, 2003ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ಉದ್ಯೋಗದಾತ ಮತ್ತು ಉದ್ಯೋಗಿಗಳ ನಡುವಿನ ಮಾತುಕತೆಗೆ ಒಳಪಟ್ಟಿರುತ್ತದೆ. ತೈವಾನ್ 2003ರಿಂದ ಕೋರಿಕೆಯ ಮೇರೆಗೆ ತಿಂಗಳಿಗೆ 3 ದಿನಗಳ ವೇತನ ಸಹಿತ ಮುಟ್ಟಿನ ರಜೆ, ದಕ್ಷಿಣ ಕೊರಿಯಾ 1953ರಿಂದ ವಿನಂತಿಯ ಮೇರೆಗೆ ತಿಂಗಳಿಗೆ ಒಂದು ವೇತನ ಸಹಿತ ಮುಟ್ಟಿನ ರಜೆ, ಜಾಂಬಿಯಾ ತಿಂಗಳಿಗೆ ಒಂದು ವೇತನ ಸಹಿತ ಮುಟ್ಟಿನ ರಜೆ, ಸ್ಪೇನ್ ವೈದ್ಯರ ಟಿಪ್ಪಣಿ ಮೇಲೆ ತಿಂಗಳಿಗೆ 3 ರಿಂದ 5 ದಿನ ಮುಟ್ಟಿನ ರಜೆ ಸೌಲಭ್ಯ ಇದೆ.

ಬಿಹಾರ 1992ರಲ್ಲಿ ಗುತ್ತಿಗೆ ಕಾರ್ಮಿಕರು ಸೇರಿದಂತೆ ಎಲ್ಲಾ ಮಹಿಳಾ ಸರ್ಕಾರಿ ನೌಕರರಿಗೆ ತಿಂಗಳಿಗೆ 2 ದಿನಗಳ ಜೈವಿಕ ರಜೆಯನ್ನು ಪರಿಚಯಿಸಿತು. ಕೇರಳ 2023ರಿಂದ ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡುತ್ತಿದೆ.

ವಿವಿಧ ದೇಶಗಳು ಮತ್ತು ಭಾರತದ ರಾಜ್ಯಗಳಲ್ಲಿ ಮುಟ್ಟಿನ ರಜೆಯ ಪರಿಕಲ್ಪನೆಯು ಜಾರಿಯಲ್ಲಿದೆ ಎಂಬುದನ್ನು ಇದು ವಿವರಿಸುತ್ತದೆ. ಹಲವಾರು ಪ್ರಾಯೋಗಿಕ ಅಧ್ಯಯನಗಳು ಜಪಾನ್, ಇಂಡೋನೇಷಿಯಾ, ತೈವಾನ್ ಮತ್ತು ದಕ್ಷಿಣ ಕೊರಿಯಾದಂತಹ ದೇಶಗಳಲ್ಲಿ ವಿನಂತಿಯ ಆಧಾರದ ಮೇಲೆ ಮುಟ್ಟಿನ ರಜೆಯನ್ನು ಹೊಂದಿರುವ ದೇಶಗಳಲ್ಲಿ, ಮಹಿಳಾ ಕೆಲಸಗಾರರು ತಮ್ಮ ಎಲ್ಲಾ ಅರ್ಹ ಮುಟ್ಟಿನ ರಜೆಯನ್ನು ಬಳಸುವುದಿಲ್ಲ ಎಂಬ ಅಂಶವನ್ನು ನಾವು ಗಮನಿಸಬೇಕು. ಮಹಿಳಾ ಕಾರ್ಮಿಕರು ಋತುಚಕ್ರದ ರಜೆಗಾಗಿ ರಜೆ ಅರ್ಜಿಗಳಿಗಾಗಿ ಪುರುಷ ಮೇಲ್ವಿಚಾರಕರನ್ನು ಸಂಪರ್ಕಿಸಲು ಆಗಾಗ್ಗೆ ಹಿಂಜರಿಯುತ್ತಾರೆ ಎಂಬ ಆಧಾರದ ಮೇಲೆ ಇದನ್ನು ವಿವರಿಸಲಾಗಿದೆ.

ಅನುಷ್ಠಾನದ ಸವಾಲುಗಳು ಮತ್ತು ಸಲಹೆಗಳು

ಸಮಿತಿಯ ಉಲ್ಲೇಖದ ನಿಯಮಗಳು ಕಾರ್ಖಾನೆಗಳು, ಕಚೇರಿಗಳು, ಬಹು-ರಾಷ್ಟ್ರೀಯ ಕಂಪನಿಗಳು ಇತ್ಯಾದಿಗಳಲ್ಲಿ ಮುಟ್ಟಿನ ರಜೆಯ ಅನುಷ್ಠಾನದ ಚರ್ಚೆಯನ್ನು ಒಳಗೊಂಡಿವೆ. ಅಂತಹ ಸೌಲಭ್ಯದ ಅನುಷ್ಠಾನಕ್ಕೆ ಕಾನೂನು ಚೌಕಟ್ಟನ್ನು ನಾವು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ, ರಜೆ ಸೌಲಭ್ಯದ ಕಾನೂನು ಅರ್ಹತೆಯು ಕಾರ್ಖಾನೆ ಅಥವಾ ಕಚೇರಿಯಂತಹ ಕೆಲಸದ ಸ್ಥಳಗಳ ನಡುವೆ ಬದಲಾಗುತ್ತದೆ. ಕಾರ್ಖಾನೆಗಳ ಆಧಿನಿಯಮ ಮತ್ತು ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಆಧಿನಿಯಮದ ಅಡಿಯಲ್ಲಿ ರಜೆಗಾಗಿ ವಿಭಿನ್ನ ಸವಲತ್ತು/ಹಕ್ಕುಗಳಿವೆ. ಅನುಷ್ಠಾನದ ವಿಧಾನವನ್ನು ನಿರ್ಧರಿಸುವಾಗ ಅಂತಹ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಅನುಷ್ಠಾನಕ್ಕೆ ಎರಡು ವಿಭಿನ್ನ ಸಾಧ್ಯತೆಗಳಿವೆ. ಒಂದು ಕಾರ್ಖಾನೆಗಳ ಆಧಿನಿಯಮ ಮತ್ತು ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಆಧಿನಿಯಮ ನಿಬಂಧನೆಗಳಿಗೆ ತಿದ್ದುಪಡಿಗಳನ್ನು ತರುವುದು. ಕಾರ್ಖಾನೆಗಳು, ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ (ರಾಷ್ಟ್ರೀಯ ಮತ್ತು ಉತ್ಸವ ರಜಾದಿನಗಳ ಕಾಯಿದೆಯ ಪ್ರಕಾರ) ಕಾರ್ಮಿಕರಿಗೆ ಅನ್ವಯಿಸಲು ಮುಟ್ಟಿನ ರಜೆಯನ್ನು ಒದಗಿಸಲು ಹೊಸ ಶಾಸನವನ್ನು ರಚಿಸುವುದು ಇನ್ನೊಂದು ಆಯ್ಕೆಯಾಗಿದೆ. ಹೊಸ ಶಾಸನದ ಎರಡನೇ ಸಾಧ್ಯತೆಯನ್ನು ತೆಗೆದುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ.

ಬಂಡವಾಳಗಾರರಿಗೆ ಹಣಕಾಸು ವರ್ಗಾವಣೆ: ನಿಜವಾಗಿ ಯಾರ ಪ್ರಯೋಜನಕ್ಕಾಗಿ?



ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಹೆಸರಿನಲ್ಲಿ ಬಂಡವಾಳಗಾರರಿಗೆ ಹಣಕಾಸು ವರ್ಗಾವಣೆಯನ್ನು ಸರ್ಕಾರಗಳು ಒದಗಿಸುತ್ತಿರುವ ಕ್ರಮಗಳು ವಾಸ್ತವವಾಗಿ ಅರ್ಥವ್ಯವಸ್ಥೆಯನ್ನು ಮತ್ತಷ್ಟು ಕುಗ್ಗಿಸುತ್ತವೆ. ಏಕೆಂದರೆ ಒಟ್ಟಾರೆಯಾಗಿ ಈ ವರ್ಗಾವಣೆಗಳು ಕಾರ್ಮಿಕರ ವರಮಾನವನ್ನು ಕಸಿದುಕೊಳ್ಳುತ್ತವೆ, ಒಟ್ಟಾರೆ ಬೇಡಿಕೆಯನ್ನು ಇಳಿಸುತ್ತವೆ. ಇದರಿಂದಾಗಿ ಒಟ್ಟಾರೆಯಾಗಿ ಬಂಡವಳಿಗರ ಲಾಭಗಳೂ ಹೆಚ್ಚುವುದಿಲ್ಲ. ಆದರೂ ಇಂತಹ ವರ್ಗಾವಣೆಗಳನ್ನು ಏಕೆ ಮಾಡಲಾಗುತ್ತದೆ? ನಿಜವಾದ ಕಾರಣವೆಂದರೆ, ಬಂಡವಾಳಗಾರರ ನಡುವೆ ಲಾಭಗಳ ಹಂಚಿಕೆಯನ್ನು ಏಕಸ್ವಾಮ್ಯ ಸ್ತರದ ಬಂಡವಾಳಗಾರರ ಪರವಾಗಿ ಬದಲಾಯಿಸುವುದು. ಒಟ್ಟಾರೆ ಲಾಭಗಳು ಹೆಚ್ಚದಿದ್ದರೂ, ವರ್ಗಾವಣೆಗಳ ಸಿಂಹಪಾಲನ್ನು ಪಡೆದುಕೊಳ್ಳುವ ದೊಡ್ಡ ಬಂಡವಾಳಗಾರರು ನಿವ್ವಳ ಲಾಭಗಾರರಾಗುತ್ತಾರೆ. ಬೇಡಿಕೆಯ ಇಳಿಕೆಯ ಪರಿಣಾಮವನ್ನು ನೇರವಾಗಿ ಎದುರಿಸಬೇಕಾದ ಸಣ್ಣ ಬಂಡವಾಳಗಾರರು ನಿವ್ವಳ ನಷ್ಟಗಾರರಾಗುತ್ತಾರೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಬಂಡವಾಳಗಾರರಿಂದ ಹೆಚ್ಚಿನ ಹೂಡಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಮತ್ತು ಆ ಮೂಲಕ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ, ಕಾರ್ಪೊರೇಟ್ ತೆರಿಗೆ ದರ ಇಳಿಕೆಯ ಮೂಲಕವಾಗಲಿ ಅಥವಾ ನೇರವಾಗಿ ನಗದು ಸಬ್ಸಿಡಿಗಳನ್ನು ಒದಗಿಸುವ ಮೂಲಕವಾಗಲಿ, ಬಂಡವಾಳಗಾರರಿಗೆ ಹಣಕಾಸು ವರ್ಗಾವಣೆಯನ್ನು ಸರ್ಕಾರಗಳು ಒದಗಿಸುತ್ತಿರುವ ಕ್ರಮವು ಇಂದಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಡೊನಾಲ್ಡ್ ಟ್ರಂಪ್‌ರವರ ಮೊದಲ ಅಧ್ಯಕ್ಷಗಿರಿಯ ಅವಧಿಯಲ್ಲಿ ಕಾರ್ಪೊರೇಟ್ ತೆರಿಗೆ ದರವನ್ನು ಕಡಿತ ಮಾಡಲಾಗಿತ್ತು. ಅದೇ ಉದ್ದೇಶದಿಂದ, ಭಾರತದಲ್ಲಿ ಮೋದಿ ಸರ್ಕಾರವೂ ಬಂಡವಾಳಗಾರರಿಗೆ ತೆರಿಗೆ ರಿಯಾಯಿತಿಗಳನ್ನು ಬೃಹತ್ ಪ್ರಮಾಣದಲ್ಲಿ ನೀಡಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಬಂಡವಾಳಗಾರರಿಗೆ ಒದಗಿಸುವ ಅಂತಹ ವರ್ಗಾವಣೆಗಳು ಒಂದು ನವ ಉದಾರವಾದಿ ಆಳ್ವಿಕೆಯಲ್ಲಿ ನಿರೀಕ್ಷಿತ ಫಲ ನೀಡುವುದಿಲ್ಲ ಎಂಬುದನ್ನು ಅರ್ಥಶಾಸ್ತ್ರದ ಒಂದು ಕನಿಷ್ಠ ಜ್ಞಾನವೂ ಸಹ ತೋರಿಸುತ್ತದೆ.

ನಿರೀಕ್ಷಿತ ಫಲ ಸಿಗುವುದಿಲ್ಲ ಏಕೆಂದರೆ, ನವ ಉದಾರವಾದಿ ಆಳ್ವಿಕೆಯು "ವಿತ್ತೀಯ ಜವಾಬ್ದಾರಿ" ಶಾಸನದಿಂದ ನಿರೂಪಿಸಲ್ಪಟ್ಟಿದೆ. ಈ ಶಾಸನವು, ಒಂದು ಸರ್ಕಾರವು ಹೊಂದಬಹುದಾದ ವಿತ್ತೀಯ ಕೊರತೆಯ ಮೇಲಿನ ಗರಿಷ್ಟ ಮಿತಿಯನ್ನು ಒಟ್ಟು ದೇಶೀಯ ಉತ್ಪನ್ನದ ಇಂತಿಷ್ಟು ಶೇಕಡಾವಾರು ಎಂದು ನಿಗದಿಪಡಿಸುತ್ತದೆ ಮತ್ತು ಸಾಮಾನ್ಯವಾಗಿ ಸರ್ಕಾರಗಳು ಈ ಮಿತಿಯನ್ನು ಮೀರದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ ಬಂಡವಾಳಗಾರರಿಗೆ ಒದಗಿಸುವ ವರ್ಗಾವಣೆಗೆ ಬೇಕಾಗುವ ಹಣವನ್ನು ಹೊಂದಿಸಿಕೊಳ್ಳಲು ಸಾಮಾನ್ಯವಾಗಿ ದುಡಿಯುವ ಬಡ ಜನರಿಗಾಗಿ ಕೈಗೊಳ್ಳುವ ಕಲ್ಯಾಣ ವೆಚ್ಚಗಳನ್ನು ಕಡಿತಗೊಳಿಸಲಾಗುತ್ತದೆ ಅಥವಾ ಈ ಹಣವನ್ನು ದುಡಿಯುವ ಬಡ ಜನರ ಮೇಲೆ ಹೇರುವ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಒದಗಿಸಿಕೊಳ್ಳಲಾಗುತ್ತದೆ. ಈ ರೀತಿಯ ವರ್ಗಾವಣೆಯ ಪರಿಣಾಮವನ್ನು ಒಂದು ಉದಾಹರಣೆಯ ಮೂಲಕ ನೋಡೋಣ. ಬಡವರ ಕಲ್ಯಾಣ ವೆಚ್ಚಗಳಿಗಾಗಿ ಮಾಡುತ್ತಿದ್ದ 100 ರೂ.ಗಳಷ್ಟು ಕಡಿತಗೊಳಿಸಿ ಅದೇ 100 ರೂ.ಗಳನ್ನು ಬಂಡವಾಳಗಾರರಿಗೆ ವರ್ಗಾವಣೆ ಮಾಡಿದ ಕ್ರಮವು ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವುದರ ಬದಲು ಅದನ್ನು ಮತ್ತಷ್ಟು ಕುಗ್ಗಿಸುವಲ್ಲಿ ಪರಿಣಮಿಸುತ್ತದೆ. ಅದು ಹೇಗೆ ಎಂಬುದರ ವಿವರಣೆ ಈ ಕೆಳಗಿನಂತಿದೆ.

ಯಾವುದೇ ಒಂದು ಅವಧಿಯಲ್ಲಿ ಕೈಗೊಳ್ಳುವ ಹೂಡಿಕೆಗಳು ತತ್ಸಂಬಂಧವಾಗಿ ಹಿಂದೆಯೇ ತೆಗೆದುಕೊಂಡ ನಿರ್ಧಾರಗಳ ಫಲಿತಾಂಶವೇ ಆಗಿರುತ್ತವೆ. ಮಾತ್ರವಲ್ಲ, ಈ ಹೂಡಿಕೆಯ ಯೋಜನೆಗಳು ದೀರ್ಘಾವಧಿಯ ಗರ್ಭಾವಸ್ಥೆಯನ್ನು ಹೊಂದಿರುತ್ತವೆ ಎಂಬುದು ಸಾರ್ವಜನಿಕ ಮತ್ತು ಖಾಸಗಿ ಈ ಎರಡೂ ವಲಯಗಳ ಹೂಡಿಕೆಯ ವಿಷಯದಲ್ಲೂ ನಿಜವೇ. ಹೂಡಿಕೆಯ ಲಯವನ್ನು ಒಂದು ವೇಳೆ ಎತ್ತರಿಸಬೇಕು ಎಂದಾದರೆ, ಅದನ್ನು ಕುರಿತ ನಿರ್ಧಾರವನ್ನು ಪ್ರಸ್ತುತ ಅವಧಿಯಲ್ಲಿ ಕೈಗೊಳ್ಳಬೇಕಾಗುತ್ತದೆ. ಆಗ ಮಾತ್ರವೇ ಹೂಡಿಕೆಯು ವೇಗವರ್ಧನೆ ಪಡೆಯುತ್ತದೆ. ಹಾಗಾಗಿ, ಯಾವುದೇ ಅವಧಿಯಲ್ಲಿ ಕೈಗೊಳ್ಳುವ ಹೂಡಿಕೆಯ ಪ್ರಮಾಣದ ಬಗ್ಗೆ ನಿರ್ದಿಷ್ಟತೆ ಇರಬೇಕು ಮತ್ತು ಸಂಬಂಧಿಸಿದ ಅವಧಿಯಲ್ಲಿ ಅದು ಬದಲಾಗಬಾರದು. ಆದರೆ, ಈ ಅವಧಿಯಲ್ಲಿ ಬಳಕೆಯ ಮಟ್ಟದಲ್ಲಿ ಬದಲಾವಣೆ ಇರುತ್ತದೆ. ಇಲ್ಲಿ, ಬಂಡವಾಳಗಾರರು ತಮ್ಮ ಖರ್ಚು–ವೆಚ್ಚಗಳಿಗಾಗಿ ತಮ್ಮ ವರಮಾನದಿಂದ ಬಳಸಿಕೊಳ್ಳುವ ಪಾಲಿಗಿಂತ ಹೆಚ್ಚಿನ ಪಾಲನ್ನು ಕಾರ್ಮಿಕರು ತಮ್ಮ ವರಮಾನದಿಂದ ಬಳಸುವುದರಿಂದ, ಕೊಳ್ಳುವ ಶಕ್ತಿಯು ಕಾರ್ಮಿಕರಿಂದ ಬಂಡವಾಳಗಾರರತ್ತ ಹೊರಳುವ ಬದಲಾವಣೆಯ ಪರಿಣಾಮವಾಗಿ ಒಟ್ಟು ಬಳಕೆಯಲ್ಲಿ ಇಳಿಕೆಯಾಗುತ್ತದೆ. (ಬಂಡವಾಳಶಾಹಿಗಳಿಗೆ ಹಣಕಾಸು ವರ್ಗಾವಣೆ ಮಾಡುವ ಸಲುವಾಗಿ ಸರ್ಕಾರವು ತನ್ನ ಬಳಕೆಯನ್ನು ಇಳಿಕೆ ಮಾಡಿದರೆ ಇದೇ ಪರಿಣಾಮ ಇರುತ್ತದೆ).

ಲಾಭದ ಮೊತ್ತ ಬದಲಾಗುವುದಿಲ್ಲ

ಕಾರ್ಮಿಕರಿಂದ ಬಂಡವಾಳಗಾರರಿಗೆ (ಮತ್ತು ಸರ್ಕಾರದಿಂದ ಬಂಡವಾಳಗಾರರಿಗೆ ಕೂಡ) ಆಗುವ ವರ್ಗಾವಣೆಗಳ ಪರಿಣಾಮವಾಗಿ ನಿವ್ವಳ ರಫ್ತುಗಳಲ್ಲಿ (ಅಂದರೆ, ಆಮದುಗಳಿಗಿಂತ ರಫ್ತುಗಳು ಎಷ್ಟು ಅಧಿಕ ಎಂಬುದನ್ನು) ಇಳಿಕೆಯಾಗುತ್ತದೆ. ಏಕೆಂದರೆ ಬಂಡವಾಳಗಾರರ ಬಳಕೆಯಲ್ಲಿ ಆಮದು ಮಾಡುವ ಸಾಮಗ್ರಿಗಳ ಪ್ರಮಾಣ ಹೆಚ್ಚಿರುತ್ತದೆ. ಇಲ್ಲಿ ಕಾರ್ಮಿಕರಿಗೆ ನಷ್ಟ ಉಂಟುಮಾಡಿ ಬಂಡವಾಳಗಾರರಿಗೆ ಹಣಕಾಸು ಒದಗಿಸುವ ವರ್ಗಾವಣೆಗಳು ನಿವ್ವಳ ರಫ್ತುಗಳನ್ನು ಬದಲಾಯಿಸುವುದಿಲ್ಲ ಎಂದೇ ಭಾವಿಸೋಣ. ಒಂದು ದೇಶದ ಒಟ್ಟು ರಾಷ್ಟ್ರೀಯ ವರಮಾನ Y, ಬಳಕೆ C, ಹೂಡಿಕೆ I, ಸರ್ಕಾರಿ ವೆಚ್ಚ G, ಮತ್ತು ಅದರ ಚಾಲ್ತಿ ಖಾತೆಯ ಪಾವತಿ ಶೇಷದ ಶಿಲ್ಕು (surplus on the current account of balance of payments) (X-M), ಇವುಗಳ ಮೊತ್ತಕ್ಕೆ ಸಮನಾಗಿರುತ್ತದೆ, ಅಂದರೆ, $Y = C + I + G + (X - M)$ …… (i).

ಇದರಲ್ಲಿ C ಅನ್ನು ಕಡಿಮೆ ಮಾಡುವ ಮೂಲಕ ಬಂಡವಾಳಗಾರರಿಗೆ ಒದಗಿಸುವ ವರ್ಗಾವಣೆ, ಬಲಭಾಗದ ಮೊತ್ತವನ್ನು ಕಡಿಮೆ ಮಾಡುತ್ತದೆ. ಇದು ಒಟ್ಟು ಬೇಡಿಕೆಯ ಮಟ್ಟವನ್ನು ಚಿತ್ರಿಸುತ್ತದೆ. ಆದ್ದರಿಂದ ಮೇಲಿನ ಸಮೀಕರಣವನ್ನು Y ಅನ್ನು ಕೆಳಗಿಳಿಸುವ ಮೂಲಕ, ಅಂದರೆ, ಉತ್ಪಾದನೆ ಮತ್ತು ಉದ್ಯೋಗದಲ್ಲಿನ ಕಡಿತದ ಮೂಲಕ, ಮಾತ್ರ ಪುನಃ ಸ್ಥಾಪಿಸಬಹುದು.

ಬಳಕೆಯಲ್ಲಿ ಇಳಿಕೆ ಸಂಭವಿಸಿದಾಗ, ಅರ್ಥವ್ಯವಸ್ಥೆಯಲ್ಲಿ ಬಳಕೆಯಾಗದ ಸಾಮರ್ಥ್ಯದ ಮಟ್ಟ ಏರುತ್ತದೆ. ಇಂದಿನ ದಿನಮಾನಗಳಲ್ಲಿ ಇದರ ಪರಿಣಾಮವೆಂದರೆ ಬಂಡವಾಳಗಾರರು ಕೈಗೊಳ್ಳುವ ಹೂಡಿಕೆಯ ನಿರ್ಧಾರಗಳಲ್ಲಿ ಇಳಿಕೆ ಕಾಣುತ್ತದೆ. ಹಾಗಾಗಿ ತದನಂತರದ ಅವಧಿಯಲ್ಲಿ ಅವರ ನಿಜ ಹೂಡಿಕೆಯ ಪ್ರಮಾಣ ತಗ್ಗುವುದರಿಂದ, ಅರ್ಥವ್ಯವಸ್ಥೆಯು ಪುನಶ್ಚೇತನಗೊಳ್ಳುವುದರ ಬದಲು ಕುಗ್ಗುತ್ತದೆ.

ಕಥೆ ಅಲ್ಲಿಗೇ ಮುಗಿಯುವುದಿಲ್ಲ. ಅರ್ಥವ್ಯವಸ್ಥೆಯ ಅಂತಹ ಒಂದು ಸಂಕುಚನವೇ ಸ್ವತಃ, ಅಂದರೆ, ಇತರ ಅಂಶಗಳು ಬದಲಾಗದಿದ್ದರೆ, ಲಾಭವನ್ನು ಇಳಿಕೆ ಮಾಡುವ ಪರಿಣಾಮವನ್ನು ಹೊಂದಿರುತ್ತದೆ. ಹೀಗೆ ಬಂಡವಾಳಗಾರರಿಗೆ ಒದಗಿಸುವ ವರ್ಗಾವಣೆಯು ಲಾಭವನ್ನು ಹೆಚ್ಚಿಸುವ ಪರಿಣಾಮವನ್ನು ಹೊಂದಿದ್ದರೆ, ಕಾರ್ಮಿಕರ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡುವ ಮೂಲಕ ಅಂತಹ ವರ್ಗಾವಣೆಗಳನ್ನು ಒದಗಿಸಿದ ಅಂಶವು ಬಂಡವಾಳಗಾರರ ಲಾಭವನ್ನು ಇಳಿಕೆ ಮಾಡುವ ಒಂದು ವಿರುದ್ಧ ಪರಿಣಾಮವನ್ನು ಹೊಂದಿದೆ. ತಕ್ಕಮಟ್ಟಿಗೆ ವಾಸ್ತವಿಕವಾದ ಊಹೆಗಳ ಆಧಾರದ ಮೇಲೆ ಹೇಳುವುದಾದರೆ, ಈ ಎರಡು ಪರಿಣಾಮಗಳು ನಿಖರವಾಗಿ ಒಂದನ್ನೊಂದು ರದ್ದುಗೊಳಿಸುತ್ತವೆ. ಹಾಗಾಗಿ ಬಂಡವಾಳಗಾರರ ಒಟ್ಟು ಲಾಭವು ವರ್ಗಾವಣೆಯಿಲ್ಲದೇ ಪಡೆದ ಲಾಭದಷ್ಟೇ ಇರುತ್ತದೆ. ಈ ಫಲಿತಾಂಶವು ದುಡಿಯುವ ಜನರು ತಮ್ಮ ಇಡೀ ವರಮಾನವನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಾರೆ ಎಂಬ ಊಹೆಯನ್ನು ಆಧರಿಸಿದೆ.



ಈ ಊಹೆಯು ತಕ್ಕಮಟ್ಟಿಗೆ ವಾಸ್ತವಿಕವಾಗಿದೆ. ಏಕೆಂದರೆ ಜನಸಂಖ್ಯೆಯ ತಳಭಾಗದ ವರ್ಗವು ಹೊಂದಿರುವ ಸಂಪತ್ತಿನ ಒಡೆತನದ ಪ್ರಮಾಣವು ಅರ್ಥವ್ಯವಸ್ಥೆಯ ಒಟ್ಟು ಸಂಪತ್ತಿನ ಹೋಲಿಕೆಯಲ್ಲಿ ತುಂಬಾ ಸಣ್ಣದಿದೆ. ಉದಾಹರಣೆಯಾಗಿ ಹೇಳುವುದಾದರೆ, ಭಾರತದಲ್ಲಿ ತಳಭಾಗದ ಶೇ. 50ರಷ್ಟು ಜನರು ದೇಶದ ಒಟ್ಟು ಸಂಪತ್ತಿನ ಶೇ. 2ರಷ್ಟನ್ನು ಮಾತ್ರ ಹೊಂದಿದ್ದಾರೆ. ಎಲ್ಲ ಸಂಪತ್ತು ಅಗತ್ಯವಾಗಿ ಉಳಿತಾಯದಿಂದಲೇ ಉದ್ಭವಿಸುವುದರಿಂದ, ಇವರು ಏನನ್ನೂ ಉಳಿತಾಯ ಮಾಡುವುದಿಲ್ಲ ಎಂಬುದನ್ನು ಮಾತ್ರ ಇದು ತೋರಿಸುತ್ತದೆ. ಆದ್ದರಿಂದ, ದುಡಿಯುವ ಜನರು ಉಳಿತಾಯ ಮಾಡುವುದಿಲ್ಲ ಎಂಬುದು ಮತ್ತು ಅರ್ಥವ್ಯವಸ್ಥೆಯಲ್ಲಿ ಉಂಟಾಗುವ ಸಂಪೂರ್ಣ ಉಳಿತಾಯವು, ಸರ್ಕಾರವನ್ನು ಹೊರತುಪಡಿಸಿದರೆ, ಶ್ರೀಮಂತರಿಂದ ಬರುತ್ತದೆ ಎಂಬ ನಮ್ಮ ಊಹೆಯು ವಾಸ್ತವಿಕವಾಗಿದೆ.

ಶ್ರೀಮಂತರು, ಅಂದರೆ ಈ ಸಂದರ್ಭದಲ್ಲಿ ಬಂಡವಾಳಗಾರರು, ತಮ್ಮ ಇಡೀ ವರಮಾನವನ್ನು ಉಳಿತಾಯ ಮಾಡುತ್ತಾರೆ ಎಂದು ನಾವು ಒಂದು ಕ್ಷಣ ಭಾವಿಸೋಣ. ಆಗ, ಖಾಸಗಿ ಉಳಿತಾಯವು ಲಾಭಗಳಿಗೆ ಸಮನಾಗಿರುತ್ತದೆ. ಯಾವುದೇ ಒಂದು ಅರ್ಥವ್ಯವಸ್ಥೆಯಲ್ಲಿ, ಒಟ್ಟು ದೇಶೀಯ ಉಳಿತಾಯವು ಒಟ್ಟು ದೇಶೀಯ ಹೂಡಿಕೆಯಿಂದ ವಿದೇಶಿ ಉಳಿತಾಯದ ಒಳಹರಿವನ್ನು ಕಳೆದ ಮೊತ್ತಕ್ಕೆ ಸಮನಾಗಿರುವುದರಿಂದ ಮತ್ತು ಸರ್ಕಾರದ ಹೂಡಿಕೆಯಿಂದ ಸರ್ಕಾರದ ಉಳಿತಾಯವನ್ನು ಕಳೆದ (ಮೈನಸ್ ಮಾಡಿದ) ಮೊತ್ತವನ್ನು ವಿತ್ತೀಯ ಕೊರತೆ ಎಂದು ಕರೆಯಲಾಗುವುದರಿಂದ, ಅರ್ಥವ್ಯವಸ್ಥೆಯಲ್ಲಿ ಖಾಸಗಿ ಉಳಿತಾಯವು ಮತ್ತು ಅದರಿಂದಾಗಿ ಲಾಭಗಳು, ಅಗತ್ಯವಾಗಿ ಖಾಸಗಿ ಹೂಡಿಕೆ + ವಿತ್ತೀಯ ಕೊರತೆ – (ಮೈನಸ್) ಈ ಅವಧಿಯಲ್ಲಿ ಅರ್ಥವ್ಯವಸ್ಥೆಗೆ ಬರುವ ವಿದೇಶಿ ಉಳಿತಾಯ F; ಇವುಗಳಿಗೆ ಸಮನಾಗಿರಬೇಕು ಎಂದು ಹೇಳಿದಂತಾಗುತ್ತದೆ. ಅಂದರೆ,

ಲಾಭಗಳು=ಖಾಸಗಿ ಹೂಡಿಕೆ+ವಿತ್ತೀಯ ಕೊರತೆ–F …(ii)

ಖಾಸಗಿ ಹೂಡಿಕೆ ಮತ್ತು ವಿದೇಶಿ ಉಳಿತಾಯದ ಒಳಹರಿವು (ಇದು ಮೇಲೆ ತಿಳಿಸಿದ X-Mನ ಋಣಾತ್ಮಕ ಭಾಗ) ಈ ಅವಧಿಯಲ್ಲಿ ಬದಲಾಗದೆ ಉಳಿಯುತ್ತದೆ ಎಂದು ನಾವು ವಾದಿಸಿರುವುದರಿಂದ "ವಿತ್ತೀಯ ಜವಾಬ್ದಾರಿ" ಶಾಸನ ಕಾರಣದ ವಿತ್ತೀಯ ಕೊರತೆಯೂ ಬದಲಾಗದೆ ಉಳಿಯುವುದರಿಂದ, ಬಂಡವಾಳಗಾರರಿಗೆ ಒದಗಿಸುವ ಹಣಕಾಸು ವರ್ಗಾವಣೆಯ ಹೊರತಾಗಿಯೂ ಲಾಭಗಳು ಅಷ್ಟೇ ಆಗಿರಬೇಕು.

ಎಲ್ಲ ಲಾಭಗಳನ್ನೂ ಉಳಿತಾಯ ಮಾಡಲಾಗಿದೆ ಎಂಬ ಊಹೆಯನ್ನು ಕೈಬಿಡುವುದರಿಂದ ಮೇಲಿನ ವಾದಕ್ಕೆ ಯಾವ ವ್ಯತ್ಯಾಸವೂ ಆಗುವುದಿಲ್ಲ. ಲಾಭಗಳ –ಅನುಪಾತವನ್ನು ಉಳಿತಾಯ ಮಾಡಿದರೆ, ಸಮೀಕರಣ (ii) ಹೀಗೆ ಇರುತ್ತದೆ:

α. ಲಾಭಗಳು=ಖಾಸಗಿ ಹೂಡಿಕೆ+ವಿತ್ತೀಯ ಕೊರತೆ – F… (iii)

ನಾವು ಈಗ ಚರ್ಚಿಸಿದ ಕಾರಣಗಳಿಂದಾಗಿ (iii) ರ ಬಲಭಾಗವು ಒಂದು ವೇಳೆ ಬದಲಾಗದೆ ಉಳಿದಿದ್ದರೆ, – ಒಂದಕ್ಕೆ ಸಮನಾಗದಿದ್ದರೂ ಸಹ ಲಾಭವು ಬದಲಾಗದೆ ಪುಟ 14 ಕ್ಕೆ

ಕಳೆದುಕೊಳ್ಳುತ್ತಿರುವ ಅಮೆರಿಕಾದ ಸಾಮ್ರಾಜ್ಯಶಾಹಿ ಹಿಡಿತ......

ಪುಟ 16 ರಿಂದ

1946ರಿಂದ 1989ರ ವರೆಗಿನ ಅವಧಿಯ ಲಾಭ ಹಾಗೂ ಮಹಾಯುದ್ಧ ಕಾಲದ ಲಾಭದಲ್ಲಿ ದೊಡ್ಡ ವ್ಯತ್ಯಾಸವಿದೆ. ಮೇಲೆ ತಿಳಿಸಿದ ಅವಧಿಯಲ್ಲಿ ಸರಾಸರಿ ಶೇ. 29ರಷ್ಟು ಲಾಭ ಸಿಕ್ಕಿದ್ದರೆ ಎರಡನೇ ಮಹಾಯುದ್ಧದ ಅವಧಿಯಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ಶೇ. 15.8ರಷ್ಟು ಹೆಚ್ಚು ಲಾಭ ದೊರೆತಿದೆ. ಯುದ್ಧಗಳ ಹಿಂದೆ ಈ ಲಾಭಕೋರತನ ಇದೆ. ಯುದ್ಧಗಳ ಹಿಂದೆ ಅಮೆರಿಕದ ಆಳುವ ವರ್ಗಗಳ ಹಿತಾಸಕ್ತಿ ಇದೆ.

1939 ರಲ್ಲಿ ಅಮೆರಿಕದ ರಕ್ಷಣಾ ಉತ್ಪಾದನೆಯ ಪಾಲು ಅದರ ಜಿಡಿಪಿಯ ಶೇ. ಒಂದರಷ್ಟಿತ್ತು. 1946ರಲ್ಲಿ ಎರಡನೇ ಮಹಾಯುದ್ಧ ಮುಗಿಯುವ ಹೊತ್ತಿಗೆ ಈ ಪಾಲು ಶೇ. 40ಕ್ಕೆ ಏರಿತು.

ನ್ಯಾಟೋ ವಿಸ್ತರಣೆ ಮತ್ತು ಯುದ್ಧ

ಸೋವಿಯತ್ ಒಕ್ಕೂಟವು ಕುಸಿದ ಮೇಲೂ 'ನ್ಯಾಟೋ' ಕೂಟವನ್ನು ಮುಂದುವರಿಸಲಾಯಿತು. ಉಕ್ರೇನನ್ನು ನ್ಯಾಟೋಗೆ ಸೇರಿಸಿಕೊಂಡು, ರಷ್ಯಾದ ವಿರುದ್ಧ ನ್ಯಾಟೋವನ್ನು ವಿಸ್ತರಿಸುವ ಪ್ರಯತ್ನ ನಡೆದಿದೆ. ಜಗತ್ತಿನ ನಾನಾ ದೇಶಗಳು ಶಸ್ತ್ರಾಸ್ತ್ರಗಳನ್ನು ಖರೀದಿಸುತ್ತಿರಬೇಕಾದರೆ ಯುದ್ಧದ ಭೂತವನ್ನು ಸೃಷ್ಟಿ ಮಾಡುತ್ತಲೇ ಇರಬೇಕು.

'ಲಾಬ್ಬಿಯಿಂಗ್': ಕಾನೂನುಬದ್ಧ ಭ್ರಷ್ಟಾಚಾರ

ಅಮೆರಿಕದಲ್ಲಿ 435 ಜನ ಸೆನೇಟರ್‌ಗಳನ್ನು ಸಂಪರ್ಕಿಸಿ ತಮ್ಮ ಶಸ್ತ್ರಾಸ್ತ್ರಗಳನ್ನು ಖರೀದಿಸುವಂತೆ ಲಾಬ್ಬಿ(ವಶೀಲಿ) ಮಾಡಲು 700 ಜನ 'ಲಾಬ್ಬಿಯರ್ಸ್' ಇದ್ದಾರೆ. 'ಲಾಬ್ಬಿಯಿಂಗ್' ಎನ್ನಲಾಗುವ ಈ ಭ್ರಷ್ಟಾಚಾರಕ್ಕೆ ಅಮೆರಿಕದಲ್ಲಿ ಕಾನೂನುಬದ್ಧವಾದ ಮಾನ್ಯತೆಯನ್ನೇ ನೀಡಲಾಗಿದೆ. 'ಮಿಲಿಟರಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್' ಅಮೆರಿಕದ ನೀತಿಯನ್ನು ನಿಯಂತ್ರಿಸುತ್ತದೆ. ಈ ಕಾಂಪ್ಲೆಕ್ಸ್‌ಗೆ ಈಗ ಮಿಲಿಟರಿ ಕೈಗಾರಿಕೆ, ಕಾಂಟ್ರಾಕ್ಟ್‌ದಾರರ ಜೊತೆಗೆ ಮಾಧ್ಯಮಗಳು, ಮನರಂಜನಾ ಉದ್ಯಮವೂ ಸೇರಿಕೊಂಡಿದೆ. ಜನರ ಮನಸ್ಸಿನಲ್ಲಿ ಯುದ್ಧಗಳನ್ನು ಸಮರ್ಥಿಸುವ ಮನೋಸ್ಥಿತಿಯನ್ನು ರೂಪಿಸುವಂತೆ ಇವುಗಳನ್ನು ಬಳಸಲಾಗುತ್ತಿದೆ. ಅಮೆರಿಕದಲ್ಲಿ ಜನರ ಮೇಲೆ ಗೂಢಚರ್ಯೆ, ಬೇರೆ ದೇಶಗಳ ಮೇಲೆ ಯುದ್ಧ ಎಂಬಂತಾಗಿದೆ.

ಜಗತ್ತಿನ ಒಟ್ಟು ಮಿಲಿಟರಿ ವೆಚ್ಚದಲ್ಲಿ ಅಮೆರಿಕದ ಪಾಲು ಶೇ.39 ಇದೆ. ಚೀನಾದ ಪಾಲು ಶೇ.13ರಷ್ಟಿದೆ. ಯುರೋಪ್ ಮತ್ತು ಅಮೆರಿಕಗಳ ಪಾಲು ಒಟ್ಟು ಸೇರಿದರೆ ಅದು ಶೇ.56.3ರಷ್ಟಾಗುತ್ತದೆ.

ಜಗತ್ತಿನಲ್ಲಿ ಬಲಾಢ್ಯ ಸಾಮ್ರಾಜ್ಯಶಾಹಿಯಾಗಲು ಉತ್ಪಾದನೆ, ಹಣಕಾಸು, ಮಿಲಿಟರಿ ಇವುಗಳಲ್ಲಿ ಪಾರಮ್ಯ ಸಾಧಿಸಬೇಕಾಗುತ್ತದೆ. ಅಮೆರಿಕವು ಮಿಲಿಟರಿ, ವ್ಯಾಪಾರ, ರಾಜಕೀಯಗಳಲ್ಲಿ ಪ್ರಾಬಲ್ಯ ಸಾಧಿಸುವ ಮೂಲಕ 60-70ರ ದಶಕದಲ್ಲೇ ಬಲಾಢ್ಯ ಸಾಮ್ರಾಜ್ಯಶಾಹಿ ಶಕ್ತಿಯಾಗಿತ್ತು. ಆದರೆ ಈಗ ಚೀನಾದ ಅಗಾಧ ಉತ್ಪಾದಕ ಶಕ್ತಿ, ಆರ್ಥಿಕ ಬೆಳವಣಿಗೆಯಿಂದಾಗಿ ಅದೆಲ್ಲಾ ಹೋಗುತ್ತಿದೆ. ಬ್ರಿಕ್ಸ್ ದೇಶ(ಬ್ರೆಸಿಲ್, ರಷ್ಯಾ, ಇಂಡಿಯಾ, ಚೈನಾ, ದಕ್ಷಿಣ ಆಫ್ರಿಕ)ಗಳ ಒಟ್ಟು ಜಿಡಿಪಿಯು ಈಗ ಜಿ-7 ರಾಷ್ಟ್ರಗಳ ಒಟ್ಟು ಜಿಡಿಪಿಗಿಂತ ಹೆಚ್ಚಾಗಿದೆ. ಚೀನಾ ಎಲ್ಲ ವಲಯಗಳಲ್ಲಿ ಮುಂದೆ ಹೋಗುತ್ತಿದೆ. ಮಿಲಿಟರಿ ತಂತ್ರಜ್ಞಾನ ಕ್ಷೇತ್ರದಲ್ಲಿ ರಷ್ಯಾ ಈಗಲೂ ಮುಂದಿದೆ ಎಂದು ವಸಂತ್ ರಾಜ ಅವರು ವಿವರಿಸಿದರು.

ಕಳೆದುಕೊಳ್ಳುತ್ತಿರುವ ಸಾಮ್ರಾಜ್ಯಶಾಹಿ ಅಮೆರಿಕದ ಅಧಿಪತ್ಯವನ್ನು ಪುನರ್ ಸ್ಥಾಪಿಸಲು: ಜಿ.ಎನ್.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಚಿಂತಕ ಜಿ.ಎನ್.ನಾಗರಾಜ ಅವರು ಮಾತನಾಡಿ, ಜಗತ್ತಿನ ಮೇಲೆ ಕಳೆದುಕೊಳ್ಳುತ್ತಿರುವ ಸಾಮ್ರಾಜ್ಯಶಾಹಿ ಅಮೆರಿಕದ ಅಧಿಪತ್ಯವನ್ನು ಪುನರ್ ಸ್ಥಾಪಿಸುವುದು, ಶಸ್ತ್ರಾಸ್ತ್ರ ಉತ್ಪಾದಿಸುವ ಮಿಲಿಟರಿ ಕಂಪನಿಗಳಿಗೆ ಲಾಭ ತಂದುಕೊಡುವುದು ಯುದ್ಧಗಳ ಮೂಲ ಉದ್ದೇಶ. 2008ರಲ್ಲಿ ಆರಂಭವಾದ ಜಾಗತಿಕ ಆರ್ಥಿಕ ಬಿಕ್ಕಟ್ಟು 16 ವರ್ಷಗಳ ನಂತರವೂ ಇಂದಿಗೂ ಮುಂದುವರಿಯುತ್ತಿದೆ. ಇದರಿಂದ ಕಾರ್ಪೊರೇಟ್ ಕಂಪನಿಗಳ ಲಾಭ ಕುಗ್ಗಿದೆ. 1930ರ ದಶಕದ ಆರಂಭದಲ್ಲಿ ಜಾಗತಿಕ ಆರ್ಥಿಕ ಮಹಾಕುಸಿತದ ನಂತರ ಎರಡನೇ ವಿಶ್ವ ಮಹಾಯುದ್ಧ ನಡೆಯಿತು. ಬಿಕ್ಕಟ್ಟಿಗೆ ಸಿಲುಕಿದ್ದ ಜರ್ಮನಿಯ ಕಾರ್ಪೊರೇಟ್ ಕಂಪನಿಗಳಿಗೆ ಲಾಭ ತಂದುಕೊಡಲು ಹೊಸ ಹೊಸ ಪ್ರದೇಶಗಳನ್ನು ಆಕ್ರಮಿಸಿಕೊಂಡು, ಅವುಗಳು ಬಿಕ್ಕಟ್ಟಿನಿಂದ ಹೊರಬರಲು ಸಹಾಯ ಮಾಡಲು ಹಿಟ್ಲರ್ ಯುದ್ಧವನ್ನು ಆರಂಭಿಸಿದ. ಇಂದು ಕಾರ್ಪೊರೇಟ್ ಕಂಪನಿಗಳು ಬಿಕ್ಕಟ್ಟಿನಿಂದ ಹೊರಬರಬೇಕಾದಲ್ಲಿ ಎರಡು ಮಾರ್ಗ. ಒಂದು ತಮ್ಮ ತಮ್ಮ ದೇಶಗಳ ಕಾರ್ಮಿಕರು, ದುಡಿಯುವ ಜನರು, ರೈತರಿಗೆ ಸೌಲಭ್ಯಗಳನ್ನು ಕಡಿತ ಮಾಡಿ ಅವರಿಂದ ಕಿತ್ತುಕೊಳ್ಳುವುದು, ಇನ್ನೊಂದು ದಾರಿ ಇರಾಕ್, ಲಿಬಿಯಾಗಳಲ್ಲಿನ ಸಂಪತ್ತು ದೋಚಿದಂತೆ ಸಂಪತ್ತು ದೋಚುವುದು.

ತೈಲ ದೋಚುವ ಸನ್ನಾಹ: ರಷ್ಯಾ-ಚೀನಾಗಳ ವಿರುದ್ಧ ವ್ಯೂಹ

ರಷ್ಯಾ ವಿಶಾಲವಾದ ಮತ್ತು ಸಂಪದ್ಭರಿತವಾದ ದೇಶ. 1991ರಲ್ಲಿ ರಷ್ಯಾವು ಸಾಮ್ರಾಜ್ಯಶಾಹಿ ಅಮೆರಿಕದೊಂದಿಗೆ ಸಹಕರಿಸಲು ಆರಂಭಿಸಿ, ಆ ನಂತರ ಅದರ ವಿರುದ್ಧ ತಿರುಗಿ ನಿಂತಿತು. ರಷ್ಯಾದ ಸಂಪತ್ತಿನಿಂದ ಸಾಧ್ಯವಾದಷ್ಟನ್ನು ಸೆಳೆಯಲು ಕಾರ್ಪೋರೇಟ್ ಕಂಪನಿಗಳಿಗೆ ಅವಕಾಶವಾಗಬೇಕು, ರಷ್ಯಾದ ಮಾರುಕಟ್ಟೆ ಪೂರ್ತಿಯಾಗಿ ಕಾರ್ಪೋರೇಟ್‌ಗಳ ಹಿಡಿತಕ್ಕೆ ಸಿಗಬೇಕು, ಇರಾನ್‌ನ ತೈಲ, ಖನಿಜ ಇತರೆ ಸಂಪತ್ತಿನ ಮೇಲೆ ನಿಯಂತ್ರಣ ಸಾಧಿಸಬೇಕು ಎಂಬುದು ಅಮೆರಿಕದ ಗುರಿ. ಹೀಗಾಗಿ ಇರಾನ್ ಅನ್ನು ಮಣಿಸುವ ಉದ್ದೇಶವಿದೆ. ರಷ್ಯಾವು ಚೀನಾಗೆ ಬೆಂಬಲ ಕೊಡುವುದರಿಂದ ರಷ್ಯಾವನ್ನು ಮಣಿಸದೇ ಚೀನಾವನ್ನು ಮಣಿಸಲು ಸಾಧ್ಯವಿಲ್ಲ, ಹೀಗಾಗಿ ರಷ್ಯಾವನ್ನು ಮೊದಲು ಮಣಿಸಬೇಕು ಎಂಬ ಗುರಿಯೂ ಯುದ್ಧಗಳ ಹಿಂದೆ ಇದೆ. ಅಮೆರಿಕ ನಿಯಂತ್ರಣದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಒಮೆನ್ ಮುಂತಾದ ಮಧ್ಯಪ್ರಾಚ್ಯ ದೇಶಗಳನ್ನು ನಿಯಂತ್ರಣದಲ್ಲಿ ಉಳಿಸಿಕೊಳ್ಳುವ ಉದ್ದೇಶವೂ ಯುದ್ಧಗಳ ಹಿಂದಿದೆ.

ಉಕ್ರೇನ್ ಯುದ್ಧ ನ್ಯಾಟೋ-ರಷ್ಯಾಗಳ ನಡುವಿನದು

ಇಂದು ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧ ಉಕ್ರೇನ್ ಮತ್ತು ರಷ್ಯಾಗಳ ನಡುವಿನ ಯುದ್ಧ ಅಲ್ಲ. ಅಮೆರಿಕ ಮತ್ತು ನ್ಯಾಟೋ ಕೂಟ ಮತ್ತು ರಷ್ಯಾಗಳ ನಡುವೆ ಯುದ್ಧ ನಡೆಯುತ್ತಿರುವುದು, ಅದು ಉಕ್ರೇನಿನ ನೆಲದಲ್ಲಿ. ಸಾಯುತ್ತಿರುವುದು ಉಕ್ರೇನಿನ ಜನತೆ. ಉಕ್ರೇನ್ ಅನ್ನು ನ್ಯಾಟೋ ಕೂಟಕ್ಕೆ ಸೇರಿಸಿಕೊಳ್ಳುವುದಿಲ್ಲ, ಉಕ್ರೇನ್‌ನಲ್ಲಿ ಖಂಡಾಂತರ ಕ್ಷಿಪಣಿಗಳನ್ನು ನೆಲೆಗೊಳಿಸುವುದಿಲ್ಲ, ಇತ್ತೀಚೆಗೆ ನ್ಯಾಟೋ ಕೂಟಕ್ಕೆ ಸೇರಿಸಿಕೊಂಡ ಪೋಲೆಂಡ್, ಫಿನ್‌ಲ್ಯಾಂಡ್‌ಗಳನ್ನು ನ್ಯಾಟೋ ಕೂಟದಿಂದ ಹೊರಗಿಡಲಾಗುವುದು ಎಂಬ ಪ್ರಮುಖ ಭರವಸೆಗಳು ಸಿಕ್ಕರೆ ರಷ್ಯಾ ಉಕ್ರೇನ್ ಮೇಲಿನ ಯುದ್ಧವನ್ನು ಮುಂದುವರಿಸುವ ಸಾಧ್ಯತೆ ಇಲ್ಲ.

ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ಮಿಲಿಟರಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ ಎಂದರೆ ಏನು ಎಂಬುದು. ಮೊಬೈಲ್, ಕಂಪ್ಯೂಟರ್, ಸೋಪು ಇತ್ಯಾದಿಗಳ ಮಾರುಕಟ್ಟೆಯಂತೆ ಮಿಲಿಟರಿ ಉತ್ಪನ್ನಗಳ ಮಾರಾಟದಲ್ಲಿ ಸ್ಪರ್ಧೆ-ಪೈಪೋಟಿಗಳು ಇರುವುದಿಲ್ಲ. ಏಕೆಂದರೆ ಅವುಗಳನ್ನು ಮಾರಾಟ ಮಾಡಬೇಕಿರುವುದು ಸರಕಾರಗಳಿಗೆ. ಆದ್ದರಿಂದ ಬಾರಿ ಕಮೀಷನ್‌ಗಳನ್ನು ಕೊಟ್ಟು ಸರಕಾರಗಳು ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳುವಂತೆ ಮಾಡಬಹುದು. ಈ ಮಿಲಿಟರಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್‌ನಲ್ಲಿ ಶಸ್ತ್ರಾಸ್ತ್ರ ಉತ್ಪಾದನೆ, ಬಿಡಿಭಾಗಗಳ ಪೂರೈಕೆಯ ಮೂಲಕ ಭಾರತದ ಟಾಟಾ ಕಂಪನಿಯೂ ಇದರ ಭಾಗವಾಗಿದೆ. ಜಗತ್ತಿನ ನಾನಾ ದೇಶಗಳ ಕಂಪನಿಗಳೂ ಇದರ ಭಾಗವಾಗಿವೆ. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿ ಯುದ್ಧಕೋರತನದ ವಿರುದ್ಧ ಶಾಂತಿ ಚಳುವಳಿ ಏಳಬೇಕಿದೆ.

ಶಾಂತಿ ಚಳುವಳಿ ಏಳಲಿ

ಹಿಂದೆಯುದ್ಧವಿರೋಧಿ ಶಾಂತಿ ಚಳುವಳಿಯಲ್ಲಿ ಸಾಹಿತಿಗಳು-ಚಿಂತಕರು-ಕಲಾವಿದರು ದೊಡ್ಡ ಪ್ರಮಾಣದಲ್ಲಿ ಪಾಲ್ಗೊಳ್ಳುತ್ತಿದ್ದರು. ಈಗ ಮತ್ತೊಮ್ಮೆ ಶಾಂತಿ ಚಳುವಳಿ ಏಳಬೇಕಿದೆ. ಬಹಳ ಮುಖ್ಯವಾಗಿ ನಮ್ಮ ಭಾರತ ಸರಕಾರವು ಯುದ್ಧಗಳಿಗೆ ಸಹಾಯವಾಗುವಂತಹ ರೀತಿಯಲ್ಲಿ ವರ್ತಿಸದಂತೆಯೂ ಜನರು ಒತ್ತಡ ಹಾಕಬೇಕಾಗಿದೆ ಎಂದು ಜಿ.ಎನ್. ನಾಗರಾಜ ಹೇಳಿದರು.

ವಿಚಾರ ಸಂಕಿರಣದ ಆರಂಭದಲ್ಲಿ ಪಕ್ಷದ ರಾಜ್ಯಸಮಿತಿ ಸದಸ್ಯರು ಹಾಗೂ ಜನರಲ್ ಶಾಖೆಯ ಕಾರ್ಯದರ್ಶಿಯೂ ಆಗಿದ್ದ ಡಾ.ಎಸ್. ವೈ.ಗುರುಶಾಂತ್ ಅವರು ಪ್ರಾಸ್ತಾವಿಕ ಮಾತುಗಳನ್ನು ಆಡಿ ಸ್ವಾಗತಿಸಿದರು. ಭಾಷಣಕಾರರ ಮಾತುಗಳ ನಂತರ, ಚರ್ಚೆ-ಉತ್ತರ ರೂಪದ ಸಂವಾದವು ಸಹ ಇತ್ತು. ಕೊನೆಯಲ್ಲಿ ಆರ್.ರಾಮಕೃಷ್ಣ ವಂದಿಸಿದರು. ❍

ಬಂಡವಾಳಗಾರರಿಗೆ ಹಣಕಾಸು ವರ್ಗಾವಣೆ....

ಪುಟ 13 ರಿಂದ

ಉಳಿಯಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂಡವಾಳಗಾರರಿಗೆ ಒದಗಿಸುವ ಬಜೆಟ್ ವರ್ಗಾವಣೆಗಳು, ಅಂತಹ ವರ್ಗಾವಣೆಗಳಿಗೆ ಹಣಕಾಸು ಒದಗಿಸಲು ವಿತ್ತೀಯ ಕೊರತೆಯನ್ನು ಹೆಚ್ಚಿಸಲಾಗದ ನವ-ಉದಾರವಾದಿ ಆಳ್ವಿಕೆಯಲ್ಲಿ ಕಾರ್ಮಿಕರ ವರಮಾನವನ್ನು ಅದಕ್ಕೆ ಅನುಗುಣವಾಗಿ ಕಡಿಮೆ ಮಾಡಬೇಕಾಗುವುದರಿಂದ, ಕಾರ್ಮಿಕರು ತಮ್ಮ ಇಡೀ ವರಮಾನವನ್ನು ಒಂದು ವೇಳೆ ಬಳಕೆ ಮಾಡಿದರೆ, ಬಂಡವಾಳಗಾರರ ವರಮಾನವನ್ನೂ ಹೆಚ್ಚಿಸದೆ, ಉತ್ಪಾದನೆಯಲ್ಲಿ ಮತ್ತು ಉದ್ಯೋಗಗಳಲ್ಲಿ ಸಂಕುಚನ(contraction) ಉಂಟುಮಾಡುತ್ತವೆ.

ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬಂಡವಾಳಗಾರರಿಗೆ ಒದಗಿಸುವ ಬಜೆಟ್ ವರ್ಗಾವಣೆಗಳು, ಬಂಡವಾಳಗಾರರ ವರಮಾನವನ್ನೂ ಹೆಚ್ಚಿಸದೆ ಒಂದು ಅರ್ಥವ್ಯವಸ್ಥೆಯಲ್ಲಿ ಅಸಮಾನತೆಯನ್ನು ಹೆಚ್ಚಿಸಲು ಕಾರಣವಾಗುತ್ತವೆ. ಏಕೆಂದರೆ, ಲಾಭ-ಹೆಚ್ಚಿಸುವ ಪರಿಣಾಮಗಳು ಇಲ್ಲದಂತೆ ಮಾಡುವ ಅಂತಹ ವರ್ಗಾವಣೆಗಳು ಉತ್ಪಾದನೆಯ ಸಂಕುಚನವನ್ನು ಉಂಟುಮಾಡುತ್ತವೆ.

ನಿಜವಾದ ಕಾರಣ

ಆದಾಗ್ಯೂ, ವರ್ಗಾವಣೆಗಳು ಬೇರೆಯದೇ ಆದ ಒಂದು ಪ್ರಮುಖ ಪರಿಣಾಮವನ್ನು ಹೊಂದಿವೆ. ಅದುವೇ ಸರ್ಕಾರವು ಈ ಕ್ರಮವನ್ನು ಅನುಸರಿಸುವ ನಿಜ ಕಾರಣ. ಈ ಕಾರಣವೆಂದರೆ, ಬಂಡವಾಳಗಾರರ ನಡುವೆ ಲಾಭಗಳ ಹಂಚಿಕೆಯನ್ನು ಏಕಸ್ವಾಮ್ಯತರ ಬಂಡವಾಳಗಾರರನ್ನು ದೂರವಿರಿಸಿ, ಏಕಸ್ವಾಮ್ಯ ಸ್ತರದ ಬಂಡವಾಳಗಾರರ ಪರವಾಗಿ ಬದಲಾಯಿಸುವುದು. ಇದು ಹೀಗಾಗುತ್ತದೆ. ಈ ಕಾರಣದಿಂದಾಗಿ: ಬಂಡವಾಳಗಾರರಿಗೆ ಒದಗಿಸುವ ಬಜೆಟ್ ವರ್ಗಾವಣೆಗಳು ಲಾಭಗಳಿಗೆ ಸೇರ್ಪಡೆಯಾದರೂ ಸಹ ಇಂತಹ ವರ್ಗಾವಣೆಗಳ ಹೊರತಾಗಿಯೂ ಒಟ್ಟು ಲಾಭಗಳು ಬದಲಾಗುವುದಿಲ್ಲ ಎಂಬುದನ್ನು ನಾವು ಕಂಡಿದ್ದೇವೆ. ಏಕೆಂದರೆ, ಈ ವರ್ಗಾವಣೆಗಳು ಕಾರ್ಮಿಕರ ವರಮಾನವನ್ನು ಕಸಿದುಕೊಳ್ಳುವುದರೊಂದಿಗೆ ಮತ್ತು ಒಟ್ಟಾರೆ ಬೇಡಿಕೆಯನ್ನು ಇಳಿಕೆ ಮಾಡುವುದರೊಂದಿಗೆ ಸಂಬಂಧ ಹೊಂದಿದ್ದು, ಲಾಭಗಳನ್ನು ನಿಖರವಾಗಿ ಅದೇ ಸಮಾನ ಪ್ರಮಾಣದಲ್ಲಿ ಕಡಿಮೆ ಮಾಡುತ್ತವೆ. ಒಟ್ಟಾರೆ ನೆಲೆಯಲ್ಲಿ ಇದು ನಿಜವಾಗಿದ್ದರೂ, ಬೇಡಿಕೆಯಲ್ಲಿ ಇಳಿಕೆಯ ಪರಿಣಾಮವನ್ನು ಎದುರಿಸುವ ಬಂಡವಾಳಗಾರರೇ ಬೇರೆ ಮತ್ತು ವರ್ಗಾವಣೆಗಳ ಒಂದು ಬಹು ದೊಡ್ಡ ಭಾಗವನ್ನು ಪಡೆದುಕೊಳ್ಳುವ ಬಂಡವಾಳಗಾರರೇ ಬೇರೆ. ಎಲ್ಲ ಬಂಡವಾಳಗಾರರೂ ಒಂದೇ ಅಲ್ಲ. ನಿರ್ದಿಷ್ಟವಾಗಿ ಹೇಳುವುದಾದರೆ, ಕಾರ್ಮಿಕರ ಬಳಕೆ ಬೇಡಿಕೆಯ ಕಡಿತದ ಪರಿಣಾಮವು ದೊಡ್ಡ ಬಂಡವಾಳಗಾರರನ್ನು ಹೆಚ್ಚು ತಟ್ಟುವುದಿಲ್ಲ. ಆದರೂ ಅವರು ಬಜೆಟ್ ವರ್ಗಾವಣೆಯ ಸಿಂಹಪಾಲನ್ನು ಪಡೆಯುತ್ತಾರೆ. ಹಾಗಾಗಿ ಒಟ್ಟು ಲಾಭಗಳು ಒಟ್ಟಾರೆ ಮಟ್ಟದಲ್ಲಿ ಬದಲಾಗದೆ ಇದ್ದರೂ ಸಹ ಅವರು ನಿವ್ವಳ ಲಾಭಗಾರರಾಗುತ್ತಾರೆ. ಆದರೆ, ಕಾರ್ಮಿಕರ ಬಳಕೆಯ ಸರಕುಗಳ ಮಾರುಕಟ್ಟೆಯಲ್ಲಿ ಎದ್ದು ಕಾಣುವ ಸಣ್ಣ ಬಂಡವಾಳಗಾರರು ನಿವ್ವಳ ನಷ್ಟಗಾರರಾಗುತ್ತಾರೆ..

ಈ ರೀತಿಯಲ್ಲಿ ಬಂಡವಾಳಶಾಹಿಗಳಿಗೆ ಒದಗಿಸುವ ಬಜೆಟರಿ ವರ್ಗಾವಣೆಯು, ಸಣ್ಣ ಬಂಡವಾಳಗಾರರನ್ನು (ಅಥವಾ ಕಾರ್ಮಿಕರ ಬಳಕೆಗಾಗಿ ಸರಕುಗಳನ್ನು ಉತ್ಪಾದಿಸುವ ಸಣ್ಣ ಉತ್ಪಾದಕರನ್ನೂ ಸಹ) ದೊಡ್ಡ ಬಂಡವಾಳಗಾರರು ತ್ವರಿತವಾಗಿ ಸ್ಥಳಾಂತರಿಸುವ ಯಾವ ವಿಧಾನವನ್ನು "ಬಂಡವಾಳದ ಕೇಂದ್ರೀಕರಣ" ಎಂದು ಮಾರ್ಕ್ಸ್ ಕರೆದಿದ್ದರೋ ಅದಕ್ಕೆ ಸಹಾಯ ಮಾಡುವ ಒಂದು ವಿಧಾನವಾಗಿದೆ. "ಬಂಟ ಬಂಡವಾಳಗಾರರು" ಬಯಸುವುದು ಇದನ್ನೇ ಮತ್ತು ಸರ್ಕಾರವು ಅವರನ್ನು ಅನುಗ್ರಹಿಸುತ್ತದೆ ಕೂಡ. ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ನೆಪದಲ್ಲಿ ಇಂತಹ ವರ್ಗಾವಣೆಗಳನ್ನು ಕೈಗೊಳ್ಳಲಾಗುತ್ತದೆ. ಆದರೆ ಈ ಉದ್ದೇಶವು ಈಡೇರುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಈ ವರ್ಗಾವಣೆಗಳು ಅರ್ಥವ್ಯವಸ್ಥೆಯನ್ನು ಕುಗ್ಗಿಸುವಲ್ಲಿ ಮಾತ್ರ ಯಶಸ್ವಿಯಾಗುತ್ತವೆ. ಹೀಗೆ ಕುಗ್ಗುತ್ತಿರುವ ಒಂದು ಅರ್ಥವ್ಯವಸ್ಥೆಯ ಸಂದರ್ಭದಲ್ಲಿಯೂ ಸಹ, ಸರ್ಕಾರವು ಏಕಸ್ವಾಮ್ಯ ಬಂಡವಾಳಗಾರರನ್ನು ಬಲಪಡಿಸುತ್ತದೆ.

ನೋಟು ರದ್ದತಿಯ ಕ್ರಮದಿಂದ ಮತ್ತು ಸರಕು ಮತ್ತು ಸೇವಾ ತೆರಿಗೆಯ ಅಳವಡಿಕೆಯಿಂದ ದೇಶದ ಕಿರು ಉತ್ಪಾದಕರಿಗೆ ಹಾನಿ ಉಂಟಾಗಿದೆ ಎಂಬುದನ್ನು ಮಾಧ್ಯಮಗಳು ಮತ್ತು ವಿರೋಧ ಪಕ್ಷಗಳು ಸ್ವಲ್ಪ ಮಟ್ಟಿಗೆ ಒಪ್ಪಿಕೊಳ್ಳುತ್ತವೆಯಾದರೂ, ಬಂಡವಾಳಗಾರರಿಗೆ ನೀಡಿದ ತೆರಿಗೆ ರಿಯಾಯಿತಿಗಳು ಮತ್ತು ಇತರ ರೂಪದ ಬಜೆಟ್ ವರ್ಗಾವಣೆಗಳು ಈ ಕಿರು ಉತ್ಪಾದಕರಿಗೆ ಉಂಟುಮಾಡಿದ ಹಾನಿಯನ್ನು ಗುರುತಿಸಿರುವುದು ಅತ್ಯಲ್ಪವೇ. ❍

ಉಪ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಬೀಗ ಬೇಕಿಲ್ಲ.... ಪುಟ 3 ರಿಂದ

ಹುಚ್ಚು ಹೊಳೆಯನ್ನು ಎರಡು ಪಕ್ಷಗಳು ಜಿದ್ದಿಗೆ ಬಿದ್ದು ಹರಿಸಿದ್ದಾರೆ ಎನ್ನಲಾಗುತ್ತದೆ. ಬಿಜೆಪಿಯನ್ನು ಮೀರಿಸುವಂತೆ ಕಾಂಗ್ರೆಸ್ ಹಣ ಖರ್ಚು ಮಾಡಿದೆ ಹೇಳಲಾಗುತ್ತಿದೆ. ಹಿಂದೆ ತುಕಾರಾಮ್ ಅವರಿಗೆ ಬಂದಿದ್ದ ಮತಗಳು ಮತ್ತು ಗೆಲುವಿನ ಅಂತರ ಈ ಬಾರಿ ಅವರ ಪತ್ನಿ ನಿಂತಾಗ ಬಂದಿಲ್ಲ. ಇದು ಕಾಂಗ್ರೆಸ್ಸಿಗೆ ಎಚ್ಚರಿಕೆಯ ಗಂಟೆಯೂ ಹೌದು. ಜನ ತುಕಾರಾಂ ಅವರ ಒಟ್ಟು ಅವಧಿಯಲ್ಲಿ ಅನೇಕ ಬ ರವಸೆಗಳನ್ನುಇರಿಸಿಕೊಂಡಿದ್ದರು. ಬಹುತೇಕ ಅವು ಹಾಗೆಯೇ ಉಳಿದಿರುವಾಗ, ಈ ಗೆಲುವು ಅವರ ಸಾಧನೆಗಳಿಗೆ ಸಂದ ಫಲ ಎಂದು ಬೋಳಾಗಿ ಭಾವಿಸಿದರೆ ಅದು ಮೂರ್ಖತನವಾದೀತು.

ಹಾಗೆ ಚನ್ನಪಟ್ಟಣದಲ್ಲಿ ಬಿಜೆಪಿ ಪಕ್ಷದ ಎಲ್ಲಾ ನಾಯಕರು ಮೈತ್ರಿಕೂಟವಾದ ಜೆಡಿಎಸ್ಸಿಗೆ ಪೂರ್ಣ ಪ್ರಮಾಣದಲ್ಲಿ ಶ್ರಮಿಸಿಲ್ಲ ಎನ್ನುವುದು ವಿಶೇಷವಾಗಿ ಯಡಿಯೂರಪ್ಪನವರ ಬಣ ಜೆಡಿಎಸ್ಸಿನ ಅಭ್ಯರ್ಥಿಗೆ ಬೆಂಬಲಿಸಿದಾಗ ಆರ್.ಎಸ್.ಎಸ್. ಮತ್ತು ಬಿಜೆಪಿಯಲ್ಲಿನ ಇನ್ನೊಂದು ಬಡ ತದ್ವಿರುದ್ಧವಾಗಿ ವರ್ತಿಸಿದೆ ಎನ್ನಲಾಗುತ್ತಿದೆ. ಉಪಚುನಾವಣೆಯಲ್ಲಿ ಬಿಜೆಪಿ ಸೋತರೆ ಅದು ವಿಜಯೇಂದ್ರ ಯಡಿಯೂರಪ್ಪ ಅವರಿಗೆ ನೀಡುವ ಸರಿಯಾದ ಪೆಟ್ಟು ಎಂದು ಇನ್ನೊಂದು ಬಣ ಯೋಚಿಸಿದೆ. ಶಾಸಕ ಬಸವರಾಜ ಪಾಟೀಲ್ ಯತ್ನಾಳ್ ಒಳಗೊಂಡಂತೆ ಆ ಗುಂಪು ಇಲ್ಲಿ ನಿಖಿಲ್ ಗೆ ಸಹಾಯ ಮಾಡಿಲ್ಲ ಎನ್ನಲಾಗುತ್ತಿದೆ. ಶಿಗ್ಗಾಂವಿ ಕ್ಷೇತ್ರದಲ್ಲಿಯೂ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ನಿಲ್ಲಿಸಿ ಕಾಂಗ್ರೆಸ್ ಗೆದ್ದಿರುವುದು ಗಮನಿಸಬೇಕಾದ ಮುಖ್ಯ ಅಂಶ. ಆದರೆ ಅಲ್ಲಿ ಕಾಂಗ್ರೆಸ್ ನಾಯಕರಲ್ಲಿ ಮೂಡಿದ ಒಗ್ಗಟ್ಟು ಮತ್ತು ಅಹಿಂದ ಮತಗಳ ಗಟ್ಟಿಯಾದ ಕ್ರೋಡೀಕರಣ, ಜೊತೆಗೆ ಪಂಚಮಸಾಲಿ ಲಿಂಗಾಯಿತರ ಬೆಂಬಲದ, ಕಾಂಗ್ರೆಸ್ಸಿಗೆ ಪೂರಕವಾಗಿ ಒಲಿದು ಬಂದಿರುವುದು ಕೂಡ ಗೆಲುವಿನಲ್ಲಿ ಮಹತ್ವದ ಅಂಶಗಳು ಎನ್ನಲಾಗುತ್ತಿದೆ. ಅಂತೂ ಈ ಮೂರು ಕ್ಷೇತ್ರಗಳನ್ನು ಈ ಬಾರಿ ಚುನಾವಣೆಯಲ್ಲಿ ಹಣದ ಹಂಚಿಕೆ ಅತಿರೇಕದಲ್ಲಿ ನಡೆದಿರುವುದು ದೊರೆತ ವರದಿಗಳಿಂದ ಸ್ಪಷ್ಟವಾಗುತ್ತದೆ.

ಈ ಫಲಿತಾಂಶದಿಂದ ಕಾಂಗ್ರೆಸ್ ಅತಿಯಾಗಿ ಬೀಗ ಬೇಕಾಗಿಲ್ಲ. ಇಲ್ಲಿ ಹಲವರು ಪಾಠಗಳನ್ನು ಕೂಡ ಕಲಿಯುವುದು ಇದೆ ಎನ್ನುವುದನ್ನು ಗಮನಿಸಬೇಕು. ವಿರೋಧ ಪಕ್ಷವಾಗಿರುವ ಬಿಜೆಪಿಯು ನಿರಂತರವಾಗಿ ಸಿದ್ದರಾಮಯ್ಯ ನವರ ಮೇಲೆ, ಕಾಂಗ್ರೆಸ್ ಪಕ್ಷ ಹಾಗೂ ಕಾಂಗ್ರೆಸ್ ಸರ್ಕಾರದ ಮೇಲೆ ಸತತವಾದ ದಾಳಿಯನ್ನು ನಡೆಸುತ್ತಿದೆ. ಮತ್ತು ತೀವ್ರವಾಗಿ ಅಪಪ್ರಚಾರ ನಡೆಸುತ್ತಿದೆ. ಗ್ಯಾರಂಟಿಗಳನ್ನು ಹೊರತು ಪಡಿಸೊದರೆ ಕಾಂಗ್ರೆಸ್ ಸರ್ಕಾರ ಇಲ್ಲಿಯವರೆಗೂ ಹೇಳಿಕೊಳ್ಳಬಹುದಾದ ಅತಿ ಮಹತ್ವದ ಜನಪರ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ಭೂಮಿ, ಭೂಸ್ವಾಧೀನದ ಪ್ರಶ್ನೆಗಳು ಹಾಗೆ ಉಳಿದಿವೆ. ವಸತಿಯ ಪ್ರಶ್ನೆ ಬರೀ ಪ್ರಚಾರ. ರಾಜ್ಯದಲ್ಲಿ ಸರ್ಕಾರದ ಆಡಳಿತದಲ್ಲಿ ಭ್ರಷ್ಟಾಚಾರ ಕಡಿಮೆ ಆಗಿರುವುದು ಕಂಡು ಬರುತ್ತಿಲ್ಲ ಬದಲಿಯಾಗಿ ಎಗ್ಗಿಲ್ಲದೆ ನಡೆಯುತ್ತಿದೆ. ರೇಷನ್ ಕಾರ್ಡುಗಳ ನಿರ್ಬಂಧ, ರೇಷನ್ ಕಡಿತ ದಂತಹ ಅನೇಕ ಅವಾಂತರಗಳು ಜನತೆಯಲ್ಲಿ ಬೇಸರವನ್ನು ಉಂಟು ಮಾಡಿದೆ. ಇದರ ದೀರ್ಘಾವಧಿ ಪರಿಣಾಮಗಳನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು. ತನ್ನ ಧೋರಣೆ ಯನ್ನು ಬದಲಿಸಿಕೊಳ್ಳಬೇಕು.

ಬಿಜೆಪಿ ಬಣಗಳ ಬಡಿದಾಟದ ಹಿಂದೆ

ಈ ಚುನಾವಣಾ ಫಲಿತಾಂಶದ ಬಳಿಕ ಕಾಂಗ್ರೆಸ್ ಸರ್ಕಾರ ಉರುಳುತ್ತದೆ ನೂರಕ್ಕೆ, 200% ಸತ್ಯ ಎಂದು ಭವಿಷ್ಯವನ್ನು ಹೇಳುತ್ತಿದ್ದ ಬಿಜೆಪಿ ನಾಯಕರೇ ಈಗ ಬಿಜೆಪಿ ಪಕ್ಷವೇ ಎರಡು ಹೋಳಾಗುವುದರತ್ತ ಸಾಗುತ್ತಿದೆ. ಮುಖ್ಯವಾಗಿ, ಶಾಸಕ ಬಸವರಾಜ ಪಾಟೀಲ್ ಯತ್ನಾಳ ಅವರು ಚುನಾವಣೆಯ ಸಂದರ್ಭದಲ್ಲಿ ಮತ್ತು ನಂತರದಲ್ಲಿ ಭಾರಿ ದಾಳಿಯನ್ನು ವಿಜಯೇಂದ್ರ ಮತ್ತು ಯಡಿಯೂರಪ್ಪನವರ ಮೇಲೆ ನಡೆಸುತ್ತಿದ್ದಾರೆ. ಚುನಾವಣೆಯ ನಂತರ ಬಿಜೆಪಿ ಅದ್ಯಕ್ಷ ಬಿ.ವೈ.ವಿಜೆಯೇಂದ್ರ ಪಕ್ಷದ ನಾಯಕತ್ವಸಿಂದ ಬದಲಾಗುವುದು ಖಚಿತ ಎಂದು ಘಂಟಾಘೋಷವಾಗಿ ಹೇಳುತ್ತಿದ್ದರು.ಅವರನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ವಕ್ಫ್ ಆಸ್ತಿ ವಿವಾದವನ್ನು ಕೈಗೆತ್ತಿಕೊಂಡು ಯತ್ನಾಳ್ ಬೀದರ್ ನಿಂದ ರಾಜ್ಯದಲ್ಲಿ ಜಾಥಾವನ್ನು ಆರಂಭಿಸಿದ್ದಾರೆ. ಮತ್ತು ಎಲ್ಲಾ ಕಡೆಗಳನ್ನು ವಿಜಯೇಂದ್ರ ಯಡಿಯೂರಪ್ಪನವರ ಮೇಲೆ ಭ್ರಷ್ಟಾಚಾರದ ಮತ್ತು ದುರ್ವ್ಯವಹಾರಗಳ ಬಗ್ಗೆ ಸತತವಾಗಿ ಪ್ರಚಾರ ನಡೆಸುತ್ತಿದ್ದಾರೆ. ಈ ಬೆಳವಣಿಗೆಗಳಿಂದ ಕುಪಿತಗೊಂಡಿರುವ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರು, ಅವರ ಬಣ ಹೈಕಮಾಂಡ್ ಗೆ ದೂರನ್ನು ನೀಡಿದೆ. ಎಗ್ಗಿಲ್ಲದೇ ದಾಳಿ ನಡೆಸುತ್ತಿರುವ ಯತ್ನಾಳರನ್ನು ಉಚ್ಚಾಟಿಸಬೇಕು ಎಂದು ಒತ್ತಾಯಿಸಿದೆ. ತಮ್ಮ ಬಲವನ್ನ ತೋರಿಸಲು ಬಹುದೊಡ್ಡ ರ್‍ಯಾಲಿ ಒಂದನ್ನ ನಡೆಸಲು ಯೋಜಿಸುತ್ತಿದೆ. ಇವು ಮೇಲ್ನೋಟದಲ್ಲಿ ಎರಡು ಬಣಗಳ ಬಡಿದಾಟ ಎನ್ನುವಂತೆ ಕಂಡುಬಂದರೂ ವಾಸ್ತವದಲ್ಲಿ ಹಿಂದೆ ಪ್ರಬಲ ಹಲವರಿದ್ದಾರೆ. ಬಿಜೆಪಿಯ ಹೈಕಮಾಂಡ್ ಗೆ ಯಡಿಯೂರಪ್ಪನವರ ಬಣ ಮುಂದುವರೆಯುವುದು ಅಥವಾ ಬಲಗೊಳ್ಳುವುದು ಬೇಕಾಗಿಲ್ಲ. ಅದರಲ್ಲೂ ವಿಶೇಷವಾಗಿ ಆರ್.ಎಸ್.ಎಸ್.ನ ನಾಯಕರಿಗೆ ಖಂಡಿತವಾಗಿಯೂ ಯಡಿಯೂರಪ್ಪ ಮುಂದುವರಿಯುವುದು ಮತ್ತು ಪಕ್ಷದಲ್ಲಿ ಉನ್ನತ ಸ್ಥಾನದಲ್ಲಿ ಮುಂದುವರೆಯುವುದು ಇಷ್ಟವಿಲ್ಲ. ಸಂಸತ್ತಿನ ಚುನಾವಣೆಯಲ್ಲಿ ಇವರ ಪ್ರಭಾವ ಲಾಭ ಬೇಕಾಗಿತ್ತು. ಹೇಗಾದರೂ ಈ ಗುಂಪನ್ನು ಮೂಲೆಗೆ ತಳ್ಳಬೇಕು ಎಂದು ಸತತವಾಗಿ ಪ್ರಯತ್ನ ನಡೆಸಿಕೊಂಡು ಬಂದಿರುವ ಆರ್.ಎಸ್.ಎಸ್. ಬೆಂಬಲಿತ ಬಿಜೆಪಿ ನಾಯಕ ಗಣ ಈಗ ಅತ್ಯಂತ ಅಕ್ರಮಣಕಾರಿಯಾಗಿ ದಾಳಿಯನ್ನು ನಡೆಸುತ್ತಿದೆ. ಬಸವರಾಜ ಪಾಟೀಲ್ ಯತ್ನಾಳ್ ಮತ್ತು ಅವರ ಗುಂಪಿನ ಹಿಂದೆ ಆರ್.ಎಸ್.ಎಸ್ಸಿನ ಆಶೀರ್ವಾದ ಇದೆ, ಇಲ್ಲವಾದರೆ ಆ ಮಟ್ಟದಲ್ಲಿ ದಾಳಿಯನ್ನು ನಡೆಸಲು ಸಾಧ್ಯವಿರಲಿಲ್ಲ. ವಿಜಯೇಂದ್ರ ಅವರ ದೂರಿನ ಬಳಿಕ ಬಿಜೆಪಿ ಹೈಕಮಾಂಡ್ ಶಿಸ್ತು ಸಮಿತಿ ಯತ್ನಾಳರಿಗೆ ಶೋಕಾಸ್ ನೋಟೀಸ್ ನೀಡಿದ್ದನ್ನು ಉಪೇಕ್ಷೆ ಮಾಡಿದರು. ದೆಹಲಿಗೆ ಮಾತುಕತೆ ಗೆ ಕರೆದರೆ ಹೋಗುವುದಿಲ್ಲ ಎಂದರು. 'ಹರಕು ಬಾಯಿ' ಪಕ್ಷಕ್ಕೆ ಹಾನಿ ಮಾಡುತ್ತಿರುವುದರಿಂದ ಉಚ್ಚಾಟಿಸಬೇಕು ಎಂಬ ಯಡಿಯೂರಪ್ಪ ಬಣದ ಬೇಡಿಕೆಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಪ್ರಹ್ಲಾದ ಜೋಷಿ ಅಂತಹ ಕ್ರಮ ಸರಿಯಲ್ಲ ಎಂದು ಅಮಿತ್ ಶಾ ಗೆ ಹೇಳಿದ್ದಾರಂತೆ. ಜೋಷಿ ಯನ್ನೇ ಮುಖ್ಯಮಂತ್ರಿ ಮಾಡಬೇಕು ಎನ್ನುವ ಯೋಜನೆ ಸಂಘಕ್ಕೆ ಇದೆ ಎನ್ನಲಾಗುತ್ತಿದೆ. ಕಾಂಗ್ರೆಸ್ ಮೇಲೆ ಆಪರೇಷನ್ ಮಾಡಿದ ಮೇಲೆ ಮುಖ್ಯಮಂತ್ರಿ ಯಾರನ್ನು ಮಾಡಬೇಕು ಎನ್ನುವುದರ ಸುತ್ತ ಈ ಬೆಳವಣಿಗೆಗಳು ಇರಲೂಬಹುದು. ಹೀಗಾಗಿ ಯಡ್ಯೂರಪ್ಪ ಮತ್ತು ವಿಜಯೇಂದ್ರ ಅವರನ್ನು ಈ ಬಣವನ್ನು ಮೂಲೆಗೆ ತಳ್ಳುವ ನಿರ್ಧಾರ ಇರುವುದು ಸ್ಪಷ್ಟ. ಹಾಗಾಗಿ ತನ್ನ ಕಾರ್ಯ ಯೋಜನೆಗೆ ಯಾರನ್ನೆಲ್ಲ ಬಳಸುವುದು ಹೇಗೆ ಇದನ್ನ ತಾರ್ಕಿಕಾಂತಕ್ಕೆ ಕೊಂಡಯುವುದು ಎನ್ನುವುದರ ಬಗ್ಗೆ ಅಂತರಂಗದಲ್ಲಿ ಕಾರ್ಯ ಯೋಜನೆ ಅಡಗಿಸಿಕೊಂಡು ಕ್ರಿಯಾ ರಂಗಕ್ಕೆ ಬಿಜೆಪಿ ನಾಯಕರು ಇಳಿದಂತಿದೆ.

ಭಾರತದ ಕೈಗಾರಿಕಾ ಬೆಳವಣಿಗೆಗೆ ಜಾತಿಯ ತೊಡಕು..... ಪುಟ 2 ರಿಂದ

ಉತ್ತಮಗೊಳ್ಳುವ ಸಾಧ್ಯತೆಗಳೂ ಉಂಟಾದವು. ಉಪಕರಣಗಳು ಮಾತ್ರ ಸಾವಿರಾರು ವರ್ಷದಿಂದ ಬಳಕೆಯಲ್ಲಿದ್ದವುಗಳೇ. ಜಾತಿ ಉಪಜಾತಿಯೊಳಗೆ ಮದುವೆಗಳು ಎಂಬ ಕಾರಣ ಆಯಾ ಜಾತಿಗಳಲ್ಲಿ ಗಂಡಸರು, ಹೆಂಗಸರು, ವಿವಿಧ ವಯಸ್ಸಿನ ಮಕ್ಕಳು ಕೂಡಾ ಏನು ಮಾಡಬೇಕು ಎಂಬ ಕೆಲಸದ ವಿಭಜನೆಯೂ ಪರಂಪರಾಗತವಾಗಿ ಯಾಂತ್ರಿಕವಾಗಿ ಬಿಡುತ್ತಿತ್ತು.

ಇಂತಹ ವಿಭಜನೆ ಒಂದೇ ರೀತಿಯ ಕೌಶಲ್ಯ ಅಗತ್ಯವಿರುವ ಬೇರೆ ಬೇರೆ ಜಾತಿಗಳ ನಡುವೆ, ಬೇರೆ ಬೇರೆ ಕೌಶಲ್ಯ ಅಗತ್ಯವಿರುವ ಬೇರೆ ಬೇರೆ ಜಾತಿಗಳ ನಡುವೆ ತಿಳುವಳಿಕೆಯ ವಿನಿಮಯ, ಅವರ ಉಪಕರಣಗಳನ್ನು ಇವರು ಅಳವಡಿಸಿಕೊಳ್ಳುವ ಚಿಂತನೆಯ ಸಾಧ್ಯತೆಗಳೇ ಕಾಣುತ್ತಿರಲಿಲ್ಲ.

ವೃತ್ತಿಯ ಜ್ಞಾನವನ್ನು ವರ್ಗಾಯಿಸುವುದು ಸಾಧ್ಯವಿರಲಿಲ್ಲ

ಇಂತಹ ಪರಿಸ್ಥಿತಿಗೆ ಮುಖ್ಯವಾಗಿ ಎಲ್ಲ ಜಾತಿಗಳೂ ಕೀಳು ಎಂದು ಪರಿಗಣಿಸಿದುದರಿಂದ ಅವರಿಗೆ ಅಕ್ಷರಾಭ್ಯಾಸ ನಿರಾಕರಿಸಲಾಗಿತ್ತು. ಅದರಿಂದಾಗಿ ಒಂದು ತಲೆಮಾರು ತನ್ನ ವೃತ್ತಿಯಲ್ಲಿ ತಾನು ಪಡೆದ ಅರಿವನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುವುದು ಸಾಧ್ಯವಿರಲಿಲ್ಲ. ಕಣ್ಣಿನಿಂದ ತಾವೇ ನೋಡಿದ ಕೌಶಲ್ಯ ವರ್ಗಾವಣೆಯಾಗುತ್ತಿತ್ತೇ ಹೊರತು ಆ ವೃತ್ತಿಯ ಜ್ಞಾನವಲ್ಲ. ಆ ವೃತ್ತಿಗಳಲ್ಲಿ ಒಂದು ಪ್ರದೇಶದಲ್ಲಿ ಬೆಳೆದು ಬಂದ ಜ್ಞಾನ ಮತ್ತೊಂದು ಪ್ರದೇಶಕ್ಕೆ ತಲುಪುವ ಸಾಧ್ಯತೆಗಳು ಬಹಳ ಕಡಿಮೆ. ಸಾಮಾನ್ಯ ಕೂಡು ಕಳೆಯುವುದರ ಹೊರತಾದ ಗಣಿತ, ಅಳತೆಗಳು, ಅವಶ್ಯವಿರುವ ರೇಖಾಗಣಿತ (ಜ್ಯಾಮಿತ್ರಿ) ಉಪಕರಣಗಳ ಡಿಸೈನ್ಗಳನ್ನು ಚಿತ್ರಿಸುವುದು, ಅದರ ಬಗ್ಗೆ ಚಿಂತಿಸುವುದು ಇಂತಹ ಅತ್ಯಗತ್ಯ ಪ್ರಕ್ರಿಯೆಗಳಲ್ಲಿ ಅವರು ತೊಡಗುವ ಸಾಧ್ಯತೆಗಳನ್ನು ಶಿಕ್ಷಣದ ನಿರಾಕರಣೆಯಿಂದ ಕಿತ್ತುಕೊಳ್ಳಲಾಗಿತ್ತು.

ಮೇಲೆ ಉಲ್ಲೇಖಿಸಿದ ಬ್ರಿಟನ್ನಲ್ಲಾದ – ಸ್ಪಿನ್ನಿಂಗ್ ಜೆನ್ನಿ, ಜಲ ಶಕ್ತಿಯನ್ನು ಬಳಸುವ ನೂಲು ಯಂತ್ರ, ಉಗಿಯಂತ್ರದ ಶೋಧಗಳಿಗೆ ಒಬ್ಬ ವ್ಯಕ್ತಿಯೇ ನೂಲುವ, ಬಡಗಿಯ, ಲೋಹ ಕೆಲಸಗಾರನ ಕೌಶಲ್ಯಗಳನ್ನು ಪಡೆದಿರುವುದು ಅತ್ಯಗತ್ಯ. ಅವುಗಳನ್ನು ಬಳಸಿ ಹೊಸ ಶೋಧದ ಭಾಗಗಳನ್ನು ತಾನೇ ರಚಿಸುವುದು, ಸರಿಯಲ್ಲವೆಂಬುದನ್ನು ಬಿಸಾಡಿ ಹೊಸದಾಗಿ ಮಾಡಿಕೊಳ್ಳುವುದು ಇಂತಹ ಪ್ರಯೋಗಗಳಿಲ್ಲದೆ ಈ ಶೋಧಗಳು ಸಾಧ್ಯವೇ? ಒಬ್ಬ ಟೈಲರ್ ಕ್ಷೌರಿಕನಾಗಿ ತರಬೇತಿ ಪಡೆದು, ಅದರಲ್ಲಿ ಹೊಸ ವಿಧಾನ ರೂಪಿಸಿ, ನಂತರ ನೂಲುವ ಕೆಲಸಕ್ಕೆ ಮರಳುವುದನ್ನು ಭಾರತದಲ್ಲಿ ಊಹಿಸಲಾದರೂ ಸಾಧ್ಯವೇ?! ಜೇಮ್ಸ್ ವಾಟ್ನಂತಹ ಹಡಗು ಕಟ್ಟುವವನು, ಗಡಿಯಾರ, ಸೂಕ್ಷ್ಮ ಉಪಕರಣ ತಯಾರಿಸುವವನಾಗುವುದು, ವಿಶ್ವ ವಿದ್ಯಾಲಯದಲ್ಲಿ ಕೆಲಸ ಮಾಡುವುದು, ಭೌತಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞರ ಒಡನಾಟ, ಲೋಹ ಕುಶಲಿಯ ಜೊತೆಗೂಡಿ ಕೆಲಸ ಮಾಡುವುದು??!! ಇಂತಹ ಸಾಧ್ಯತೆಗಳನ್ನು ಭಾರತದ ಜಾತಿ ಪದ್ಧತಿ ನಿರಾಕರಿಸಿತು.

ಹೊಸ ಶೋಧಗಳ ಸಾಧ್ಯತೆಯನ್ನು ಕುಗ್ಗಿಸಿತು

ಹೀಗೆ ಜಡ್ಡುಗಟ್ಟಿದ ಪರಿಸ್ಥಿತಿ ಹೊಸ ತಿಳುವಳಿಕೆ ಮೂಡುವ, ಹೊಸ ಶೋಧಗಳ ಸಾಧ್ಯತೆಯನ್ನು ಕುಗ್ಗಿಸಿತು. ಜೊತೆಗೆ ಇಂತಹ ಶೋಧಗಳು ಹಲವಾರು ತಿಂಗಳುಗಳ ಕೆಲಸ, ಉಪಕರಣಗಳನ್ನು ಮಾಡುವುದು, ಬಿಸಾಡುವುದು ಮತ್ತೆ ಹೊಸದಾಗಿ ಮಾಡುವುದು ಮೊದಲಾದವುಗಳಿಗೆ ಹಣ ಬೇಕು. ಆದರೆ ನಮ್ಮ ದೇಶದ ಜಾತಿ ಪದ್ಧತಿಯ ಕಾರಣ ಇವರೆಲ್ಲ ಕೀಳು ಜಾತಿ. ಹಳ್ಳಿಗಳಲ್ಲಿ ಅವರು ಆಯಗಾರರು. ಅಂದರೆ ವರ್ಷಕ್ಕೊಮ್ಮೆ ಸುಗ್ಗಿಯಲ್ಲಿ ಒಂದಿಷ್ಟು ಧಾನ್ಯ ಮಾತ್ರ ಅವರ ಕೂಲಿ. ಪಟ್ಟಣಗಳಲ್ಲಿಯೂ ಒಬ್ಬ ಮಾಂಡಲಿಕ ಅಥವಾ ರಾಜನ ಅಧೀನದಲ್ಲಿ ಅವನಿಗೆ ಬೇಕಾದ ಕತ್ತಿ ಮೊದಲಾದ ಉಪಕರಣ ತಯಾರು ಮಾಡಿ ಕೊಡುವವರು. ಅವನಿಂದ ಒಂದಿಷ್ಟು ಧಾನ್ಯ ಅಥವಾ ಊಟ ಇವರ ಕೂಲಿ. ಸ್ವತಂತ್ರವಾಗಿ ಉಪಕರಣಗಳನ್ನು ತಯಾರು ಮಾಡಿ ಮಾರುಕಟ್ಟೆಯಲ್ಲಿ ಮಾರಿ ಹಣ ಪಡೆಯುವ ಸ್ವಾತಂತ್ರ್ಯವಿಲ್ಲ. ಎರಡು ಹೊತ್ತಿನ ಊಟಕ್ಕೂ ಕಷ್ಟ. ಇನ್ನು ಅವರ ಮನೆಗಳು ಗುಡಿಸಲುಗಳು ಅಥವಾ ಅಂತಹವೇ ಮಣ್ಣಿನ ಮನೆಗಳು, ಅವರು ವಾಸ ಮಾಡುವ ಕೇರಿ, ಬೀದಿಗಳೋ ಇಡಿಕಿರಿದು ತುಂಬಿದವು. ಶೋಧಗಳನ್ನು ಕೈಗೊಳ್ಳಲು ಅಗತ್ಯವಾದ ಸಮಯ, ಹಣ ಮೊದಲಾದ ಸಂಪನ್ಮೂಲಗಳು ಲಭ್ಯವಿಲ್ಲ.

ಹದಿನೇಳು, ಹದಿನೆಂಟನೆಯ ಶತಮಾನಗಳಲ್ಲಿ ವ್ಯಾಪಾರ,ವಾಣಿಜ್ಯವೇಗವಾಗಿ ಬೆಳೆಯಲಾರಂಭಿಸಿದಾಗ ಬ್ರಿಟನ್ನಲ್ಲಿಯೂ, ಭಾರತದಲ್ಲಿಯೂ ವ್ಯಾಪಾರಿ ಬಂಡವಾಳ ಅಪರಿಮಿತವಾಗಿ ಬೆಳೆಯಲಾರಂಭಿಸಿತು. ಎರಡೂ ದೇಶಗಳಲ್ಲಿನ ವ್ಯಾಪಾರಗಾರರಲ್ಲಿ ಅಪಾರ ಸಂಪತ್ತು ಶೇಖರವಾಯಿತು. ಆದರೆ ಈ ಜಾತಿ ವ್ಯವಸ್ಥೆ, ಮೇಲು ಕೀಳು ಇದೆಯಲ್ಲ ಅದು ದೊಡ್ಡ ವ್ಯತ್ಯಾಸ ತಂದಿತು. ಬ್ರಿಟನ್ನಿನಲ್ಲಿ ಕುಶಲಕರ್ಮಿಗಳಲ್ಲಿ ಕೆಲವರು ತಮ್ಮ ಉತ್ಪಾದನೆಯನ್ನು ಮಾರುಕಟ್ಟೆಯಲ್ಲಿ ಮಾರಿ ಒಂದಿಷ್ಟು ಹಣ ಗಳಿಸಿದರು. ಅವರು ಬೇರೆ ಕುಶಲಕರ್ಮಿಗಳನ್ನು ನೇಮಿಸಿಕೊಂಡು ಮಾಸ್ಟರ್ ಕ್ರಾಫ್ಟ್ಮನ್ಗಳಾದರು. ಬೇರೆ ಕುಶಲ ಕರ್ಮಿಗಳ ತಯಾರಿಕೆಗಳನ್ನು ಕೊಂಡು ತಾವೇ ವ್ಯಾಪಾರಗಾರರಾದರು. ವ್ಯಾಪಾರಿ ಬಂಡವಾಳ ಅವರಲ್ಲಿಯೂ ಶೇಖರವಾಯಿತು. ಇದು ಒಂದು ದೊಡ್ಡ ಕ್ರಾಂತಿಕಾರಿ ಬೆಳವಣಿಗೆ. ಏಕೆಂದರೆ ಅವರು ಸ್ವತಃ ತಾವು ಮಾರುವ ವಸ್ತುಗಳ ತಯಾರಿಕೆಯ ಎಲ್ಲ ಹಂತಗಳ ಪ್ರಕ್ರಿಯೆಗಳೂ ಕರಗತವಾಗಿತ್ತು. ಅವುಗಳನ್ನು ಉತ್ಪಾದನೆಯ ಹೆಚ್ಚಳದ ತುರ್ತು ಅವಶ್ಯಕತೆಗಳಿಗೆ ಉತ್ತಮಪಡಿಸಿಕೊಳ್ಳಲು, ಮಾರುಕಟ್ಟೆಯ ಬೇಡುವ ಗುಣಮಟ್ಟ, ಅಭಿರುಚಿಯ ಅಗತ್ಯಗಳಿಗೆ ತಕ್ಕಂತೆ ಮಾರ್ಪಾಟು ಮಾಡಿಕೊಳ್ಳುವ ತಿಳುವಳಿಕೆ ಹೊಂದಿದ್ದರು.

ಬ್ರಿಟನ್ ವ್ಯಾಪಾರಗಾರರ ಕೂಟಗಳಲ್ಲಿ ಕೆಲವೊಮ್ಮೆ ಇಂತಹ ಕುಶಲಕರ್ಮಿ ಗಳನ್ನು ಸೇರಿಸಿಕೊಳ್ಳಲ್ಪಟ್ಟರು. ಬಹಳ ವರ್ಷಗಳಿಂದ ಬ್ರಿಟನ್ನ ವ್ಯಾಪಾರಿಗಳೂ ಭಾರತದ ವ್ಯಾಪಾರಿಗಳಂತೆ ಕುಶಲಕರ್ಮಿಗಳಿಗೆ ಸಾಲ, ಕಚ್ಚಾ ವಸ್ತುಗಳನ್ನು ಒದಗಿಸುವುದು, ಅವರ ತಯಾರಿಕೆಗಳನ್ನು ಕೊಳ್ಳುವುದು ಇಷ್ಟಕ್ಕೇ ಸೀಮಿತವಾಗಿದ್ದರು. ಆದರೆ ವಸ್ತುಗಳಿಗೆ ಮಾರುಕಟ್ಟೆ ವಿಸ್ತಾರವಾದಂತೆ, ಹೊಸ ಯಂತ್ರಗಳ ಶೋಧವಾದಂತೆ ತಮ್ಮ ಭೂಮಿ, ಆಭರಣಗಳನ್ನು ಮಾರಿ ನೇರವಾಗಿ ಉತ್ಪಾದನೆಯಲ್ಲಿ ತೊಡಗಿದರು. ಕೈಗಾರಿಕಾ ಬಂಡವಾಳಗಾರರಾದರು. ಉತ್ಪಾದನೆಯ ವಿಧಾನಗಳನ್ನು ಉತ್ತಮಪಡಿಸುವುದರಲ್ಲಿ ಆಸಕ್ತಿ ವಹಿಸಿದರು.

ವೈಶ್ಯ ಮೇಲ್ಮೆ, ಕುಶಲಕರ್ಮಿಗಳ ಕೀಳಿರಿಮೆ

ಆದರೆ ಭಾರತದಲ್ಲಿ ಮಾರವಾಡಿ ಮತ್ತಿತರ ವೈಶ್ಯ ವ್ಯಾಪಾರಿಗಳ ಮೇಲ್ವರ್ಣದ ಮೇಲ್ಮೆಯ ಅಹಂ ಕುಶಲಕರ್ಮಿಗಳನ್ನು ಒಂದೆಡೆ ತಂದು ಉತ್ಪಾದನೆಯಲ್ಲಿ ತೊಡಗುವುದು, ಉತ್ಪಾದನೆಯ ಪ್ರಕ್ರಿಯೆಗಳನ್ನು ಉತ್ತಮಪಡಿಸುವುದರಲ್ಲಿ ಆಸಕ್ತಿ ವಹಿಸುವುದು ಇಂತಹ ಕೆಲಸಗಳು ತಮ್ಮಂತಹವರಿಗಲ್ಲ ಎಂದು ಭಾವಿಸಿತು. ಕೇವಲ ಕುಶಲಕರ್ಮಿಗಳನ್ನು ಹಿಂಡಿ ಅತ್ಯಂತ ಕಡಿಮೆ ಬೆಲೆಗೆ ಅವರ ತಯಾರಿಕೆಗಳನ್ನು ಕೊಂಡು, ಸಾಲ ನೀಡಿ, ದುಬಾರಿ ಬಡ್ಡಿ ಪಡೆದು ದುರ್ಲಾಭ ಗಳಿಸುವುದೇ ಗುರಿ ಎಂಬಂತೆ ವರ್ತಿಸಿದರು. ಕೇವಲ ಕೃಷಿ ಭೂಮಿ, ನಗರಗಳ ನಿವೇಶನಗಳು, ವಜ್ರ ವೈಢೂರ್ಯದ ಆಭರಣಗಳನ್ನು ಮೈ ತುಂಬಾ ಹೇರಿಕೊಳ್ಳುವ ಡಂಭಾಚಾರ ವೈಭೋಗದ ಜೀವನದಲ್ಲಿ ತಮ್ಮ ಸಂಪತ್ತನ್ನು ವ್ಯಯ ಮಾಡಿದರು.

ಹೀಗೆ ಜಾತಿ ವ್ಯವಸ್ಥೆ ಭಾರತ, ಬ್ರಿಟನ್ನ ಜೊತೆ ಹೆಗಲೆಣೆಯಾಗಿ ಉತ್ತಮ ಶೋಧಗಳನ್ನು ಮಾಡುವ ಸಾಧ್ಯತೆಗಳನ್ನು ಇಲ್ಲವಾಗಿಸಿತು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ನಂತರ ಬ್ರಿಟನ್ನಿಂದ ದುಬಾರಿ ಬೆಲೆ ತೆತ್ತು, ಹೊಸ ಯಂತ್ರಗಳ ಆಮದು ಮಾತ್ರವೇ ಭಾರತದ ಕೈಗಾರಿಕಾ ಬೆಳವಣಿಗೆಯ ಸಾಧನವಾಯಿತು.

NEW No. MAG(3)/NPP/205/2021-2022
JANASHAKTHI KANNADA VARA PATRIKE December 2-8, 2024 Price: Rs. 10/- Date of Publication: 29 November 2024 RNI No. KARKAN /2006/17926 Posted on 4-12-2024
Posted at BG PSO, BG - 560026 **Posted at Periodical Rate -** Rs. 2









ಕಳೆದುಕೊಳ್ಳುತ್ತಿರುವ ಅಮೆರಿಕಾದ ಸಾಮ್ರಾಜ್ಯಶಾಹಿ ಹಿಡಿತವನ್ನು ಮರುಸ್ಥಾಪಿಸಲು ಜಗತ್ತಿನ ಮೇಲೆ ಯುದ್ಧ: ವಿಚಾರ ಸಂಕಿರಣದಲ್ಲಿ ಅಭಿಮತ

ವರದಿ: ಆರ್. ರಾಮಕೃಷ್ಣ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಅಡಿಯ 'ಜನರಲ್ ಶಾಖೆ'ಯ ಸಮ್ಮೇಳನವು ನವೆಂಬರ್ 12, 2024 ರಂದು ನಡೆಯಿತು. ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನವೆಂಬರ್ 11, 2024ರಂದು "ಯುದ್ಧ ಯುದ್ಧ, ವಿಶ್ವ ಆಕ್ರಮಣಕ್ಕೆ ಕಾರ್ಪೋರೇಟ್ ಕಂಪನಿಗಳ ಸಂಚು" ಎಂಬ ವಿಷಯದ ಮೇಲೆ ಆನ್‌ಲೈನ್ ವಿಚಾರ ಸಂಕಿರಣವನ್ನು ಸಂಘಟಿಸಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಮುಖ ವಿಚಾರಗಳ ವರದಿ ಇಲ್ಲಿದೆ.

ಅಮೆರಿಕ ಹುಟ್ಟಿದ್ದೇ ಮೂಲನಿವಾಸಿಗಳ ನರಮೇಧದಿಂದ– ಡಾ. ಅಮರ್

ಮೊದಲಿಗೆ ದೀರ್ಘಕಾಲದಿಂದ ಅಮೆರಿಕದಲ್ಲಿ ನೆಲೆಸಿರುವ ಚಿಂತಕರು, ವೈದ್ಯರೂ ಆದ ಡಾ.ಅಮರ್ ಕುಮಾರ್ ಅವರು ಮಾತನಾಡಿದರು. ಪ್ರಪಂಚ ಇಂದು ಬೆಂಕಿಯ ಸ್ಥಿತಿಯಲ್ಲಿದೆ. ಯುದ್ಧಗಳು ಸಂಭವಿಸುತ್ತಿವೆ. ಯಾಕೆ ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕಿದೆ. ಅಮೆರಿಕ ಎಂಬ ದೇಶ ಹುಟ್ಟಿದ್ದೇ ಅಲ್ಲಿನ ಮೂಲನಿವಾಸಿಗಳ ನರಮೇಧದ ಮೂಲಕ. ಅಮೆರಿಕಕ್ಕೆ ಬಂದ ಯುರೋಪಿಯನ್ನರು ಪೆಸಿಫಿಕ್ ಸಮುದ್ರದಿಂದ ಅಟ್ಲಾಂಟಿಕ್ ಸಮುದ್ರದವರೆಗಿನ ಜಾಗವನ್ನು ವಶಕ್ಕೆ ಪಡೆಯಬೇಕು ಎಂಬ ಪ್ರಯತ್ನದಲ್ಲಿ ಅದು ಹುಟ್ಟಿದ್ದು. ಕೇವಲ ಬಿಲ್ಲು ಬಾಣಗಳಿದ್ದ ಆದಿವಾಸಿ ಇಂಡಿಯನ್ನರು ಗನ್ನುಗಳು ಹಾಗೂ ತುಪಾಕಿಗಳಿದ್ದ ಯೂರೋಪಿಯನ್ನರನ್ನು ಎದುರಿಸಲು ಸಾಧ್ಯವಾಗಲಿಲ್ಲ. ಯುರೋಪಿಯನ್ನರು ಹೊತ್ತು ತಂದ ಸಾಂಕ್ರಾಮಿಕ ರೋಗಗಳಿಗೆ ಪ್ರತಿರೋಧ ಶಕ್ತಿ ಇಲ್ಲದ್ದರಿಂದಲೂ ಜನರು ಸತ್ತರು. ನರಮೇಧ ಹತ್ಯಾಕಾಂಡಗಳು ತುಂಬಾ ಹಿಂದಿನ ಚರಿತ್ರೆಯಲ್ಲ. ಸಮಾರು 150 ವರ್ಷಗಳ ಹಿಂದೆಯೂ ಮೂಲ ನಿವಾಸಿಗಳ ನರಮೇಧ ನಡೆದಿದೆ. 1864ರಲ್ಲಿ 'ದಿ ಸ್ಯಾಂಡ್ ಕ್ರೀಕ್' ನರಮೇಧ ಎಂದು ಕರೆಯುವ ನರಮೇಧದಲ್ಲಿ ಕೊಲರಡೋ ಪ್ರಾಂತದಲ್ಲಿ ಸುಮಾರು 150 ಜನರನ್ನು, ಅದರಲ್ಲೂ ಹೆಚ್ಚಿನವರು ಆದಿವಾಸಿ ಮಹಿಳೆಯರು ಮತ್ತು ಮಕ್ಕಳನ್ನು ಕೊಂದು ಹಾಕಲಾಯಿತು.

ಅಮೆರಿಕ ದೇಶವಲ್ಲ, ಸಾಮ್ರಾಜ್ಯ

ಅಮೆರಿಕ ಒಂದು ದೇಶವಲ್ಲ, ಸಾಮ್ರಾಜ್ಯ ಎಂದು ಚಿಂತಕರು ಹೇಳುತ್ತಾರೆ. ಅಮೆರಿಕ ಒಂದು ಸಾಮ್ರಾಜ್ಯ. ಜಗತ್ತಿನ ಸುಮಾರು 80 ದೇಶಗಳಲ್ಲಿ ಅಮೆರಿಕದ ಸುಮಾರು 750 ಮಿಲಿಟರಿ ನೆಲೆಗಳಿವೆ. ಎರಡನೇ ವಿಶ್ವ ಮಹಾಯುದ್ಧ ಮುಗಿದು ಸುಮಾರು 80 ವರ್ಷಗಳಾಗಿವೆ. ಆದರೆ ಈಗಲೂ ಜಪಾನ್ ಮತ್ತು ಜರ್ಮನಿಯಲ್ಲಿ ಅಮೆರಿಕದ ಮಿಲಿಟರಿ ನೆಲೆಗಳಿವೆ. 'ಬಿಸಿನೆಸ್ ಆಫ್ ಅಮೆರಿಕನ್ ಪೀಪಲ್ ಇಸ್ ಒನ್ಲಿ ಬಿಸಿನೆಸ್' ಎಂಬ ಮಾತಿದೆ. ಅಮೆರಿಕ ವಿಯಟ್ನಾಂ ಮೇಲೆ ನಡೆಸಿದ ಯುದ್ಧದಲ್ಲಿ ಸುಮಾರು 20 ಲಕ್ಷ ಜನರು ಪ್ರಾಣ ತೆತ್ತರು.

ಕ್ರೂರ ಗುಲಾಮಗಿರಿ

ಜಗತ್ತಿನ ಬೇರೆ ಬೇರೆ ಭಾಗಗಳಂತೆ ಅಮೆರಿಕದಲ್ಲಿಯೂ ಗುಲಾಮಗಿರಿ ಇತ್ತು. ಆದರೆ ಅಮೆರಿಕದಲ್ಲಿ ಗುಲಾಮರ ಪರಿಸ್ಥಿತಿ ಬಹಳ ಕ್ರೂರವಾಗಿತ್ತು. ಆಫ್ರಿಕಾದಿಂದ ಕಪ್ಪು ಜನರನ್ನು ಪ್ರಾಣಿಗಳಂತೆ ಹಿಡಿದುಕೊಂಡು ತರಲಾಗುತ್ತಿತ್ತು. ಸುಮಾರು ಶೇ.33ರಷ್ಟು ಜನರು ಹಿಡಿದು ತರುವ ಮಾರ್ಗದಲ್ಲಿಯೇ ರೋಗಗಳಿಂದ, ವಾಂತಿ ಮಾಡಿಕೊಂಡು ಸತ್ತುಹೋಗುತ್ತಿದ್ದರು. ತನಗೆ ಗುಲಾಮಗಿರಿಯಿಂದ ಸ್ವಾತಂತ್ರ್ಯ ಪಡೆಯುವ ಹಕ್ಕಿದೆ ಎಂದು ಕೋರ್ಟಿನ ಮೊರೆ ಹೋದ ಡ್ರೆಡ್ ಸ್ಕೋಟ್‌ನ ಮನವಿಯನ್ನು ತಿರಸ್ಕರಿಸಿ, 1857ರಲ್ಲಿ 'ಕಪ್ಪು ಜನರು ಅಮೆರಿಕದ ನಾಗರೀಕರೇ ಅಲ್ಲ', ಹಾಗಾಗಿ ಅವರಿಗೆ ಸ್ವಾತಂತ್ರ್ಯದ ಹಕ್ಕಿಲ್ಲ ಎಂದು ಅಮೆರಿಕದ ಸುಪ್ರಿಂ ಕೋರ್ಟ್ ತೀರ್ಪು ನೀಡಿತು. ಅಬ್ರಹಾಂ ಲಿಂಕನ್ ಅವರು ಗುಲಾಮಗಿರಿಯ ವಿರುದ್ಧ ಹೋರಾಡಿದರೇ ಹೊರತು, ಅವರು ಕಪ್ಪು ಜನರು ಮತ್ತು ಬಿಳಿಯರ ಸಮಾನತೆಯ ಪರವಾಗಿ ಇರಲಿಲ್ಲ. 1965ರವರೆಗೂ ಅಮೆರಿಕದಲ್ಲಿ ಕಪ್ಪು ಜನರಿಗೆ ಮತ ನೀಡುವ ಅಧಿಕಾರ ಇರಲಿಲ್ಲ.

ಜನರಿಗಿಂತ ಹೆಚ್ಚು ಗನ್

ಪ್ರಸ್ತುತ ಅಮೆರಿಕದಲ್ಲಿ ಆ ದೇಶದ ಜನಸಂಖ್ಯೆಗಿಂತಲೂ ಹೆಚ್ಚು ಗನ್‌ಗಳಿವೆ. 36 ಕೋಟಿ ಜನರಿರುವ ಅಮೆರಿಕದಲ್ಲಿ ದಿನಕ್ಕೆ ಸರಾಸರಿ 120 ಜನರು ಗುಂಡೇಟಿನಿಂದ ಸಾಯುತ್ತಾರೆ. 140 ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ಭಾರತದಲ್ಲಿ 4 ಲಕ್ಷ ಜನರು ಜೈಲಿನಲ್ಲಿದ್ದರೆ, ಅಮೆರಿಕದಲ್ಲಿ ಸುಮಾರು 20 ಲಕ್ಷ ಜನರು ಜೈಲಿನಲ್ಲಿದ್ದಾರೆ. ಅಮೆರಿಕದಲ್ಲಿ ದುಡ್ಡಿಲ್ಲದಿದ್ದರೆ ಜೈಲುಪಾಲಾಗಬೇಕಾದಂತಹ ಪರಿಸ್ಥಿತಿ ಇದೆ.

ಯುದ್ಧದಿಂದ ಲಾಭ

ಇಂತಹ ಅಮೆರಿಕದ ಪರಿಸ್ಥಿತಿಯೇ ಯುದ್ಧದ ಮೂಲ. ಯುದ್ಧದಿಂದ ಅಮೆರಿಕಕ್ಕೆ ಅಪಾರ ಲಾಭವಿದೆ. ಪ್ರಸ್ತುತ ಈಗ ಭಾರತ ಮತ್ತು ಚೀನಾಗಳು ಗಡಿ ವಿವಾದದ ವಿಷಯದಲ್ಲಿ ಮಾತುಕತೆ ನಡೆಸಿ ಶಾಂತಿಯುತ ಒಪ್ಪಂದ ಮಾಡಿಕೊಳ್ಳುತ್ತಿರುವುದು ಅಮೆರಿಕಕ್ಕೆ ಇಷ್ಟವಿಲ್ಲ. ಚೈನಾ ತೈವಾನ್‌ಗಳು ಶಾಂತಿಯುತ ಮಾತುಕತೆಗೆ ಮುಂದಾಗುವುದು ಕೂಡ ಅಮೆರಿಕಕ್ಕೆ ಇಷ್ಟವಿಲ್ಲ. ಉಕ್ರೇನ್ ರಷ್ಯಾಗಳು ಶಾಂತಿಯುತ ಮಾತುಕತೆಯಿಂದ ವಿವಾದ ಬಗೆಹರಿಸಿಕೊಳ್ಳಬಹುದಿತ್ತು. ಅದು ಅಮೆರಿಕಕ್ಕೆ ಬೇಕಿಲ್ಲ. ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯವು ಇಸ್ರೇಲ್ ಪ್ಯಾಲಿಸ್ಟೇನ್‌ನಲ್ಲಿ ನಡೆಸಿರುವ ಯುದ್ಧದಲ್ಲಿ ಹೆಂಗಸರು ಮತ್ತು ಮಕ್ಕಳು ಸೇರಿದಂತೆ 30 ಸಾವಿರಕ್ಕೂ ಹೆಚ್ಚು ಜನ ಸತ್ತಿದ್ದರೂ ಅಮೆರಿಕವು ಇಸ್ರೇಲ್ ಅನ್ನು ಬೆಂಬಲಿಸುತ್ತಿದೆ. ಅಮೆರಿಕದ ಬೆಂಬಲವಿಲ್ಲದೇ ಇಸ್ರೇಲ್ ನಾಲ್ಕು ದಿನವೂ ಯುದ್ಧ ನಡೆಸಲು ಸಾಧ್ಯವಿಲ್ಲ ಎಂದು ಡಾ.ಅಮರ್ ಅವರು ವಿವರವಾಗಿ ಮಾತನಾಡಿ ಅಮೆರಿಕ ಇತಿಹಾಸ ಮತ್ತು ವರ್ತಮಾನಕ್ಕೆ ಸಂಬಂಧಿಸಿದ ವಿವರಗಳನ್ನು ಹಂಚಿಕೊಂಡರು.

ಕಾರ್ಪೋರೇಟ್ ಕಂಪನಿಗಳ ದೀರ್ಘಾವಧಿ ಅಧಿಪತ್ಯಕ್ಕಾಗಿ ಯುದ್ಧ: ವಸಂತ್

ಜಾಗತಿಕ ವಿದ್ಯಮಾನಗಳ ಕುರಿತ ಜನಪ್ರಿಯ ಅಂಕಣಕಾರ, ಲೇಖಕ ಎನ್.ಕೆ.ವಸಂತರಾಜ ಅವರು ಮಾತನಾಡಿ ಈ ಮೇಲಿನ ಮಾತುಗಳಿಗೆ ಪೂರಕವಾಗಿ ಮತ್ತಷ್ಟು ಮಾಹಿತಿಗಳನ್ನು ಹಂಚಿಕೊಂಡರು. ಬಂಡವಾಳಶಾಹಿ ಕಾರ್ಪೋರೇಟ್ ಕಂಪನಿಗಳು ವಿಶ್ವದ ಮೇಲೆ ತಮ್ಮ ದೀರ್ಘಾವಧಿ ಅಧಿಪತ್ಯವನ್ನು ಕಾಪಾಡಿಕೊಳ್ಳಲು ಯುದ್ಧಗಳನ್ನು ನಡೆಸಲಾಗುತ್ತಿದೆ.

ಯುದ್ಧದ ಭಯ ಹುಟ್ಟಿಸಿ ಶಸ್ತ್ರಾಸ್ತ್ರ ಮಾರಾಟ

ಯುದ್ಧದಿಂದ ಕಾರ್ಪೋರೇಟ್ ಕಂಪನಿಗಳಿಗೆ ಲಾಭ ಇದೆ. ಯುದ್ಧದಿಂದ ಶಸ್ತ್ರಾಸ್ತ್ರಗಳಿಗೆ ಬೇಡಿಕೆ ಬರುತ್ತದೆ. ಹಳೇ ಸ್ಟಾಕ್ ಖಾಲಿಯಾಗುತ್ತವೆ. ಯುದ್ಧದ ಭಯ ಹುಟ್ಟಿಸಿ ಇನ್ನಷ್ಟು ದೇಶಗಳು ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಪ್ರೇರೇಪಿಸಬಹುದು. ಬರೀ ಶಸ್ತ್ರಾಸ್ತ್ರಗಳಲ್ಲ, ಆಹಾರ ಪದಾರ್ಥಗಳು, ವಾಹನಗಳು ಇತರೆ ಪೂರಕ ವಸ್ತುಗಳಿಗೂ ಬೇಡಿಕೆ ಬರುತ್ತದೆ. ಯುದ್ಧಗಳಿಂದ ಮಿಲಿಟರಿ ತಂತ್ರಜ್ಞಾನದ ಆಧುನೀಕರಣಕ್ಕೆ ಬೆಂಬಲ ಸಿಗುತ್ತದೆ.

ಯುದ್ಧಭೂಮಿ–ಶಸ್ತ್ರಾಸ್ತ್ರಗಳ ಪ್ರಯೋಗಶಾಲೆ

ಯುದ್ಧಗಳಲ್ಲಿ ಹೊಸ ಶಸ್ತ್ರಾಸ್ತ್ರ ಸಾಮರ್ಥ್ಯದ ಪರೀಕ್ಷೆ ಸಾಧ್ಯವಾಗುತ್ತದೆ. ಇತ್ತೀಚೆಗಿನ ಯುದ್ಧಗಳಲ್ಲಿ ಇತ್ತೀಚೆಗೆ ರೂಪಿಸಲಾಗಿರುವ ಸೂಪರ್ ಸಾನಿಕ್ ಮಿಸ್ಸೈಲ್‌ಗಳು, ಡ್ರೋಣ್ ಮುಂತಾದವುಗಳ ಪರಿಣಾಮಕಾರಿತ್ವದ ಪರೀಕ್ಷೆ ಮಾಡಲಾಯಿತು. ಇಂತಹ ಪ್ರಯೋಗಗಳಾದ ಮೇಲೆ ಬರಿಯ ಫೈಟರ್ ವಿಮಾನಗಳಿಂದ ರಕ್ಷಣೆ ಸಾಧ್ಯವಿಲ್ಲ, ಕೃತಕ ಬುದ್ಧಿಮತ್ತೆ ಆಧಾರಿತ ಶಸ್ತ್ರಾಸ್ತ್ರ(ಎಐಇಎ)ಗಳಂತಹ ಆಧುನಿಕ ಶಸ್ತ್ರಾಸ್ತ್ರ ಕೊಳ್ಳಿ ಎಂದು ವಿವಿಧ ದೇಶಗಳ ಮೇಲೆ ಪ್ರಭಾವ ಬೀರಬಹುದು. ಇಸ್ರೇಲ್‌ನ, ನೂರಾರು ಕ್ಷಿಪಣಿಗಳನ್ನು ಏಕಕಾಲಕ್ಕೆ ಉಡಾಯಿಸುವ ಸಾಧನಗಳು, 'ಐರನ್ ಡೂಮ್' ಅನ್ನು ಸೋಲಿಸಬಹುದು ಎನ್ನಲಾಗಿದೆ. ಇತ್ತೀಚೆಗೆ ಭಾರತವು ಅಮೆರಿಕದಿಂದ ಆಧುನಿಕ ಡ್ರೋಣ್‌ಗಳನ್ನು ತರಿಸಿಕೊಳ್ಳಲು ಆದೇಶ ನೀಡಿದೆ. ಯುದ್ದದಿಂದ ತೈಲ ಮಾರುಕಟ್ಟೆ ಮೇಲೆ ಹಿಡಿತ ಸಿಗುತ್ತದೆ. ತೈಲ ಬೆಲೆಗಳನ್ನು ಏರಿಸಬಹುದು.

ಅಮೆರಿಕದ 'ಯುದ್ಧಕೋರ' ಬಜೆಟ್

ಇತ್ತೀಚೆಗೆ ಅಮೆರಿಕದ ಅಧ್ಯಕ್ಷ ಬೈಡನ್ ಅಮೆರಿಕದಲ್ಲಿ 816.7 ಬಿಲಿಯನ್ ಡಾಲರ್ ಮಿಲಿಟರಿ ಬಜೆಟ್ಟಿಗೆ ಅನುಮೋದನೆ ಪಡೆದುಕೊಂಡರು. ಅದರಲ್ಲಿ ಸುಮಾರು 379 ಬಿಲಿಯನ್ ಡಾಲರುಗಳಷ್ಟು ಬಜೆಟ್ ಕೇವಲ ಶಸ್ತ್ರಾಸ್ತ್ರ ಉತ್ಪಾದಿಸುವ 5 ಕಾರ್ಪೋರೇಟ್ ಕಂಪನಿಗಳಿಗೆ ಹೋಗುತ್ತದೆ. ಇತ್ತೀಚೆಗೆ ಪ್ಯಾಲಿಸ್ಟೀನ್ ಬೆಂಬಲಕ್ಕೆ ಇರಾನ್ ಬಂದ ಮೇಲೆ ಅಮೆರಿಕವು ಪೆಂಟಗಾನ್‌ಗೆ 14 ಬಿಲಿಯನ್ ಡಾಲರ್ ಬಜೆಟ್ ಅನ್ನು ನೀಡಿದೆ.

ಯುದ್ಧ ವೈಯುಕ್ತಿಕ ಒಲವು ನಿಲುವು ಅಲ್ಲ



ಅಮೆರಿಕದ ಯುದ್ಧಕೋರತನವು ಬೈಡನ್‌ನ ತಿಕ್ಕಲುತನ ಅಲ್ಲ. ಅಥವಾ ಟ್ರಂಪ್ ಅಥವಾ ಯಾವುದೆ ಮುಖಂಡರ ವೈಯುಕ್ತಿಕ ವಿಷಯ, ನಿಲುವೂ ಅಲ್ಲ. ಅಮೆರಿಕದ ಶಸ್ತ್ರಾಸ್ತ್ರ ಉತ್ಪಾದಕ ಕಾರ್ಪೋರೇಟ್‌ಗಳ ಲಾಭವು ಯುದ್ಧಗಳಿಂದ ಹೇಗೆ ಹೆಚ್ಚಳವಾಗುತ್ತದೆ ಎಂಬ ಅಧ್ಯಯನವನ್ನು ನಡೆಸಲಾಗಿದೆ. 1900ರಿಂದ ಜಾಗತಿಕ ಮಹಾ ಆರ್ಥಿಕ ಬಿಕ್ಕಟ್ಟು ಆರಂಭವಾದ 1929ರ ನಡುವಿನ ಅವಧಿ ಮತ್ತು ಎರಡನೇ ಮಹಾಯುದ್ಧ ಮುಗಿದ ನಂತರದ ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**